ಮಂಗಳವಾರ, ಜುಲೈ 27, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 208 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,852	15,820	₹49,370 (ಬೆಂಗಳೂರು)	₹69,400 (ಬೆಂಗಳೂರು)	74.42

ಹಿರಿಯ ನಟಿ ಜಯಂತಿ ಇನ್ನಿಲ್ಲ



ಬೆಂಗಳೂರು: ದಕ್ಷಿಣ ಭಾರತ ಚಿತ್ರರಂಗದ ಹಿರಿಯ ನಟಿ ಜಯಂತಿ (76) ಸೋಮವಾರ ನಸುಕಿನಲ್ಲಿ ನಗರದ ಬನಶಂಕರಿಯ ತಮ್ಮ ನಿವಾಸದಲ್ಲಿ ನಿಧನರಾದರು. ಅಸ್ತಮಾದಿಂದ ಬಳಲುತ್ತಿದ್ದ ಅವರು ಎರಡು ಬಾರಿ ಆಸ್ಪತ್ರೆಗೆ ದಾಖಲಾಗಿದ್ದರು. ಅದರಿಂದ ಚೇತರಿಸಿಕೊಂಡಿದ್ದರೂ ಕೆಲವು ವಯೋಸಹಜ ಸಮಸ್ಯೆಗಳಿಂದ ಬಳಲುತ್ತಿದ್ದರು.

ಅವರಿಗೆ ಪುತ್ರ ಕೃಷ್ಣಕುಮಾರ್ ಇದ್ದಾರೆ. ಚಿತ್ರರಂಗದ ಪ್ರಮುಖರು, ರಾಜಕೀಯ ಮುಖಂಡರು ಅಂತಿಮ ನಮನ ಸಲ್ಲಿಸಿದರು. ಬಳಿಕ ಬನಶಂಕರಿಯ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಿತು.

ನುಡಿ ನಮನ 9

ತುಟ್ಟಿಭತ್ಯೆ ಹೆಚ್ಚಿಸಿ ಆದೇಶ

ಬೆಂಗಳೂರು: ಇದೇ ಜುಲೈ 1ರಿಂದ ಅನ್ವಯವಾಗುವಂತೆ ರಾಜ್ಯ ಸರ್ಕಾರಿ ನೌಕರರಿಗೆ ಮೂಲವೇತನದ ಶೇ 10.25ರಷ್ಟು ತುಟ್ಟಿಭತ್ಯೆ ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಿದೆ.

10

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಂಪುಟ ವಿಸರ್ಜನೆ • ಜೋಶಿ, ಸಂತೋಷ್, ನಿರಾಣಿ, ರವಿ ಹೆಸರು ಮುಂಚೂಣಿಗೆ

ಬಿಎಸ್‌ವೈ 'ಶಿಕಾರಿ': ಯಾರಿಗೆ ಗರಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ರಾಜೀನಾಮೆಯೊಂದಿಗೆ ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆಯ ಕಸರತ್ತಿನ ಮೊದಲ ಅಂಕಕ್ಕೆ ತೆರೆಬಿದ್ದಿದೆ. ಆದರೆ, ನೂತನ ಮುಖ್ಯಮಂತ್ರಿ ಯಾರು ಎಂಬ ಪ್ರಶ್ನೆ ಈಗ ಎದ್ದು ನಿಂತಿದೆ. ಗಾದಿ ಏರಲು ಹಲವರು ತೆರೆಮರೆಯಲ್ಲಿ ಕಸರತ್ತು ನಡೆಸುತ್ತಿದ್ದು, ಬಿಜೆಪಿ ವರಿಷ್ಠರು ಎಲ್ಲರ ಲೆಕ್ಕಾಚಾರವನ್ನೂ ಬದಿಗೆ ಸರಿಸಿ ಅಚ್ಚರಿಯ ಹೆಸರು ಪ್ರಕಟಿಸುವ ಸಾಧ್ಯತೆಯೂ ಇದೆ.

ರಾಜೀನಾಮೆ ನೀಡದಂತೆ ವರಿಷ್ಠರಿಂದ ಸಂದೇಶ ಬರಬಹುದು ಎಂಬ ಕುತೂಹಲ ಉಳಿಸಿದ್ದ ಯಡಿಯೂರಪ್ಪ, ತಮ್ಮ ಸರ್ಕಾರದ ಎರಡನೇ ವರ್ಷದ ಸಂಭ್ರಮಾಚರಣೆಯಲ್ಲೇ ಪದತ್ಯಾಗದ ನಿರ್ಧಾರ ಪ್ರಕಟಿಸಿದರು. ಬಳಿಕ ರಾಜಭವನಕ್ಕೆ ತೆರಳಿ ರಾಜೀನಾಮೆ ಸಲ್ಲಿಸಿದರು. ಅದನ್ನು ಅಂಗೀಕರಿಸಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್, ಇಡೀ ಸಂಪುಟವನ್ನೂ ವಿಸರ್ಜಿಸಿದ್ದಾರೆ.

ಈ ಬೆಳವಣಿಗೆಗಳ ಬೆನ್ನಲ್ಲೇ ರಾಜ್ಯ ಸರ್ಕಾರದ ಹೊಸ ನಾಯಕನ ಆಯ್ಕೆಗೆ ಬಿಜೆಪಿ ವರಿಷ್ಠರು ಪ್ರಕ್ರಿಯೆ ಆರಂಭಿಸಿದ್ದಾರೆ. ಜಾತಿ, ಪ್ರಾದೇಶಿಕತೆ, ಪ್ರಭಾವ, ಹೈಕಮಾಂಡ್ ಜತೆಗಿರುವ ನಂಟು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಜತೆಗಿನ ಒಡನಾಟ ಸೇರಿದಂತೆ ಹಲವು ವಿಷಯಗಳು ಹೊಸ ಮುಖ್ಯಮಂತ್ರಿಯ ಆಯ್ಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಇವುಗಳ ಆಧಾರದಲ್ಲೇ ಹಲವರ ಹೆಸರುಗಳನ್ನು ಪರಿಶೀಲನೆಗೆ ಎತ್ತಿಕೊಂಡು, ಅಳೆದು, ತೂಗುವ ಕೆಲಸ ಮಾಡುತ್ತಿರುವ ಬಿಜೆಪಿ ವರಿಷ್ಠರು ಸದ್ಯವೇ ತಮ್ಮ ಆಯ್ಕೆಯನ್ನು ಪ್ರಕಟಿಸುವ ಸಾಧ್ಯತೆ ಇದೆ.

ಸಂಘ ಪರಿವಾರದ ಮೂಲದವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಬೇಕೆಂಬ ವಾದ ಒಂದು ವಲಯದಲ್ಲಿದೆ.

5ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4,5



ಸರ್ಕಾರ ಎರಡು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ವಿಧಾನಸೌಧದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಭಾವುಕರಾದರು –ಪ್ರಜಾವಾಣಿ ಚಿತ್ರ

ಕಣ್ಣೀರಿಟ್ಟ ಬಿಎಸ್‌ವೈ

ಬೆಂಗಳೂರು: 'ಕಣ್ಣುಗಳು ಕೆಂಪಗಾಗಿದ್ದವು. ಮುಖದಲ್ಲಿ ನಗುವಿನ ಸುಳಿವೇ ಇರಲಿಲ್ಲ. ತಮ್ಮ ಸುದೀರ್ಘ ರಾಜಕೀಯ ಜೀವನ ಯಾನದ ಒಂದೊಂದೇ ಘಟನೆ ನೆನಪುಗಳ ಪದರಗಳನ್ನು ಬಿಡಿಸುತ್ತಾ ಭಾವುಕರಾದರು, ಗದ್ಗದಿತರಾದರು, ಮನದಾಳದ ನೋವು ತಡೆಯಲಾಗದೇ ಕೊನೆಗೆ ಕಣ್ಣೀರು ಧುಮ್ಮಿಕ್ಕಿತು . . .'

ಇದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಕೊನೆಯ ಮತ್ತು ವಿದಾಯದ ಭಾಷಣದ ಯಥಾವತ್ತು ದೃಶ್ಯ.

5

ಯಾರಿಗೆ ಒಲಿಯಲಿದೆ ಪಟ್ಟ

ನಾಯಕತ್ವ ಬದಲಾವಣೆಯ ಕೂಗು ಎದ್ದ ದಿನಗಳಿಂದಲೂ ಸಂಭವನೀಯ ಮುಖ್ಯಮಂತ್ರಿ ಎಂದು ಹಲವರ ಹೆಸರುಗಳು ಚಾಲ್ತಿಯಲ್ಲಿವೆ. ವರಿಷ್ಠರ ಕೃಪಾಕಟಾಕ್ಷ ಯಾರಿಗೆ ಒಲಿಯಬಹುದು ಎಂಬ ಕುತೂಹಲ ಇದೆ.

ವೀರಶೈವ-ಲಿಂಗಾಯತ: ಮುರುಗೇಶ ನಿರಾಣಿ, ಜಗದೀಶ ಶೆಟ್ಟರ್, ಶಿವಕುಮಾರ್ ಉದಾಸಿ, ಬಸವರಾಜ ಬೊಮ್ಮಾಯಿ, ಅರವಿಂದ ಬೆಲ್ಲದ.

5ನೇ ಪುಟ ನೋಡಿ

ವೀಕ್ಷಕರಾಗಿ ಪ್ರಧಾನ್, ಅರುಣ್ ಸಿಂಗ್

ನವದೆಹಲಿ: ರಾಜ್ಯದ ಮುಂದಿನ ಮುಖ್ಯಮಂತ್ರಿ ಆಯ್ಕೆ ಹಿನ್ನೆಲೆಯಲ್ಲಿ ಇಬ್ಬರು ವೀಕ್ಷಕರನ್ನು ರಾಜ್ಯಕ್ಕೆ ಕಳುಹಿಸಲು ಬಿಜೆಪಿ ಹೈಕಮಾಂಡ್ ನಿರ್ಧರಿಸಿದೆ.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರನ್ನು ವೀಕ್ಷಕರನ್ನಾಗಿ ನೇಮಿಸಲಾಗಿದೆ. ಈ ಇಬ್ಬರೂ ರಾಜ್ಯಕ್ಕೆ ಭೇಟಿ ನೀಡುವುದು ಯಾವಾಗ ಎಂಬುದನ್ನು ಇನ್ನಷ್ಟೇ ನಿಗದಿಪಡಿಸಬೇಕಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಸಭೆಯಲ್ಲಿ ನಿರ್ಧಾರ: ರಾಜ್ಯದ ಮುಂದಿನ ಮುಖ್ಯಮಂತ್ರಿಯ ಆಯ್ಕೆ ಕುರಿತು ಬಿಜೆಪಿ ಸಂಸದೀಯ ಮಂಡಳಿ ಸಭೆ ನಿರ್ಧರಿಸಲಿದೆ ಎಂದು ಅರುಣ್ ಸಿಂಗ್ ಹೇಳಿದರು. ಸಭೆಯ ನಂತರ ಪಕ್ಷದ ವೀಕ್ಷಕರು ಬೆಂಗಳೂರಿಗೆ ತೆರಳಿ, ಶಾಸಕರು ಮತ್ತು ಮುಖಂಡರೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಕೇಂದ್ರಕ್ಕೆ ವರದಿ ಸಲ್ಲಿಸಲಿದ್ದಾರೆ' ಎಂದು ಅವರು ತಿಳಿಸಿದರು.

'ಬಿಜೆಪಿ ತೊಲಗಿದಾಗಲೇ ರಾಜ್ಯಕ್ಕೆ ನೆಮ್ಮದಿ'



'ಯಡಿಯೂರಪ್ಪನವರ ರಾಜೀನಾಮೆಗೆ ಕಾರಣ ಅವರ ವಯಸ್ಸೇ ಅಥವಾ ಸರ್ಕಾರದ ಭ್ರಷ್ಟಾಚಾರವೇ ಎನ್ನುವುದನ್ನು ಬಿಜೆಪಿ ಸ್ಪಷ್ಟಪಡಿಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ಬಿಜೆಪಿ ಎನ್ನುವುದು ಭ್ರಷ್ಟಾಚಾರ ಜಾರಿ ಪಾರ್ಟಿ. ಯಡಿಯೂರಪ್ಪನವರ ಭ್ರಷ್ಟಾಚಾರದ ಬಗ್ಗೆ ಅವರ ಪಕ್ಷದ ಶಾಸಕರೇ ಬಾಯ್ತುಂಬ ಮಾತನಾಡಿದ್ದಾರೆ. ಯಡಿಯೂರಪ್ಪನವರು ಹೋದರೂ, ಇನ್ನೊಬ್ಬರು ಬಂದರೂ ಅದರ ಭ್ರಷ್ಟತೆಯ ಆತ್ಮ ಬದಲಾಗುವುದಿಲ್ಲ. ದುಡ್ಡಿನ ಬಲದಿಂದ ನಡೆಸಿದ್ದ ಆಪರೇಷನ್ ಕಮಲ ಎಂಬ ಅನೈತಿಕ ಹಾದಿಯಿಂದ ಅಧಿಕಾರಕ್ಕೆ ಬಂದಿರುವ ಬಿಜೆಪಿ ಸರ್ಕಾರ ತೊಲಗಿದಾಗಲೇ ರಾಜ್ಯದ ಜನತೆಗೆ ನೆಮ್ಮದಿ' ಎಂದೂ ಹೇಳಿದರು.

ತೆರಿಗೆ ಸಂಗ್ರಹ ಶೇ 86ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಕೇಂದ್ರ ಸರ್ಕಾರದ ತೆರಿಗೆ ಸಂಗ್ರಹ ಪ್ರಮಾಣದಲ್ಲಿ ಶೇ 86 ರಷ್ಟು ಏರಿಕೆ ಆಗಿದೆ ಎಂದು ಕೇಂದ್ರವು ಸಂಸತ್ತಿಗೆ ತಿಳಿಸಿದೆ. ಈ ಅವಧಿಯಲ್ಲಿ ಒಟ್ಟು ₹ 5.57 ಲಕ್ಷ ಕೋಟಿ ತೆರಿಗೆ ಮೂಲಕ ಸಂಗ್ರಹ ಆಗಿದೆ.

ನೇರ ತೆರಿಗೆ ಮೂಲಕ ಸಂಗ್ರಹ ಆಗಿರುವ ಮೊತ್ತವು ₹ 2.46 ಲಕ್ಷ ಕೋಟಿ, ಪರೋಕ್ಷ ತೆರಿಗೆ ಮೂಲಕ ಸಂಗ್ರಹವಾಗಿರುವ ಮೊತ್ತವು ₹ 3.11 ಲಕ್ಷ ಕೋಟಿ.

'ಹಿಂದಿನ ವರ್ಷದ ಇದೇ ಅವಧಿಯಲ್ಲಿ ಆಗಿದ್ದ ನೇರ ತೆರಿಗೆ ಸಂಗ್ರಹ ₹ 1.17 ಲಕ್ಷ ಕೋಟಿ. ನೇರ ತೆರಿಗೆ ಸಂಗ್ರಹದಲ್ಲಿ ಶೇ 109.3ರಷ್ಟು ಏರಿಕೆ ಕಂಡುಬಂದಿದೆ ಹಿಂದಿನ ವರ್ಷ ಈ ಅವಧಿಯಲ್ಲಿ ಆಗಿದ್ದ ಪರೋಕ್ಷ ತೆರಿಗೆ ಸಂಗ್ರಹವು ₹ 1.82 ಲಕ್ಷ ಕೋಟಿ. ಪರೋಕ್ಷ ತೆರಿಗೆ ಸಂಗ್ರಹದಲ್ಲಿ ಶೇ 70.3ರಷ್ಟು ಏರಿಕೆ ದಾಖಲಾಗಿದೆ' ಎಂದು ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಲೋಕಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಚಿಕ್ಕಮ್ಮನ ಮಗನನ್ನೇ ಕೊಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ನಗರ ಠಾಣೆ ವ್ಯಾಪ್ತಿಯಲ್ಲಿ ವಿನೋದ್‌ಕುಮಾರ್ (31) ಎಂಬುವರನ್ನು ಸೋಮವಾರ ಕೊಲೆ ಮಾಡಲಾಗಿದ್ದು, ಈ ಸಂಬಂಧ ಆರೋಪಿ ಅರುಣ್‌ಕುಮಾರ್ (34) ಎಂಬಾತನನ್ನು ಬಂಧಿಸಲಾಗಿದೆ.

'ರಾಣಾಸಿಂಗ್‌ಪೇಟೆ ನಿವಾಸಿ ವಿನೋದ್ ಹಾಗೂ ಅರುಣ್ ಇಬ್ಬರೂ ಸಂಬಂಧಿಕರು. ಸಾಲದ ವಿಚಾರವಾಗಿ ಗಲಾಟೆ ನಡೆದು ಕೊಲೆ ಆಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಅರುಣ್, ತನ್ನ ಚಿಕ್ಕಮ್ಮನ ಮಗನಾದ ವಿನೋದ್ ಅವರಿಗೆ ಲಕ್ಷಾಂತರ ರೂಪಾಯಿ ಸಾಲ ನೀಡಿದ್ದ. ಅವಿವಾಹಿತರಾಗಿದ್ದ ವಿನೋದ್, ಹಸು ಸಾಕುತ್ತಿದ್ದರು. ಗಾರೆ ಕೆಲಸ ಸಹ ಮಾಡುತ್ತಿದ್ದರು. ಹಲವು ವರ್ಷವಾದರೂ ವಿನೋದ್ ಸಾಲ ವಾಪಸು ಕೊಟ್ಟಿರಲಿಲ್ಲ.'

'ಸಾಲದ ವಿಚಾರವಾಗಿ ಸೋಮವಾರ ಬೆಳಿಗ್ಗೆ ಜಗಳವಾಗಿತ್ತು. ಇಬ್ಬರೂ ಠಾಣೆ ಮೆಟ್ಟಿಲೇರಿದ್ದರು. ಪೊಲೀಸರು ಇಬ್ಬರಿಂದಲೂ ಮುಚ್ಚಳಿಕೆ ಬರೆಸಿಕೊಂಡು ಎಚ್ಚರಿಕೆ ನೀಡಿ ಕಳುಹಿಸಿದ್ದರು' ಎಂದೂ ಮೂಲಗಳು ತಿಳಿಸಿವೆ.

'ಸೋಮವಾರ ಮಧ್ಯಾಹ್ನ ಮನೆ ಬಳಿ ಪುನಃ ಗಲಾಟೆ ಆಗಿತ್ತು. ಇದೇ ಸಂದರ್ಭದಲ್ಲೇ ಆರೋಪಿ ಅರುಣ್, ಚಾಕುವಿನಿಂದ ವಿನೋದ್ ಅವರಿಗೆ ಇರಿದಿದ್ದ. ತೀವ್ರ ಗಾಯಗೊಂಡು ವಿನೋದ್ ಸ್ಥಳದಲ್ಲೇ ಮೃತಪಟ್ಟರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಹಳಿ ಮೇಲೆ ಮುಂಡ, ಲಾರಿನಲ್ಲಿ ರುಂಡ ಪತ್ತೆಯಾಗಿದ್ದ ಪ್ರಕರಣ • ರೈಲ್ವೆ ಪೊಲೀಸರ ತನಿಖೆ

ಅತ್ತೆಯನ್ನೇ ಕೊಲ್ಲಿಸಿದ ಸೊಸೆ: ಬಿಎಂಟಿಸಿ ಚಾಲಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು ಬಳಿ ರೈಲು ಹಳಿ ಮೇಲೆ ಮುಂಡ ಹಾಗೂ ಬಾಗಲಕೋಟೆ ಜಿಲ್ಲೆಯ ಇಳಕಲ್‌ನಲ್ಲಿ ಲಾರಿಯಲ್ಲಿ ರುಂಡ ಪತ್ತೆಯಾಗಿದ್ದ ಪ್ರಕರಣವನ್ನು ಭೇದಿಸಿರುವ ರೈಲ್ವೆ ಪೊಲೀಸರು, ನಿಂಗಮ್ಮ (70) ಎಂಬುವರನ್ನು ಕೊಂದಿರುವ ಆರೋಪದಡಿ ಬಿಎಂಟಿಸಿ ಚಾಲಕ ಎಂ.ಬಿ. ಬಾಲಚಂದ್ರ (42) ಎಂಬಾತನನ್ನು ಬಂಧಿಸಿದ್ದಾರೆ.

'ಮಂಡ್ಯ ಜಿಲ್ಲೆಯ ತೂಬಿನಕೆರೆ ಗ್ರಾಮದ ನಿಂಗಮ್ಮ ಅವರನ್ನು ಕೊಂದು ಸಾಕ್ಷಿ ನಾಶ ಮಾಡಲು ರುಂಡವನ್ನು ಲಾರಿಯಲ್ಲಿ ಹಾಕಿದ್ದ ಪ್ರಕರಣದಲ್ಲಿ ಬಾಲಚಂದ್ರನನ್ನು ಬಂಧಿಸಲಾಗಿದೆ. ಮೃತ ನಿಂಗಮ್ಮ ಅವರ ಸೊಸೆಯೂ ಆಗಿರುವ ಪ್ರಮುಖ ಆರೋಪಿ ಲತಾ ತಲೆಮರೆಸಿಕೊಂಡಿದ್ದಾಳೆ' ಎಂದು ರೈಲ್ವೆ ಎಡಿಜಿಪಿ ಭಾಸ್ಕರ್ ರಾವ್ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಹೇಳಿದರು.


'ಬೆಂಗಳೂರು ಗ್ರಾಮಾಂತರ ರೈಲ್ವೆ ಠಾಣೆ ವ್ಯಾಪ್ತಿಯ ನಿಡವಂದ ಮತ್ತು ಹಿರೇಹಳ್ಳಿ ನಿಲ್ದಾಣಗಳ ನಡುವಿನ ಹಳಿ ಮೇಲೆ ಜುಲೈ 20ರಂದು ಮುಂಡ ಸಿಕ್ಕಿತ್ತು. ಗುರುತು ಪತ್ತೆಯಾಗಿರಲಿಲ್ಲ. ಮುಂಡದ ಫೋಟೊಗಳನ್ನು ಎಲ್ಲ ಠಾಣೆಗಳಿಗೆ ಕಳುಹಿಸಲಾಗಿತ್ತು. ಇದರ ನಡುವೆಯೇ ನಿಂಗಮ್ಮ ಅವರ ಮಗ ಸತೀಶ್, ತಾಯಿ ಕಾಣೆಯಾದ ಬಗ್ಗೆ ತುಮಕೂರು ಠಾಣೆಗೆ ಜುಲೈ 23ರಂದು ದೂರು ನೀಡಿದ್ದರು. ಹಳಿ ಮೇಲೆ ವೃದ್ಧೆಯೊಬ್ಬರ ಮುಂಡ ಸಿಕ್ಕಿರುವ ಕುರಿತು ಪೊಲೀಸರಿಂದ ಮಾಹಿತಿ ಸಿಗುತ್ತಿದ್ದಂತೆ ಮಗ ಸತೀಶ್, ತುಮಕೂರು ಜಿಲ್ಲಾ ಆಸ್ಪತ್ರೆಗೆ ಬಂದು ನೋಡಿದ್ದರು. ವೃದ್ಧೆಯ ಎಡಗೈಯಲ್ಲಿದ್ದ ಹಚ್ಚೆಗಳನ್ನು ಗುರುತಿಸಿದ್ದ ಮಗ, ನಿಂಗಮ್ಮ ಅವರದ್ದೇ ಮುಂಡವೆಂದು ಹೇಳಿದ್ದರು' ಎಂದೂ ತಿಳಿಸಿದರು.

ರುಂಡ ಸಿಗುತ್ತಿದ್ದಂತೆ ತನಿಖೆ ಚುರುಕು; 'ಇದೊಂದು ಅಸ್ವಾಭಾವಿಕ ಸಾವೆಂದು ಆರಂಭದಲ್ಲಿ ತಿಳಿಯಲಾಗಿತ್ತು. ಆದರೆ, ತಮಿಳುನಾಡಿನಿಂದ ಬೆಂಗಳೂರು ಮಾರ್ಗವಾಗಿ ಇಳಕಲ್‌ಗೆ ಗ್ರಾನೈಟ್ ಹೊತ್ತೊಯ್ದಿದ್ದ ಲಾರಿಯಲ್ಲಿ ರುಂಡ ಪತ್ತೆಯಾಗಿತ್ತು. ರುಂಡದ ಫೋಟೊ ಗಮನಿಸಿದಾಗ, ನಿಂಗಮ್ಮ ಅವರದ್ದು ಎಂಬುದು ತಿಳಿಯಿತು. ಕೊಲೆ ಎಂಬುದು ಖಾತ್ರಿಯಾಗಿ ತನಿಖೆ ಚುರುಕುಗೊಳಿಸಲಾಗಿತ್ತು' ಎಂದೂ ಹೇಳಿದರು.

ಪಂಚಾಯಿತಿ ಸೇರಿಸಿ ಪರಿಹಾರ ಪಡೆದಿದ್ದ ವೃದ್ಧೆ; 'ನಿಂಗಮ್ಮ ಅವರಿಗೆ ಇಬ್ಬರು ಪುತ್ರರು. ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಪುತ್ರ ತೀರಿಕೊಂಡಿದ್ದು, ಅವರ ಪತ್ನಿಯೇ ಆರೋಪಿ ಲತಾ. ಆಕೆಗೆ ಇಬ್ಬರು ಮಕ್ಕಳಿದ್ದಾರೆ. ಪತಿ ತೀರಿಕೊಂಡ ನಂತರ, ಅತ್ತೆಯನ್ನು ಚೆನ್ನಾಗಿ ನೋಡಿಕೊಂಡಿರಲಿಲ್ಲ. ಹಿರಿಯರ ಸಮ್ಮುಖದಲ್ಲಿ ಪಂಚಾಯಿತಿ ಸೇರಿಸಿದ್ದ ನಿಂಗಮ್ಮ, ಜೀವನಾಂಶ ಕೊಡಿಸುವಂತೆ ಕೋರಿದ್ದರು. 'ಅತ್ತೆಗೆ ₹ 2 ಲಕ್ಷ ಪರಿಹಾರ ಕೊಡಬೇಕು' ಎಂಬುದಾಗಿ ಹಿರಿಯರು ಸೊಸೆಗೆ ತಾಕೀತು ಮಾಡಿದ್ದರು. ಆರಂಭದಲ್ಲಿ ₹ 50 ಸಾವಿರ ಮಾತ್ರ ಕೊಟ್ಟಿದ್ದಳು' ಎಂದೂ ತಿಳಿಸಿದರು.

'ತುಮಕೂರಿನ ಬಾಲಚಂದ್ರ, ಬಿಎಂಟಿಸಿ ಬಸ್ ಚಾಲಕ. ಆತನಿಗೆ ಲತಾ ಪರಿಚಯವಾಗಿ, ಸಲುಗೆ ಬೆಳೆದಿತ್ತು. ಈ ಸಂಗತಿ ತಿಳಿದಿದ್ದ ನಿಂಗಮ್ಮ, ಊರಿನಲ್ಲೆಲ್ಲ ಹೇಳಿಕೊಂಡು ಓಡಾಡುತ್ತಿದ್ದರು. ಪರಿಹಾರದ ಬಾಕಿ ಹಣ ₹1.50 ಲಕ್ಷ ನೀಡುವಂತೆ ಲತಾಳನ್ನು ಒತ್ತಾಯಿಸಲಾರಂಭಿಸಿದ್ದರು. ಕೋಪಗೊಂಡ ಲತಾ, ಬಾಲಚಂದ್ರ ಜೊತೆ ಸೇರಿ ಅತ್ತೆಯನ್ನೇ ಕೊಲೆ ಮಾಡಲು ಸಂಚು ರೂಪಿಸಿದ್ದಳು' ಎಂದೂ ವಿವರಿಸಿದರು.


ಹಣ ಕೊಡುವುದಾಗಿ ಕರೆಸಿ ಕೊಲೆ; 'ಪರಿಹಾರದ ಮೊತ್ತ ಕೊಡುವುದಾಗಿ ಹೇಳಿದ್ದ ಲತಾ, ನಿಂಗಮ್ಮ ಅವರನ್ನು ಜುಲೈ 19ರಂದು ತುಮಕೂರಿನಲ್ಲಿರುವ ಬಾಲಚಂದ್ರ ಮನೆಗೆ ಕಳುಹಿಸಿದ್ದಳು. ನಂತರ, ತಾನು ತವರು ಮನೆಯಾದ ಮಳವಳ್ಳಿಗೆ ಹೋಗಿದ್ದಳು. ಹಣ ಪಡೆಯಲು ಮನೆಗೆ ಬಂದ ವೃದ್ಧೆ ಮೇಲೆ ಹಲ್ಲೆ ಮಾಡಿದ್ದ ಬಾಲಚಂದ್ರ, ಹಗ್ಗದಿಂದ ಕತ್ತು ಬಿಗಿದು ಕೊಂದಿದ್ದ. ಮೃತದೇಹವನ್ನು ರೈಲು ಹಳಿ ಮೇಲೆ ಎಸೆದಿದ್ದ. ರೈಲು ಹರಿದು ರುಂಡ ಬೇರ್ಪಟ್ಟಿತ್ತು. ರುಂಡದಿಂದ ಗುರುತು ಸಿಗಬಹುದೆಂದು ತಿಳಿದ ಆರೋಪಿ, ಅದೇ ರುಂಡವನ್ನು ಎತ್ತಿಕೊಂಡು ತುಮಕೂರು ಟೋಲ್‌ಗೇಟ್ ಬಳಿ ಹೋಗಿ ಲಾರಿಯೊಳಗೆ ಎಸೆದಿದ್ದ. ಅದೇ ಲಾರಿ ಇಳಕಲ್‌ಗೆ ಹೋಗಿತ್ತು' ಎಂದೂ ಭಾಸ್ಕರ್ ರಾವ್ ತಿಳಿಸಿದರು.



ಮುಂಡ ಸಿಕ್ಕಿದ್ದ ಸ್ಥಳದ ಚಿತ್ರವನ್ನು ಭಾಸ್ಕರ್ ರಾವ್ ತೋರಿಸಿದರು. ಎಸ್ಪಿ ಸಿರಿ ಗೌರಿ ಚಿತ್ರದಲ್ಲಿದ್ದಾರೆ – ಪ್ರಜಾವಾಣಿ ಚಿತ್ರ



ನಿಂಗಮ್ಮ



ಆರೋಪಿ ಬಾಲಚಂದ್ರ

'3 ಠಾಣೆಗಳಲ್ಲಿ ದಾಖಲಾಗಿದ್ದ ಪ್ರಕರಣ'

ಬೆಂಗಳೂರು ಗ್ರಾಮಾಂತರ ರೈಲ್ವೆ, ತುಮಕೂರು ಹಾಗೂ ಇಳಕಲ್ ಠಾಣೆಯಲ್ಲಿ ದಾಖಲಾಗಿದ್ದ ಮೂರು ಪ್ರಕರಣಗಳನ್ನು ಯಶಸ್ವಿಯಾಗಿ ಭೇದಿಸಿದ ತನಿಖಾ ತಂಡದ ಕೆಲಸಕ್ಕೆ ಭಾಸ್ಕರ್ ರಾವ್ ಪ್ರಶಂಸೆ ವ್ಯಕ್ತಪಡಿಸಿದರು.

'ಎಸ್ಪಿ ಸಿರಿ ಗೌರಿ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಡಿ. ಅಶೋಕ, ಇನ್‌ಸ್ಪೆಕ್ಟರ್ ಬಿ. ಶಿವಕುಮಾರ್, ಪಿಎಸ್‌ಐ ಡಿ. ಭಾರತಿ, ಎಎಸ್‌ಐ ಕಾಂತರಾಜು, ಹೆಡ್ ಕಾನ್‌ಸ್ಟೆಬಲ್ ಸಿದ್ದರಾಜು ಹಾಗೂ ಕಾನ್‌ಸ್ಟೆಬಲ್ ಮಾರುತಿ ಉತ್ತಮ ತನಿಖೆ ಮಾಡಿದ್ದಾರೆ. ಪ್ರಕರಣದಲ್ಲಿ ಸದ್ಯದಲ್ಲೇ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಿದ್ದಾರೆ' ಎಂದು ಭಾಸ್ಕರ್ ರಾವ್ ಹೇಳಿದರು.

ಶ್ರೀಸಾಯಿ ಗೋಲ್ಡ್ ಪ್ಯಾಲೇಸ್: ಆಭರಣಗಳಿಗೆ ರಿಯಾಯಿತಿ

ಬೆಂಗಳೂರು: ಶ್ರೀಸಾಯಿ ಗೋಲ್ಡ್ ಪ್ಯಾಲೇಸ್ ಆಭರಣ ಮಳಿಗೆಗಳಲ್ಲಿ ಆಷಾಢ ಮಾಸದ ಕೊಡುಗೆಯಾಗಿ ಪ್ರತಿ ಗ್ರಾಂ. ಚಿನ್ನದ ಆಭರಣ ಖರೀದಿಗೆ ₹75ರಷ್ಟು ರಿಯಾಯಿತಿ ಘೋಷಿಸಿದೆ.

ಹಳೆಯ ಚಿನ್ನವನ್ನು ಇಂದಿನ ದರಕ್ಕಿಂತ ₹75 ಹೆಚ್ಚಿನ ಬೆಲೆಗೆ ಬದಲಾಯಿಸಿಕೊಳ್ಳಬಹುದು. ಪ್ರತಿ ಕೆ.ಜಿ. ಬೆಳ್ಳಿ ಆಭರಣಗಳ ಖರೀದಿಗೆ ₹2 ಸಾವಿರ ಹಾಗೂ ಪ್ರತಿ ಕ್ಯಾರೆಟ್ ವಜ್ರದ ಮೇಲೆ ₹5 ಸಾವಿರ ರಿಯಾಯಿತಿಯೂ ಸಿಗಲಿದೆ.

'ಸಂಸ್ಥೆ ನಗರದಲ್ಲಿ ಈಗ 5 ಶಾಖೆಗಳನ್ನು ಹೊಂದಿದೆ. ಕೋವಿಡ್‌ನಿಂದಾಗಿ ಆರ್ಥಿಕ ಸಂಕಷ್ಟದಲ್ಲಿರುವ ಗ್ರಾಹಕರಿಗಾಗಿ ಈ ಎಲ್ಲ ಕೊಡುಗೆಗಳನ್ನು ನೀಡಿದ್ದು, ಇದನ್ನು ಸದುಪಯೋಗ ಪಡಿಸಿಕೊಳ್ಳಿ' ಎಂದು ಶ್ರೀಸಾಯಿ ಗೋಲ್ಡ್ ಪ್ಯಾಲೇಸ್ ಮಾಲೀಕ ಟಿ.ಎ. ಶರವಣ ತಿಳಿಸಿದ್ದಾರೆ.



ಗಣ್ಯರಿಗೆ ಸನ್ಮಾನ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಬಿ.ಎನ್.ಗರುಡಾಚಾರ್, ಜಯತೀರ್ಥ ವಿದ್ಯಾಪೀಠದ ಸತ್ಯಧ್ಯಾನಾಚಾರ್ ಕಟ್ಟಿ ಹಾಗೂ ಪ್ರವಚನಕಾರ ಪಾವಗಡ ಪ್ರಕಾಶ್‌ರಾವ್ ಅವರನ್ನು ಸನ್ಮಾನಿಸಲಾಯಿತು. ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ, ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಚ್.ಎಸ್.ಸಚ್ಚಿದಾನಂದಮೂರ್ತಿ, ಶಾಸಕ ಉದಯ್ ಬಿ.ಗರುಡಾಚಾರ್, ಮಹಾಸಭಾ ಪದಾಧಿಕಾರಿಗಳಾದ ಆರ್.ಲಕ್ಷ್ಮೀಕಾಂತ್, ಕೆ.ಸಿ. ಪ್ರಭಾಕರ್, ಪ್ರಕಾಶ್, ದಿವಾಕರ್, ಶಿವಶಂಕರ್, ರಾಮಪ್ರಸಾದ್ ಹಾಗೂ ಇತರರು ಇದ್ದರು.

'ಆಶ್ರಯ' ಮನೆ ಆಮಿಷವೊಡ್ಡಿ ವಂಚನೆ: ಅರ್ಚಕ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದಿಂದ ಆಶ್ರಯ ಯೋಜನೆಯಡಿ ಮನೆಗಳನ್ನು ಕೊಡಿಸುವ ಆಮಿಷವೊಡ್ಡಿ ಸಾರ್ವಜನಿಕರಿಂದ ಹಣ ಪಡೆದು ವಂಚಿಸಿದ ಆರೋಪದಡಿ ಅರ್ಚಕ ಮಂಜುನಾಥ್ ಸೇರಿ ನಾಲ್ವರನ್ನು ಸುಬ್ರಹ್ಮಣ್ಯಪುರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ವಂಚನೆಗೀಡಾಗಿರುವ ಬಾಲಾಜಿ ಕುಮಾರ್ ಎಂಬುವರು ದೂರು ನೀಡಿದ್ದಾರೆ. ಅದನ್ನು ಆಧರಿಸಿ ಮಂಜುನಾಥ್ ಹಾಗೂ ಅವರ ಸಂಬಂಧಿಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆಂಜನೇಯಸ್ವಾಮಿ ದೇವಾಲಯದ ಅರ್ಚಕ ಮಂಜುನಾಥ್, ತಮ್ಮ ಬಳಿ ಬರುವ ಜನರಿಗೆ ಮನೆ ಕೊಡಿಸುವ ಆಮಿಷವೊಡ್ಡುತ್ತಿದ್ದರು. ಮನೆ ಮಂಜೂರಾತಿಗೆ ಸ್ವಲ್ಪ ಹಣ ಖರ್ಚಾಗುವುದಾಗಿ ಹೇಳಿ ಜನರಿಂದ ಪಡೆದುಕೊಳ್ಳುತ್ತಿದ್ದರು. ಅದಾದ ನಂತರ ಯಾವುದೇ ಮನೆಗಳನ್ನು ಕೊಡಿಸಿಲ್ಲ. ಹಣವನ್ನೂ ವಾಪಸು ನೀಡಿಲ್ಲವೆಂಬುದು ಗೊತ್ತಾಗಿದೆ' ಎಂದೂ ತಿಳಿಸಿವೆ.

ಐಪಿಎಸ್ ಅಧಿಕಾರಿ, ರಾಜಕಾರಣಿಗಳ ಜೊತೆ ಫೋಟೊ: 'ಮಂಜುನಾಥ್, ಐಪಿಎಸ್ ಅಧಿಕಾರಿಗಳು ಹಾಗೂ ರಾಜಕಾರಣಿಗಳ ಜೊತೆ ಫೋಟೊ ತೆಗೆಸಿಕೊಳ್ಳುತ್ತಿದ್ದರು. ಅದೇ ಫೋಟೊಗಳನ್ನು ಜನರಿಗೆ ತೋರಿಸಿ, 'ನಾನು ಐಪಿಎಸ್ ಅಧಿಕಾರಿಗಳು ಹಾಗೂ ರಾಜಕಾರಣಿಗಳ ಸಂಬಂಧಿ' ಎನ್ನುತ್ತಿದ್ದರು. ಅದನ್ನು ನಂಬಿ, ಜನ ಹಣ ಕೊಟ್ಟಿದ್ದರು. ಈ ಬಗ್ಗೆಯೂ ದೂರುದಾರ ಮಾಹಿತಿ ನೀಡಿದ್ದಾರೆ' ಎಂದೂ ಮೂಲಗಳು ಹೇಳಿವೆ.

ವಂಚನೆಗೆ ರವಿ ಚನ್ನಣ್ಣನವರ ಹೆಸರು ಬಳಕೆ

'ಸಿಐಡಿ ಎಸ್ಪಿ ಆಗಿರುವ ಐಪಿಎಸ್ ಅಧಿಕಾರಿ ರವಿ ಚನ್ನಣ್ಣನವರ, ಈ ಹಿಂದೆ ಮೈಸೂರು ಜಿಲ್ಲಾ ಎಸ್ಪಿ ಆಗಿದ್ದರು. ಅದೇ ಸಂದರ್ಭದಲ್ಲೇ ಅವರ ಜೊತೆ ಮಂಜುನಾಥ್ ಫೋಟೊ ತೆಗೆಸಿಕೊಂಡಿದ್ದರು. ಅದೇ ಫೋಟೊವನ್ನು ಜನರಿಗೆ ತೋರಿಸುತ್ತಿದ್ದ ಆರೋಪಿ, 'ರವಿ ಚನ್ನಣ್ಣನವರ ಅವರ ತಮ್ಮ ನಾನು' ಎಂದು ಹೇಳಿ ಜನರನ್ನು ನಂಬಿಸುತ್ತಿದ್ದರು' ಎಂದೂ ದೂರುದಾರರು ಹೇಳಿದ್ದಾರೆ.

ಜನಸಂಪರ್ಕ ಸಭೆ ಬೆನ್ನಲ್ಲೇ ದಾಳಿ; 74 ಮಂದಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಮಿಷನರ್ ಕಮಲ್ ಪಂತ್ ಅವರು ಜನಸಂಪರ್ಕ ಸಭೆ ನಡೆಸಿದ್ದ ಬೆನ್ನಲ್ಲೇ ಚುರುಕಿನ ಕಾರ್ಯಾಚರಣೆ ನಡೆಸಿರುವ ನಂದಿನಿ ಲೇಔಟ್ ಪೊಲೀಸರು, ವಿವಿಧ ಅಪರಾಧ ಕೃತ್ಯಗಳಲ್ಲಿ ತೊಡಗಿದ್ದ 74 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ.

ಠಾಣೆಯಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಪಾಲ್ಗೊಂಡಿದ್ದ ಸ್ಥಳೀಯರು, 'ಮಾದಕ ವಸ್ತು ಮಾರಾಟ, ಸೇವನೆ, ಕಳ್ಳತನ, ಸುಲಿಗೆ ಸೇರಿದಂತೆ ಹಲವು ಅಪರಾಧ ಕೃತ್ಯಗಳು ಹೆಚ್ಚಾಗುತ್ತಿವೆ' ಎಂದು ದೂರಿದ್ದರು. ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಕಮಿಷನರ್ ಹೇಳಿದ್ದರು.

ಕಮಿಷನರ್ ಸೂಚನೆಯಂತೆ ಠಾಣೆ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿದ ಪೊಲೀಸರು, ಹಲವರ ಮನೆ ಮೇಲೆ ದಾಳಿ ಮಾಡಿದರು. ಮಾದಕ ದ್ರವ್ಯ ಸೇವಿಸಿದ್ದವರನ್ನು ವಶಕ್ಕೆ ಪಡೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದರು. ಹಲವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಸಾರ್ವಜನಿಕರ ದೂರು ಆಧರಿಸಿ ಅಪರಾಧ ಕೃತ್ಯಗಳ ತಡೆಗಾಗಿ ದಾಳಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಕೋವಿಡ್ ದೃಢಪ್ರಮಾಣ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದ್ದು, ಸೋಂಕು ಪ್ರಕರಣಗಳ ದೃಢಪ್ರಮಾಣ ಶೇ 0.6ರಿಂದ ಶೇ 1.4ಕ್ಕೆ ಏರಿಕೆಯಾಗಿದೆ.

ಸೋಮವಾರ 1,606 ಮಂದಿಗೆ ಸೋಂಕು ತಗುಲಿದ್ದು, 31 ಜನ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಇದೇ ಸಂದರ್ಭದಲ್ಲಿ 1,937 ಮಂದಿ ಗುಣಮುಖರಾಗಿದ್ದಾರೆ.

ಭಾನುವಾರಕ್ಕೆ ಹೋಲಿಸಿದರೆ ಸೋಂಕು ಪರೀಕ್ಷೆಗಳು 32 ಸಾವಿರ (1.14 ಲಕ್ಷಕ್ಕೆ) ಕುಗ್ಗಿವೆ. ಹೊಸ ಪ್ರಕರಣಗಳು 605 ಜಾಸ್ತಿಯಾಗಿದ್ದು, ಸೋಂಕಿತರ ಸಾವು 9 ಹೆಚ್ಚಳವಾಗಿವೆ. ಮರಣ ಪ್ರಮಾಣ ದರ ಶೇ.2.2ರಷ್ಟಿದೆ.

ಕಳೆದ ವಾರ ಬಹುತೇಕ ದಿನ ಏರಿಕೆಯಾಗುತ್ತಲೇ ಇದ್ದ ಕೋವಿಡ್ ಹೊಸ ಪ್ರಕರಣಗಳು ಭಾನುವಾರ 1,001ಕ್ಕೆ ಇಳಿಕೆಯಾಗಿದ್ದವು.

30ರ ಆಸುಪಾಸಿನಲ್ಲಿದ್ದ ಸಾವಿನ ಸಂಖ್ಯೆ 22ಕ್ಕೆ ತಲುಪಿತ್ತು. ಆದರೆ, ಸೋಮವಾರ ಮತ್ತೆ ಒಂದೂವರೆ ಸಾವಿರಕ್ಕೆ ಹೆಚ್ಚಳವಾಗಿದೆ.

ಇನ್ನು, ಮೊದಲ ಮತ್ತು ಎರಡನೇ ಅಲೆ ಸೇರಿ ಸೋಂಕಿತರ ಒಟ್ಟು ಸಂಖ್ಯೆ 28.89 ಲಕ್ಷ ದಾಟಿದ್ದು, ಈ ಪೈಕಿ 28.36 ಲಕ್ಷ ಸೋಂಕಿತರು ಗುಣಮುಖರಾಗಿದ್ದಾರೆ. ಇದರೊಂದಿಗೆ ಸಕ್ರಿಯ ಪ್ರಕರಣಗಳ ಸಂಖ್ಯೆ 23,057ಕ್ಕೆ ಇಳಿಕೆಯಾಗಿವೆ. 36,405 ಸೋಂಕಿತರು ಮೃತಪಟ್ಟಿದ್ದಾರೆ. ಒಟ್ಟಾರೆ ಗುಣಮುಖ ದರ ಶೇ.98 ರಷ್ಟಿದ್ದು, ಶೇ 1.1 ರಷ್ಟು ಮರಣ ದರವಿದೆ.

ಐದು ಜಿಲ್ಲೆಗಳಲ್ಲಿ ಶೂನ್ಯ: ಬಾಗಲಕೋಟೆ, ಬಳ್ಳಾರಿ, ಬೀದರ್, ಕೊಪ್ಪಳ, ಕಲಬುರ್ಗಿಯಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರು ನಗರದಲ್ಲಿ ಅತಿ ಹೆಚ್ಚು ಅಂದರೆ 467, ದಕ್ಷಿಣ ಕನ್ನಡ 357, ಮೈಸೂರು 162, ಉಡುಪಿ 78, ಬೆಳಗಾವಿ 69, ತುಮಕೂರು 59, ಚಾಮರಾಜನಗರ 54, ಹಾಸನ 57 ಹಾಗೂ ಶಿವಮೊಗ್ಗದಲ್ಲಿ 52 ಮಂದಿಗೆ ಸೋಂಕು ತಗುಲಿದೆ. ಉಳಿದಂತೆ 8 ಜಿಲ್ಲೆಗಳಲ್ಲಿ ಒಂದಂಕಿಗೆ ಇಳಿಕೆಯಾಗಿದೆ.

14 ಜಿಲ್ಲೆಗಳಲ್ಲಿ ಸಾವಿನ ಸಂಖ್ಯೆ ಶೂನ್ಯವಿದ್ದು, 16 ಜಿಲ್ಲೆಗಳಲ್ಲಿ ಬೆರಳೆಣಿಕೆಯಷ್ಟು ವರದಿಯಾಗಿದೆ.

ದಕ್ಷಿಣ ಕನ್ನಡ 4, ಬೆಂಗಳೂರು, ಹಾವೇರಿ, ಮೈಸೂರು ಹಾಗೂ ಉತ್ತರ ಕನ್ನಡದಲ್ಲಿ ತಲಾ ಮೂವರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನಾಲ್ಕು ತಿಂಗಳ ಬಳಿಕ ಆರಂಭ • ಮೊದಲ ದಿನವೇ ಶೇ 50ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಹಾಜರು

ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಕಲರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಗಿಲ್ ವಿಜಯ ದಿವಸದ ಆಚರಣೆಯೊಂದಿಗೆ ನಗರದ ಪದವಿ ಕಾಲೇಜುಗಳು ಸೋಮವಾರದಿಂದ ಪುನರಾರಂಭವಾದವು. ನಾಲ್ಕು ತಿಂಗಳುಗಳ ನಂತರ ಕಾಲೇಜು ಕ್ಯಾಂಪಸ್ ಪ್ರವೇಶಿಸಿದ ವಿದ್ಯಾರ್ಥಿಗಳು ಸಡಗರ, ಸಂಭ್ರಮದಿಂದ ತರಗತಿಗೆ ಹಾಜರಾದರು.

ನಗರದ ಬಹುತೇಕ ಕಾಲೇಜುಗಳಲ್ಲಿ ಶೇ 50ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಹಾಜರಿದ್ದರು. ಎನ್‌ಸಿಸಿ ಸೇರಿದಂತೆ ಮೊದಲ ದಿನವೇ ವಿವಿಧ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗಿಯಾದರು. ನಗರದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಮೊದಲ ದಿನವೇ ಶೇ 50ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಹಾಜರಾಗಿದ್ದರು.

ಮಾರ್ಗಸೂಚಿ ಪಾಲನೆ: ವಿದ್ಯಾರ್ಥಿಗಳು ಕೋವಿಡ್ ಲಸಿಕೆಯನ್ನು ಪಡೆದಿದ್ದಾರೆಯೇ ಎನ್ನುವುದನ್ನು ಪರೀಕ್ಷಿಸಲು ಕಾಲೇಜಿನ ಪ್ರವೇಶ ದ್ವಾರದಲ್ಲಿಯೇ, ವಿದ್ಯಾರ್ಥಿಗಳ ಮೊಬೈಲ್ ಸಂದೇಶವನ್ನು ಪರಿಶೀಲಿಸಲಾಗುತ್ತಿತ್ತು. ದೇಹದ ಉಷ್ಣಾಂಶ ಪರೀಕ್ಷಿಸಿದ ನಂತರವೇ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತಿತ್ತು. ಅಲ್ಲಲ್ಲಿ, ಸ್ಯಾನಿಟೈಸರ್ ವ್ಯವಸ್ಥೆ ಮಾಡಲಾಗಿತ್ತು. ಪೋಷಕರಿಂದ ತಂದ ಒಪ್ಪಿಗೆ ಪತ್ರವನ್ನು ವಿದ್ಯಾರ್ಥಿಗಳಿಂದ ಕಾಲೇಜು ಸಿಬ್ಬಂದಿ ಪಡೆದರು. ಪ್ರಯೋಗಾಲಯದಲ್ಲಿಯೂ ಮೊದಲ ದಿನವೇ ವಿದ್ಯಾರ್ಥಿಗಳು ಹಾಜರಾಗಿ ಚಟುವಟಿಕೆಯಲ್ಲಿ ಮಗ್ನರಾಗಿದ್ದರು.

‘ಏ.28ರಿಂದ ಕಾಲೇಜುಗಳು ಬಂದ್ ಆಗಿದ್ದವು. ಮಕ್ಕಳು ಸಹ ಬೇಗ ಕಾಲೇಜು ಆರಂಭವಾಗಲಿ ಎಂದು ಆಸೆ ಪಟ್ಟಿದ್ದರು. ತುಂಬಾ ಹುರುಪಿನಿಂದಲೇ ವಿದ್ಯಾರ್ಥಿಗಳು ಕಾಲೇಜಿಗೆ ಬರುತ್ತಿದ್ದಾರೆ. ಕಾಲೇಜಿಗೆ ಹಾಜರಾಗದ ವಿದ್ಯಾರ್ಥಿಗಳಿಗೆ ಆನ್‌ಲೈನ್ ಪಾಠಗಳು ನಡೆಯುತ್ತಿವೆ. ಬಹುತೇಕ ಬೋಧಕ ಸಿಬ್ಬಂದಿಯು ಈಗಾಗಲೇ ಎರಡು ಡೋಸ್ ಕೋವಿಡ್ ಲಸಿಕೆ ಪಡೆದಿದ್ದಾರೆ’ ಎಂದು ಸರ್ಕಾರಿ ಕಲಾ ಕಾಲೇಜಿನ ಪ್ರಾಧ್ಯಾಪಕಿ ಟಿ. ಶಶಿಕಲಾ ಹೇಳಿದರು.

‘ಕಾಲೇಜು ಆರಂಭಕ್ಕೆ ಮೂರು ದಿನ ಮುನ್ನವೇ ಕೊಠಡಿಗಳು, ಡೆಸ್ಕ್‌ಗಳನ್ನು ಸ್ವಚ್ಛಗೊಳಿಸಲಾಗಿತ್ತು. ಒಂದು ಡೆಸ್ಕ್‌ನಲ್ಲಿ ಇಬ್ಬರು ವಿದ್ಯಾರ್ಥಿಗಳು ಮಾತ್ರ ಕೂರುವ ವ್ಯವಸ್ಥೆ ಮಾಡಲಾಗಿದೆ. ಸದ್ಯಕ್ಕೆ ಡೆಸ್ಕ್‌ಗಳ ಕೊರತೆಯೇನೂ ಕಂಡು ಬಂದಿಲ್ಲ. ವಿದ್ಯಾರ್ಥಿಗಳ ಹಾಜರಾತಿ ಹೆಚ್ಚಿದರೆ, ಪರ್ಯಾಯ ದಿನಗಳಂದು, ಅಂದರೆ ದಿನ ಬಿಟ್ಟು ದಿನ, ಒಂದೊಂದು ತರಗತಿಯ ವಿದ್ಯಾರ್ಥಿಗಳನ್ನು ಕರೆಸುವ ಚಿಂತನೆ ಇದೆ. ಎಲ್ಲರನ್ನೂ ಏಕಕಾಲಕ್ಕೆ ಕರೆಸಿದರೆ ಅಂತರ ಕಾಪಾಡಿಕೊಳ್ಳುವುದು ಕಷ್ಟವಾಗುತ್ತದೆ’ ಎಂದು ಅವರು ಹೇಳಿದರು.

ಲಸಿಕೆ ಕೊರತೆ: ಕಾಲೇಜಿಗೆ ಬರುವ ಮುನ್ನ ಕೋವಿಡ್ ಲಸಿಕೆ ಹಾಕಿಸಿಕೊಳ್ಳುವಂತೆ ಸಲಹೆ ಮಾಡಲಾಗಿತ್ತು. ಮೊದಲ ಡೋಸ್ ಲಸಿಕೆ ಪಡೆದವರಿಗೆ ಮಾತ್ರ ಪ್ರವೇಶ ನೀಡಲಾಗುತ್ತಿತ್ತು. ಲಸಿಕೆ ಪಡೆಯದವರಿಗೆ ಪ್ರವೇಶ ನೀಡುತ್ತಿಲ್ಲ. ಕೆಲವು ಕಡೆಗಳಲ್ಲಿ ಲಸಿಕೆ ಕೊರತೆಯಾಗಿತ್ತು. ವಿದ್ಯಾರ್ಥಿಗಳಿಗೆ ಆದ್ಯತೆ ಮೇಲೆ ನೀಡುತ್ತಿದ್ದರೂ ಕಳೆದ ಒಂದು ವಾರದಿಂದ ಬಹುತೇಕ ಕಡೆಗಳಲ್ಲಿ ಲಸಿಕೆ ಲಭ್ಯವಾಗುತ್ತಿಲ್ಲ.

‘ಬೋಧಕ ಸಿಬ್ಬಂದಿ ಎಲ್ಲರೂ ಲಸಿಕೆ ಪಡೆದಿದ್ದಾರೆ. ಶೇ 75ರಷ್ಟು ವಿದ್ಯಾರ್ಥಿಗಳಿಗೂ ಲಸಿಕೆ ಹಾಕಲಾಗಿದೆ. ಉಳಿದ ಶೇ 25ರಷ್ಟು ವಿದ್ಯಾರ್ಥಿಗಳಿಗೆ ಬುಧವಾರ ಅಥವಾ ಗುರುವಾರದಂದು ಕಾಲೇಜಿನ ಆವರಣದಲ್ಲಿಯೇ ಲಸಿಕೆ ಹಾಕಿಸಲು ವ್ಯವಸ್ಥೆ ಮಾಡಿದ್ದೇವೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಉಪನ್ಯಾಸಕಿಯೊಬ್ಬರು ಹೇಳಿದರು.

ವಸತಿ ನಿಲಯಗಳೂ ಆರಂಭ: ಪದವಿ ಕಾಲೇಜುಗಳು ಮಾತ್ರವಲ್ಲದೆ, ವಿದ್ಯಾರ್ಥಿಗಳಿರುವ ವಸತಿ ನಿಲಯಗಳು ಕೂಡ ಸೋಮವಾರದಿಂದ ಪುನರಾರಂಭವಾದವು. ಆದರೆ, ಕೋವಿಡ್ ಆರೈಕೆ ಕೇಂದ್ರಗಳಾಗಿ ಮಾರ್ಪಡಿಸಲಾಗಿದ್ದ ಕೆಲವು ಹಾಸ್ಟೆಲ್‌ಗಳನ್ನು ಮುಂದಿನ ವಾರದಿಂದ ವಿದ್ಯಾರ್ಥಿಗಳಿಗಾಗಿ ತೆರೆಯಲಾಗುವುದು ಎಂದು ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಣೆಯಲ್ಲಿ ಹೇಳಿದೆ.

ಈವರೆಗೆ ಕೋವಿಡ್ ಲಸಿಕೆ ಪಡೆಯದ ಬೋಧಕ, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಸೆಂಟ್ರಲ್ ಕಾಲೇಜಿನಲ್ಲಿ ಲಸಿಕೆಗೆ ವ್ಯವಸ್ಥೆ ಮಾಡಲಾಗಿದೆ.

ಪ್ರೊ. ಲಿಂಗರಾಜ ಗಾಂಧಿ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ



ನಗರದ ಶೇಷಾದ್ರಿ ರಸ್ತೆಯಲ್ಲಿರುವ ಮಹಾರಾಣಿ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಮೊದಲ ವರ್ಷದ ಪದವಿ ಪ್ರವೇಶಕ್ಕಾಗಿ ಸೋಮವಾರ ಸರದಿಯಲ್ಲಿ ನಿಂತಿದ್ದ ವಿದ್ಯಾರ್ಥಿನಿಯರು ಪ್ರಜಾವಾಣಿ ಚಿತ್ರಗಳು



ಸರ್ಕಾರದ ಆದೇಶದಂತೆ ಸೋಮವಾರದಿಂದ ಕಾಲೇಜು ಆರಂಭಗೊಂಡಿದ್ದು ಪ್ರಥಮದಿನ ವಿದ್ಯಾರ್ಥಿಗಳು ಪಾಠವನ್ನು ಆಲಿಸುತ್ತಿರುವ ದೃಶ್ಯ ಸರ್ಕಾರಿ ಕಲಾ ಕಾಲೇಜಿನಲ್ಲಿ ಕಂಡುಬಂತು.

ಆನ್‌ಲೈನ್ ಕಲಿಕೆ ಕಷ್ಟ



ಆನ್‌ಲೈನ್ ಶಿಕ್ಷಣದಲ್ಲಿ ಕೆಲವು ವಿಷಯಗಳು ಅರ್ಥವಾಗುತ್ತಿದ್ದವು ಕೆಲವು ಅರ್ಥವಾಗುತ್ತಿರಲಿಲ್ಲ. ಕಾಲೇಜು ಆರಂಭವಾಗಿರುವುದು ಖುಷಿ ಆಗಿದೆ. ನಾವೇ ಅಂತರವನ್ನು ಕಾಪಾಡಿಕೊಳ್ಳಬೇಕು. ಕೋವಿಡ್ ನಿಯಮಗಳನ್ನು ನಾವೇ ಸ್ವಯಂ ಪ್ರೇರಿತರಾಗಿ ಪಾಲಿಸಿದರೆ ಯಾವುದೇ ಸಮಸ್ಯೆ ಆಗುವುದಿಲ್ಲ

ಆರ್. ಬಸವರಾಜ, ಬಿಎ ಅಂತಿಮ ವರ್ಷದ ವಿದ್ಯಾರ್ಥಿ

ಮನೆಯಲ್ಲಿದ್ದು ಬೇಸರ



ಕಾಲೇಜುಗಳಲ್ಲಿ ಪಾಠಗಳು ಇಲ್ಲದೇ ಶಿಕ್ಷಣಕ್ಕೆ ತೊಂದರೆ ಆಗಿತ್ತು. ನೆಟ್‌ವರ್ಕ್ ಸಮಸ್ಯೆಯಿಂದ ಕಲಿಕೆ ಸರಿಯಾಗಲಿಲ್ಲ. ಅಲ್ಲದೆ, ಮನೆಯಲ್ಲಿದ್ದು ಬೇಸರವಾಗಿತ್ತು. ಗೆಳತಿಯರ ಜೊತೆ ಮಾತನಾಡಲು ಸಾಧ್ಯವಾಗಿರಲಿಲ್ಲ. ಕಾಲೇಜು ಆರಂಭವಾಗಿರುವುದು ನನಗಂತೂ ಹೆಚ್ಚಿನ ಖುಷಿ ಕೊಟ್ಟಿದೆ.

ಸುನೀತಾ, ಬಿಎ ದ್ವಿತೀಯ ವರ್ಷದ ವಿದ್ಯಾರ್ಥಿನಿ

ಖುಷಿ ನೀಡಿದೆ



ಕಾಲೇಜು ಆರಂಭವಾಗಿರುವುದು ನನಗೆ ಮತ್ತು ನನ್ನ ಬಹಳಷ್ಟು ಸ್ನೇಹಿತೆಯರಿಗೆ ಖುಷಿ ನೀಡಿದೆ. ಮೊದಲ ದಿನವೇ ಬಂದಿದ್ದೇವೆ. ಎಚ್ಚರಿಕೆಯಿಂದ ಇರುವಂತೆ ಪೋಷಕರು ಸಲಹೆ ನೀಡಿದ್ದಾರೆ. ಕೊಠಡಿಗಳನ್ನು ಸ್ಯಾನಿಟೈಸ್ ಮಾಡಲಾಗಿದೆ. ಅಧ್ಯಾಪಕರು ಸಹ ನಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುತ್ತಿದ್ದಾರೆ.

ಪಿ. ಕಾವ್ಯ, ಪದವಿ ಅಂತಿಮ ವರ್ಷದ ವಿದ್ಯಾರ್ಥಿನಿ

ಎರಡೂ ಸೆಮಿಸ್ಟರ್ ಪರೀಕ್ಷೆ ಕಷ್ಟ



ಕಾಲೇಜು ಪ್ರಾರಂಭಿಸಿರುವುದು ಸ್ವಾಗತಾರ್ಹ. ಇನ್ನು ಒಂದು ತಿಂಗಳ ಅವಧಿಯಲ್ಲಿ ವಿದ್ಯಾರ್ಥಿಗಳು ಎರಡೂ ಸೆಮಿಸ್ಟರ್ ಪರೀಕ್ಷೆ ಬರೆಯುವುದು ಕಷ್ಟ. ಈ ಬಗ್ಗೆ ಶಿಕ್ಷಣ ಸಚಿವರು ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿ ಕ್ರಮ ಕೈಗೊಳ್ಳಬೇಕು.

ವೈ.ಕೆ. ವಿಷ್ಣುವರ್ಧನ್, ಪದವಿ ಅಂತಿಮ ವರ್ಷದ ವಿದ್ಯಾರ್ಥಿ

ಚುರುಕುಗೊಂಡ ಪದವಿ ಮೊದಲ ವರ್ಷದ ದಾಖಲಾತಿ

ದ್ವಿತೀಯ ಪಿಯುಸಿಯಲ್ಲಿ ಶೇ 100ರಷ್ಟು ಫಲಿತಾಂಶ ಬಂದಿರುವುದರಿಂದ ಪದವಿ ಮೊದಲ ವರ್ಷದ ದಾಖಲಾತಿ ಚುರುಕುಗೊಂಡಿದೆ. ಅಗತ್ಯಕ್ಕಿಂತ ಹೆಚ್ಚು ಸೀಟುಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನಿರೀಕ್ಷೆಯಲ್ಲಿ ಕಾಲೇಜುಗಳು ಇವೆ.

ಸರ್ಕಾರಿ ಕಾಲೇಜುಗಳಲ್ಲಿಯೂ ದಾಖಲಾತಿ ಪ್ರಮಾಣ ಹೆಚ್ಚಾಗುತ್ತಿರುವುದರಿಂದ ಹೊಸ ವಿಭಾಗಗಳು (ಸೆಕ್ಷನ್) ಮತ್ತು ಕೋರ್ಸ್‌ಗಳನ್ನೂ ಪ್ರಾರಂಭಿಸಲಾಗುತ್ತಿದೆ. ವಾಣಿಜ್ಯ ಕೋರ್ಸ್‌ಗಳಿಗೆ ಹೆಚ್ಚು ಬೇಡಿಕೆ ಇದ್ದು, ಕಲಾ ವಿಭಾಗದಲ್ಲಿ ಅರ್ಥಶಾಸ್ತ್ರ ವಿಷಯ ಮುಖ್ಯವಾಗಿರುವ ಸಂಯೋಜನೆಯನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.


‘ಸರ್ಕಾರಿ ಕಾಲೇಜುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶ ಬಯಸುತ್ತಿದ್ದಾರೆ. ಹೆಚ್ಚುವರಿ ಸೆಕ್ಷನ್‌ಗಳನ್ನು ಪ್ರಾರಂಭಿಸಲು ಇಲಾಖೆಯಿಂದ ಅನುಮತಿ ಕೇಳಲಾಗಿದೆ. ಎಷ್ಟೇ ವಿದ್ಯಾರ್ಥಿಗಳು ಬಂದರೂ ಪ್ರವೇಶಾವಕಾಶ ಕಲ್ಪಿಸಲು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ’ ಎಂದು ಸರ್ಕಾರಿ ಪದವಿ ಕಾಲೇಜುಗಳ ಅಧ್ಯಾಪಕರ ಸಂಘ ಡಾ.ಟಿ.ಎಂ. ಮಂಜುನಾಥ ಹೇಳಿದರು.

‘ಜನೋಪಕಾರಿಯಾದ ಸಹಕಾರ ಇಲಾಖೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎರಡು ವರ್ಷಗಳಲ್ಲಿ ರಾಜ್ಯ ಸರ್ಕಾರ ಅನೇಕ ಸಾಧನೆಗಳನ್ನು ಮಾಡಿದೆ. ಅದರಲ್ಲಿಯೂ ಸಹಕಾರ ಇಲಾಖೆ, ಹಲವು ಜನೋಪಕಾರಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದೆ. ಕೋವಿಡ್ ನಿರ್ವಹಣೆಗೆ ಇಲಾಖೆಯಿಂದ ₹58 ಕೋಟಿ ಗರಿಷ್ಠ ದೇಣಿಗೆ ನೀಡಿದ್ದೂ ಹೆಮ್ಮೆಯ ಸಂಗತಿ’ ಎಂದು ಮಾಜಿ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದ್ದಾರೆ.

‘2019-20ನೇ ಸಾಲಿನಲ್ಲಿ ರೈತರಿಗೆ ಅಲ್ಪಾವಧಿ, ಮಧ್ಯಮಾವಧಿ ಸೇರಿದಂತೆ ₹13,577 ಕೋಟಿ ಬೆಳೆ ಸಾಲವನ್ನು ನೀಡಲಾಗಿತ್ತು. ಆದರೆ, ಕೋವಿಡ್ ಸಂಕಷ್ಟವನ್ನೂ ಮೀರಿ 2020-21ರ ಆರ್ಥಿಕ ವರ್ಷದಲ್ಲಿ 25.67 ಲಕ್ಷ ರೈತರಿಗೆ ₹17,108 ಕೋಟಿ ರೂಪಾಯಿ ಸಾಲ ನೀಡುವ ಮೂಲಕ ಶೇ.114 ಗುರಿ ಸಾಧನೆಯನ್ನು ಮಾಡಲಾಗಿದೆ. ಪ್ರಸಕ್ತ ಸಾಲಿನ ಆರ್ಥಿಕ ವರ್ಷದಲ್ಲಿ 30 ಲಕ್ಷ ರೈತರಿಗೆ ₹20,810 ಕೋಟಿ ಸಾಲ ನೀಡಿಕೆ ಗುರಿ ಹೊಂದಲಾಗಿತ್ತು’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಎಸ್.ಟಿ. ಸೋಮಶೇಖರ್

‘ಕೊರೊನಾ ಸೇನಾನಿಗಳಾಗಿ ಕಾರ್ಯನಿರ್ವಹಿಸಿದ ರಾಜ್ಯದ 42,500 ಆಶಾ ಕಾರ್ಯಕರ್ತೆಯರಿಗೆ ತಲಾ ₹3 ಸಾವಿರ ರೂಪಾಯಿಯಂತೆ ₹12.75 ಕೋಟಿಯನ್ನು ಸಹಕಾರ ಇಲಾಖೆ ಮೂಲಕ ವಿತರಿಸಲಾಗಿದೆ’ ಎಂದು ಹೇಳಿದ್ದಾರೆ.


‘ಕೋವಿಡ್ ಸಮಯದಲ್ಲಿ ರಾಜ್ಯದೆಲ್ಲೆಡೆ ಸಂಚರಿಸಿ ಎಲ್ಲ ಜಿಲ್ಲೆಗಳ ಎಪಿಎಂಸಿಗಳಿಗೆ ಭೇಟಿ ನೀಡಿ ರೈತರ ಹಾಗೂ ವರ್ತಕರ ಅಹವಾಲುಗಳನ್ನು ಆಲಿಸಲಾಗಿತ್ತು. ಮಾರಾಟ ಹಾಗೂ ಸಾಗಾಟದಲ್ಲಿ ಆಗುತ್ತಿದ್ದ ತೊಂದರೆಗಳು, ಸರ್ಕಾರದ ಮಟ್ಟದಲ್ಲಿನ ನ್ಯೂನತೆಗಳ ಬಗ್ಗೆ ಸಮಸ್ಯೆಗಳನ್ನು ಆಲಿಸಿ ಅಲ್ಲಿಯೇ ಪರಿಹಾರಗಳನ್ನು ಸೂಚಿಸಿದ್ದೆ’ ಎಂದೂ ಅವರು ಹೇಳಿದ್ದಾರೆ.

ಗಾಯಗೊಂಡ ಕಾಡುಪಾಪ ಸಂರಕ್ಷಣೆ

ಬೆಂಗಳೂರು: ಸದಾಶಿವನಗರದಲ್ಲಿ ಗಾಯಗೊಂಡಿದ್ದ ಕಾಡುಪಾಪವನ್ನು (ಸ್ಲೆಂಡರ್ ಲೋರಿಸ್) ಸ್ಥಳೀಯರ ನೆರವಿನಿಂದ ವನ್ಯಜೀವಿ ಕಾರ್ಯಕರ್ತರು ಸೋಮವಾರ ಸಂರಕ್ಷಣೆ ಮಾಡಿದ್ದಾರೆ.

‘ಸದಾಶಿವನಗರದ ಈಜುಕೊಳದ ಬಳಿ ಬಿದ್ದಿದ್ದ ಕಾಡುಪಾಪವನ್ನು ಸ್ಥಳೀಯರಾದ ಮುರುಗೇಶ್ ಹಾಗೂ ವಿ.ಜಿ.ಪರಶುರಾಮ ಸೇರಿ ರಕ್ಷಿಸಿದ್ದರು. ಬಳಿಕ ನಮಗೆ ಮಾಹಿತಿ ನೀಡಿದ್ದರು. ಗೌರವ ವನ್ಯಜೀವಿ ಪರಿಪಾಲಕ ಪ್ರಸನ್ನ ಕುಮಾರ್ ಹಾಗೂ ನಾನು ಸ್ಥಳಕ್ಕೆ ತೆರಳಿ ನೋಡಿದಾಗ ಅದು ಗಾಯಗೊಂಡಿರುವುದು ಕಂಡು ಬಂತು. ಹೆಚ್ಚಿನ ಆರೈಕೆಗಾಗಿ ಅದನ್ನು ಬನ್ನೇರುಘಟ್ಟದ ವನ್ಯಜೀವಿಗಳ ಆಸ್ಪತ್ರೆಗೆ ಒಪ್ಪಿಸಿದ್ದೇವೆ’ ಎಂದು ವನ್ಯಜೀವಿ ಸಂರಕ್ಷಕ ಮತ್ತು ಜೀವವೈವಿಧ್ಯ ಮಂಡಳಿಯ ಸಹಾಯ ಸಂಶೋಧಕ ಎಸ್. ಪ್ರೀತಮ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಕಾಡುಪಾಪದ ಬಲಗೈಗೆ ಸ್ವಲ್ಪ ಗಾಯವಾಗಿದೆ. ಹಾಗಾಗಿ ಅದಕ್ಕೆ ಮರದಲ್ಲಿ ಕೊಂಬೆಯಿಂದ ಕೊಂಬೆಗೆ ಜಿಗಿಯಲು ಸಾಧ್ಯವಾಗುತ್ತಿಲ್ಲ. ಮಳೆಯಲ್ಲಿ ಸಿಲುಕಿದ್ದ ಈ ಪ್ರಾಣಿ ಆಹಾರ ಸಿಗದೆ ಕಂಗಾಲಾಗಿತ್ತು. ನಾವು ನೀಡಿದ ಪಪ್ಪಾಯವನ್ನು ಸೇವಿಸಿದೆ. ಶುಶ್ರೂಷೆ ಬಳಿಕ ಇದು ಚೇತರಿಸಿಕೊಳ್ಳಲಿದೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.



ಕಾಡುಪಾಪದ ಜೊತೆ ಪ್ರೀತಮ್

‘ಅಳಿವಿನಂಚಿನಲ್ಲಿರುವ ಪ್ರಭೇದವಾಗಿರುವ ಕಾಡುಪಾಪ ವಿಶೇಷ ಹಾಗೂ ಅಪರೂಪದ ಪ್ರಾಣಿ. ರಾತ್ರಿ ಸಂಚರಿಸುವ ಈ ಪ್ರಾಣಿ ಮನುಷ್ಯರಿಗೆ ಕಾಣಸಿಗುವುದು ವಿರಳ. 1972ರ ವನ್ಯಜೀವಿ ಸಂರಕ್ಷಣೆ ಕಾಯ್ದೆಯ ಅನುಬಂಧ-1ರ ಅಡಿಯಲ್ಲಿ ಇದಕ್ಕೆ ವಿಶೇಷ ರಕ್ಷಣೆ ಒದಗಿಸಲಾಗಿದೆ.’ ಎಂದರು.

‘ಕಾಡುಪಾಪದಂತಹ ಅಪರೂಪದ ವನ್ಯಜೀವಿಗಳ ಸಂತತಿ ನಶಿಸುತ್ತಿದೆ. ಇವುಗಳ ರಕ್ಷಣೆಗೆ ಬಿಬಿಎಂಪಿಯ ವನ್ಯಜೀವಿ ಸಂರಕ್ಷಣಾ ತಂಡ ಸದಾ ಸನ್ನದ್ಧವಾಗಿದೆ. ಸಾರ್ವಜನಿಕರು ಇಂತಹ ವನ್ಯಪ್ರಾಣಿಗಳು ಅಪಾಯಕ್ಕೆ ಸಿಲುಕಿದ್ದನ್ನು ಕಂಡರೆ ಈ ತಂಡಕ್ಕೆ ಮಾಹಿತಿ ನೀಡಬೇಕು’ ಎಂದು ಪ್ರಸನ್ನ ಕುಮಾರ್ ತಿಳಿಸಿದರು.

‘ಸುಪ್ರೀಂ’ ಆದೇಶದ ಮೇರೆಗೆ ಬಿಡಿಎ ದಿಢೀರ್ ಕಾರ್ಯಾಚರಣೆ • ಸ್ಥಳೀಯರ ಆಕ್ರೋಶ

ಶಿವರಾಮ ಕಾರಂತ ಬಡಾವಣೆ: 22 ಕಟ್ಟಡ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವರಾಮ ಕಾರಂತ ಬಡಾವಣೆಗೆ ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿರುವ ಪ್ರದೇಶಗಳಲ್ಲಿ ನಿರ್ಮಿಸಿರುವ ಕಟ್ಟಡಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸೋಮವಾರ ಆರಂಭಿಸಿದೆ. ಮೇಡಿ ಅಗ್ರಹಾರ, ಸೋಮಶೆಟ್ಟಿಹಳ್ಳಿ, ಲಕ್ಷ್ಮೀಪುರ ಗ್ರಾಮಗಳಲ್ಲಿ 22 ಕಟ್ಟಡಗಳನ್ನು ಬಿಡಿಎ ಕೆಡವಿದೆ.

ಭದ್ರತೆಗಾಗಿ ಮೀಸಲು ಪೊಲೀಸ್ ಪಡೆಯ ತುಕಡಿಗಳನ್ನು ಸ್ಥಳಕ್ಕೆ ತರಿಸಿಕೊಂಡ ಬಿಡಿಎ ಅಧಿಕಾರಿಗಳು ತೆರವು ಕಾರ್ಯಾಚರಣೆ ಆರಂಭಿಸಿದರು. ಸೋಮಶೆಟ್ಟಿಹಳ್ಳಿಯಲ್ಲಿ 20 ಕಟ್ಟಡ, ಲಕ್ಷ್ಮೀಪುರ ಹಾಗೂ ಮೇಡಿ ಅಗ್ರಹಾರಗಳಲ್ಲಿ ತಲಾ ಒಂದು ಕಟ್ಟಡ ಕೆಡವಲಾಗಿದೆ.

ತಮ್ಮ ಮನೆಗಳು ಕಣ್ಣೆದುರೇ ನೆಲಸಮವಾಗುವುದನ್ನು ಕಂಡು ಕುಟುಂಬಸ್ಥರು ಕಣ್ಣೀರಿಟ್ಟರು. ‘ನಮ್ಮ ವಸ್ತುಗಳನ್ನು ಸಾಗಿಸುವುದಕ್ಕಾದರೂ ಅವಕಾಶ ಕೊಡಿ’ ಎಂದು ಅಂಗಲಾಚಿದರು. ‘ಸುಪ್ರೀಂ ಕೋರ್ಟ್ ಆದೇಶ ಇರುವುದರಿಂದ ನಾವೂ ಅಸಹಾಯಕರು’ ಎಂದ ಅಧಿಕಾರಿಗಳು ತೆರವು ಕಾರ್ಯಾಚರಣೆಯನ್ನು ಮುಂದುವರಿಸಿದರು.

2018ರ ಆಗಸ್ಟ್ 3ರ ನಂತರ ನಿರ್ಮಿಸಿರುವ ಕಟ್ಟಡಗಳನ್ನು ಸಕ್ರಮಗೊಳಿಸಲು ಸಾಧ್ಯವಿಲ್ಲ. ಹೀಗಾಗಿ, ಈ ಕಟ್ಟಡಗಳನ್ನು ಒಡೆದು ಹಾಕಬಹುದು ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್ ಮತ್ತು ಸಂಜೀವ್ ಖನ್ನಾ ಅವರನ್ನೊಳಗೊಂಡ ಪೀಠವು ಇತ್ತೀಚೆಗೆ ಆದೇಶ ಮಾಡಿತ್ತು. ಕಟ್ಟಡ ನಿರ್ಮಾಣ ಚಟುವಟಿಕೆ ಸ್ಥಗಿತಗೊಳಿಸುವ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಪೀಠವು ತಾಕೀತು ಮಾಡಿತ್ತು.



ಸೋಮಶೆಟ್ಟಿಹಳ್ಳಿಯಲ್ಲಿ ಡಾ.ಕೆ.ಶಿವರಾಮಕಾರಂತ ಬಡಾವಣೆಗೆ ಭೂಸ್ವಾಧೀನ ಕೈಗೊಳ್ಳುತ್ತಿರುವ ಜಾಗದಲ್ಲಿ ನಿರ್ಮಾಣವಾಗಿದ್ದ ಕಟ್ಟಡವನ್ನು ಬಿಡಿಎ ಸೋಮವಾರ ತೆರವುಗೊಳಿಸಿತು

ಕಷ್ಟಪಟ್ಟು ದುಡಿಮೆ ಮಾಡಿ ಮನೆ ಕಟ್ಟಿದ್ದೆ. ಏಕಾಏಕಿ ಮನೆ ಒಡೆದು ಹಾಕಿದ್ದರಿಂದ ದಿಕ್ಕು ತೋಚದೇ ಕಂಗಲಾಗಿದ್ದೇವೆ. ಈಗ ಬೇರೆಯವರ ಮನೆಯಲ್ಲಿ ಅಶ್ರಯ ಪಡೆಯಬೇಕಾದ ಸ್ಥಿತಿ ಎದುರಾಗಿದೆ

ಗಂಗಾಧರ್, ಸೋಮಶೆಟ್ಟಿಹಳ್ಳಿ ನಿವಾಸಿ

‘ಈ ಬಡಾವಣೆಗೆ ಸ್ವಾಧೀನಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆ ಹೊರಡಿಸಿರುವ ಪ್ರದೇಶದಲ್ಲಿ ಯಾವುದೇ ಕಟ್ಟಡ ನಿರ್ಮಿಸುವಂತಿಲ್ಲ. ಆದರೂ ಕೆಲವರು ಕಟ್ಟಡ ಕಟ್ಟಿಕೊಂಡಿದ್ದರು. ಈ ಪ್ರದೇಶಗಳಲ್ಲಿ 2018ರ ಆ. 3ರ ನಂತರ ನಿರ್ಮಿಸಲಾದ ಕಟ್ಟಡಗಳನ್ನು ತೆರವುಗೊಳಿಸುವಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಆ ಪ್ರಕಾರ ಶೆಡ್‌ಗಳನ್ನು ಒಡೆದಿದ್ದೇವೆ’ ಎಂದು ಬಿಡಿಎ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಾವು ಸಾಲ ಮಾಡಿ ಕಂದಾಯ ನಿವೇಶನ ಖರೀದಿಸಿ ಮನೆ ಕಟ್ಟಿದ್ದೇವೆ. ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿಯನ್ನೂ ಪಡೆದಿದ್ದೇವೆ. ಜಾಗದ ದಾಖಲೆಗಳನ್ನು ಪರಿಶೀಲಿಸಿ ಎಂದರೂ ಅಧಿಕಾರಿಗಳು ಕಿವಿಗೊಡಲಿಲ್ಲ. ನಮಗೆ ಯಾವುದೇ ನೋಟಿಸ್ ನೀಡದೆಯೇ ಬಿಡಿಎ ಅಧಿಕಾರಿಗಳು ಕಟ್ಟಡ ಕೆಡವಿದ್ದಾರೆ’ ಎಂದು ಮನೆ ಕಳೆದುಕೊಂಡವರು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಂತರಾಜಣ್ಣ, ‘ಉಪಗ್ರಹ ಚಿತ್ರಗಳನ್ನು ಆಧರಿಸಿ 2018ರ ನಂತರ ಕಟ್ಟಿದ ಕಟ್ಟಡಗಳನ್ನು ಗುರುತಿಸಿದ್ದೇವೆ. 2018ನಂತರ ಪ್ರತಿ ತಿಂಗಳೂ ಎಲ್ಲೆಲ್ಲ ಕಟ್ಟಡಗಳು ನಿರ್ಮಾಣವಾಗಿವೆ ಎಂಬುದನ್ನು ಪರಿಶೀಲಿಸಿದ್ದೇವೆ. ಇಲ್ಲಿ ಕಟ್ಟಡ ನಿರ್ಮಿಸುವುದಕ್ಕೆ ಸುಪ್ರೀಂ ಕೋರ್ಟ್ ನಿರ್ಬಂಧ ಹೇರಿದ ಬಳಿಕವೂ ಕೆಲವರು ಶೆಡ್‌ಗಳನ್ನು ನಿರ್ಮಿಸಿದ್ದರು. ಅಂತಹವರಿಗೆ ಮೊದಲೇ ನೋಟಿಸ್ ನೀಡಲಾಗಿತ್ತು. ಹಾಗಾಗಿ ಮತ್ತೆ ನೋಟಿಸ್ ನೀಡುವ ಪ್ರಮೇಯ ಎದುರಾಗದು’ ಎಂದರು.

ಶಾಸಕ ತರಾಟೆ: ತೆರವು ಕಾರ್ಯಾಚರಣೆ ಸುದ್ದಿ ತಿಳಿದ ದಾಸರಹಳ್ಳಿ ಕ್ಷೇತ್ರದ ಶಾಸಕ ಆರ್.ಮಂಜುನಾಥ್ ಸೋಮಶೆಟ್ಟಿಹಳ್ಳಿಗೆ ಭೇಟಿ ನೀಡಿದರು. ಬಡವರ ಮನೆಗಳನ್ನು ತೆರವುಗೊಳಿಸಲಾಗುತ್ತಿದೆ ಎಂದೂ ಆಕ್ರೋಶ ವ್ಯಕ್ತಪಡಿಸಿದರು. ಬಿಡಿಎ ಎಂಜಿನಿಯರಿಂಗ್ ಸದಸ್ಯರನ್ನು ತರಾಟೆಗೆ ತೆಗೆದುಕೊಂಡು ಕೋರ್ಟ್ ಆದೇಶವನ್ನು ತೋರಿಸಿ ಎಂದು ಸೂಚಿಸಿದರು. ಮನೆಯವರೇ ಸ್ವತ್ತುಗಳನ್ನು ಸಾಗಿಸುವುದಕ್ಕಾದರೂ ಕಾಲಾವಕಾಶ ಕೊಡುವಂತೆ ಹೇಳಿದರು. ‘ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಕಟ್ಟಡ ತೆರವುಗೊಳಿಸುತ್ತಿದ್ದೇವೆ’ ಎಂದು ಅಸಹಾಯಕತೆ ವ್ಯಕ್ತಪಡಿಸಿದ ಅಧಿಕಾರಿಗಳು ಕಾಲಾವಕಾಶ ನೀಡಲು ನಿರಾಕರಿಸಿದರು. ಬಿಡಿಎ ಕಚೇರಿ ಎದುರು ಮಂಗಳವಾರ ಧರಣಿ ನಡೆಸುವುದಾಗಿ ಮಂಜುನಾಥ್ ಎಚ್ಚರಿಸಿದರು. ಬಳಿಕ ಅಧಿಕಾರಿಗಳು ತೆರವು ಕಾರ್ಯಾಚರಣೆ ಸ್ಥಗಿತಗೊಳಿಸಿದರು.

ಇನ್ನೂ 400ಕ್ಕೂ ಕಟ್ಟಡ ತೆರವು?

ಶಿವರಾಮ ಕಾರಂತ ಬಡಾವಣೆಯ ಭೂಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾದ ಪ್ರದೇಶಗಳಲ್ಲಿ ನಿರ್ಮಾಣವಾಗಿರುವ 400ಕ್ಕೂ ಅಧಿಕ ಕಟ್ಟಡಗಳನ್ನು ತೆರವುಗೊಳಿಸಲು ಬಿಡಿಎ ಸಿದ್ಧತೆ ನಡೆಸಿದೆ.

‘2018ರ ಬಳಿಕ ನಿರ್ಮಾಣವಾಗಿರುವ ಎಲ್ಲ ಕಟ್ಟಡಗಳನ್ನೂ ತೆರವುಗೊಳಿಸುವುದಾಗಿ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದೇವೆ. ಈ ಪ್ರಕರಣದ ವಿಚಾರಣೆ ಇದೇ 29ರಂದು ಇದೆ. ಅದಕ್ಕೆ ಮುನ್ನವೇ ಕಟ್ಟಡ ತೆರವು ಸಂಬಂಧ ಸುಪ್ರೀಂ ಕೋರ್ಟ್‌ಗೆ ವರದಿ ನೀಡಬೇಕಿದೆ. ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸದೇ ಹೋದರೆ ನಾವು ನ್ಯಾಯಾಂಗನಿಂದನೆ ಆರೋಪದ ಮೇಲೆ ಬಂಧನಕ್ಕೊಳಗಾಗಬೇಕಾದೀತು. ಹಾಗಾಗಿ ಭೂಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾದ ಪ್ರದೇಶಗಳಲ್ಲಿರುವ ಕಟ್ಟಡಗಳನ್ನು ತೆರವುಗೊಳಿಸದೇ ವಿಧಿ ಇಲ್ಲ’ ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

ಕಂದಾಯ ನಿವೇಶನದಲ್ಲಿ ಕಟ್ಟಿದ ಕಟ್ಟಡಗಳಿಗೆ ಕುತ್ತು?

‘ಈ ಬಡಾವಣೆಗೆ ಗೊತ್ತುಪಡಿಸಲಾದ ಜಾಗದಲ್ಲಿ ನಿರ್ಮಾಣವಾಗಿರುವ ಕಂದಾಯ ನಿವೇಶನಗಳಿಗೆ ಬದಲಿ ನಿವೇಶನ ನೀಡುವಂತೆ ಸುಪ್ರೀಂ ಕೋರ್ಟ್ ಸಲಹೆ ಹೇಳಿದೆ. ಆದರೆ, ಅಂತಹ ನಿವೇಶನಗಳಲ್ಲಿ 2018ರ ನಂತರ ಕಟ್ಟಡ ನಿರ್ಮಿಸಿದ್ದರೆ ಅದನ್ನು ಕೆಡಹುವಂತೆ ಕೋರ್ಟ್ ಸೂಚನೆ ನೀಡಿದೆ. ಹಾಗಾಗಿ 2018ರ ನಂತರ ಕಟ್ಟಿರುವ ಎಲ್ಲ ಕಟ್ಟಡಗಳು ನೆಲಸಮವಾಗುವುದು ಖಚಿತ’ ಎಂದು ಬಿಡಿಎ ಅಧಿಕಾರಿಯೊಬ್ಬರು ಸ್ಪಷ್ಟಪಡಿಸಿದರು.

‘2018ರ ನಂತರ ಈ ಪ್ರದೇಶಗಳಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ ನೀಡುವುದನ್ನು ಸುಪ್ರೀಂ ಕೋರ್ಟ್ ನಿರ್ಬಂಧಿಸಿತ್ತು. ಆದರೂ ಕೆಲವು ಅಧಿಕಾರಿಗಳು ಮಂಜೂರಾತಿ ನೀಡಿದ್ದಾರೆ. ಇಂತಹ ಮಂಜೂರಾತಿಗಳೂ ಅಕ್ರಮ ಎನಿಸಿಕೊಳ್ಳುತ್ತವೆ. ಮಂಜೂರಾತಿ ಪಡೆದಿದ್ದೇವೆ ಎಂಬ ಕಾರಣಕ್ಕೆ 2018ರ ಬಳಿಕ ಕಟ್ಟಡಗಳನ್ನು ಕಟ್ಟಿದ್ದರೆ ಅವುಗಳನ್ನೂ ಕಳೆದುಕೊಳ್ಳಬೇಕಾಗುತ್ತದೆ’ ಎಂದು ಅವರು ವಿವರಿಸಿದರು.

ಸೈಕಲ್ ಏರಿದ ತೇಜಸ್ವಿ ಸೂರ್ಯಗೆ ಸುರಕ್ಷತೆಯ ಪಾಠ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಸ್ತೆಗಳಲ್ಲಿ ಸೈಕಲ್ ಸವಾರಿ ಮಾಡಿದ ಚಿತ್ರಗಳನ್ನು ಸಂಸದ ತೇಜಸ್ವಿ ಸೂರ್ಯ ತಮ್ಮ ಅಧಿಕೃತ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಸೂರ್ಯ ಅವರ ಈ ನಡೆಗೆ ಅನೇಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಆದರೆ ಅವರು ಸೈಕಲ್ ಸವಾರಿ ವೇಳೆ ಮಾಸ್ಕ್ ಹಾಗೂ ಇತರ ಸುರಕ್ಷತಾ ಸಾಮಗ್ರಿಗಳನ್ನು ಧರಿಸದ ಬಗ್ಗೆ ಅನೇಕರು ಟೀಕೆಯನ್ನೂ ವ್ಯಕ್ತಪಡಿಸಿದ್ದಾರೆ.

ತೇಜಸ್ವಿ ಸೂರ್ಯ ಅವರು ತಮ್ಮ ಸೈಕಲ್ ಸವಾರಿಯ ಚಿತ್ರಗಳ ಜೊತೆ, ‘ಬಿಜೆವೈಎಂನ (ಭಾರತೀಯ ಜನತಾ ಯುವ ಮೋರ್ಚಾ) ಚೀಯರ್ಸ್ ಫಾರ್ ಇಂಡಿಯಾ – ಒಲಿಂಪಿಯನ್‌ನಂತಾಗಿ ಸವಾಲಿನ ಮೂರನೇ ದಿನದ ಚಟುವಟಿಕೆ ಇದು. 12 ಸೂರ್ಯ ನಮಸ್ಕಾರ (ವಾರ್ಮ್‌ಅಪ್), 25.96 ಕಿ.ಮೀ ಸೈಕ್ಲಿಂಗ್, ಸುಮಾರು 600 ಕಿಲೋ ಕ್ಯಾಲರಿ ಕರಗಿಸುವಿಕೆ, ಮಹಾಭಾರತದ ಓದನ್ನು ಮುಂದುವರಿಸುವಿಕೆ.. ನೀವೇನು ಮಾಡಿದ್ದೀರಿ? cheer4india.bjym.org ನಲ್ಲಿ ಹೆಸರು ನೋಂದಾಯಿಸಿ, ನಿಮ್ಮ ಪ್ರಗತಿಯನ್ನು ದಾಖಲಿಸಿ’ ಎಂದು ಭಾನುವಾರ ಟ್ವೀಟ್ ಮಾಡಿದ್ದರು. ಈ ಟ್ವೀಟ್ 1,182 ಬಾರಿ ಮರುಟ್ವೀಟ್ ಆಗಿದೆ. 9327 ಮಂದಿ ಇದನ್ನು ಲೈಕ್ ಮಾಡಿದ್ದಾರೆ.

ಇದಕ್ಕೆ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಡಾ.ಗುರು ಎಂ.ಡಿ, ‘ಸೈಕಲ್ ಸವಾರಿ ವೇಳೆ ಹೆಲ್ಮೆಟ್ ಧರಿಸದಿರುವುದರಿಂದ ಸಾರ್ವಜನಿಕರಿಗೆ ತಪ್ಪು ಸಂದೇಶ ರವಾನೆಯಾಗುತ್ತದೆ. ಆಮದು ಮಾಡಿಕೊಂಡ ಟ್ರೆಕ್ ಬೈಕ್‌ನಲ್ಲಿ ಸವಾರಿ ಮಾಡಿದ್ದೀರಿ. ಮೇಕ್ ಇನ್ ಇಂಡಿಯಾದಿಂದ ಭಾರತದಲ್ಲಿ ಉತ್ತಮ ಸೈಕಲ್‌ಗಳು ಕೂಡಾ ತಯಾರಾಗುತ್ತಿಲ್ಲ ಎಂದು ನೀವು ಇದರಿಂದ ಒಪ್ಪಿಕೊಂಡಂತಾಗುತ್ತದೆ’ ಎಂದು ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಶರಣ ಎಂಬುವರು, ‘ಮಾಸ್ಕ್ ಎಲ್ಲಿಯಪ್ಪಾ, ಪ್ರತಿನಿಧಿಯಾಗಿ ಈ ರೀತಿ ಇದ್ದರೆ ಹೇಗೆ… ಒಳ್ಳೆಯ ಕೆಲಸ ಮಾಡುವಾಗ ದಯವಿಟ್ಟು ಮಾಸ್ಕ್ ಹಾಕ್ಕೊಳ್ಳಿ’ ಎಂದು ಟ್ವೀಟ್ ಮಾಡಿದ್ದಾರೆ.

ಅರುಣ್ ಸುರೇಶ್ ಕುಮಾರ್ ಅವರು, ‘ಸುರಕ್ಷತಾ ಪರಿಕರಗಳನ್ನು ಧರಿಸಿ. ಸದಾ ರಸ್ತೆಯ ಎಡ ಪಥದಲ್ಲೇ ಚಲಿಸಿ. ಇತರರು ಕೂಡಾ ಸುರಕ್ಷಿತವಾಗಿ ಸೈಕಲ್ ಸವಾರಿ ಮಾಡಲು ಪ್ರೇರೇಪಿಸುವಂತೆ ನಿಮ್ಮ ಸ್ಟೇಟಸ್ ಚಿತ್ರಗಳಿರಲಿ. ನೀವು ಹಂಚಿಕೊಳ್ಳುವ ಚಿತ್ರಗಳಲ್ಲಿರುವ ಇತರ ಖಾಸಗಿ ವಾಹನಗಳ ಸಂಖ್ಯೆಯನ್ನು ಮರೆಮಾಚಿ’ ಎಂದು ಸಲಹೆ ನೀಡಿದ್ದಾರೆ.

ಪ್ರಿಯದೀಪ್ತ ಮಿಶ್ರಾ ಅವರು, ‘ನಿಮ್ಮ ನಡೆಯು ಭಾರತದ ಹಳೆಯ ರಾಜಕಾರಣಿಗಳ ಯುಗದ ಕುರಿತ ಚಿತ್ರಣವನ್ನು ಬದಲಿಸುವಂತಿದೆ. ಇಂತಹ ಚಟುವಟಿಕೆಗಳು ಯುವಜನರು ರಾಜಕೀಯ ಸೇರುವುದಕ್ಕೆ ಹೆಚ್ಚೆಚ್ಚು ಪ್ರೇರಣೆ ನೀಡಲಿವೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಉಮೇಶ್ ಶಿವರಾಜು ಅವರು, ‘ಜನರು ನೀಡೊ ಸಂಬಳ ಸವಲತ್ತು ಪಡೆದು ಉಂಡು ತಿಂದು ಈ ರೀತಿ ಬರೇ ನಿಮ್ಮ ದೇಹ, ನಿಮ್ಮ ಓದಿನ ಬಗ್ಗೆ ಟೈಮ್‌ಪಾಸ್ ಮಾಡ್ತಾ ಇದ್ದೀರಾ ನೀವು. ದುರದೃಷ್ಟಕರ! ಎಲ್ಲೆಲ್ಲೂ ನೆರೆ ಹಾವಳಿ ಇದೆ. ಎರಡು ಬಾರಿಯೂ ಅನ್ಯಾಯ ಮಾಡಿತು ಮೋದಿ ಸರ್ಕಾರ. ಈ ಬಾರಿಯಾದರೂ ನೊಂದಿರುವ ಸಂತ್ರಸ್ತರನ್ನು ನೀವು ಗಮನಿಸಿ. ಹೋಗಿ, ಪರಿಹಾರ ತಂದು ಒದಗಿಸಿ’ ಎಂದು ಟ್ವೀಟ್ ಮೂಲಕ ಪ್ರತಿಕ್ರಿಯಿಸಿದ್ದಾರೆ.



ತೇಜಸ್ವಿ ಸೂರ್ಯ ಅವರು ಟ್ವೀಟ್ ಮಾಡಿರುವ ಚಿತ್ರ

ಒಂದೇ ಅಪರಾಧಕ್ಕೆ ಎರಡು ಬಾರಿ ಶಿಕ್ಷೆ ನೀಡಲಾಗದು: ಹೈಕೋರ್ಟ್

ಬೆಂಗಳೂರು: ಆ್ಯಸಿಡ್ ದಾಳಿ ಪ್ರಕರಣದ ಆರೋಪಿಗೆ ಐಪಿಸಿ ಸೆಕ್ಷನ್ 307ರ ಅಡಿಯಲ್ಲಿ ಶಿಕ್ಷೆ ರದ್ದುಪಡಿಸಿರುವ ಹೈಕೋರ್ಟ್, ಸೆಕ್ಷನ್ 326ಎ ಅಡಿಯಲ್ಲಿ ಜೀವಾವಧಿ ಶಿಕ್ಷೆಯನ್ನು ಖಚಿತಪಡಿಸಿದೆ.

ಶಿಕ್ಷಕಿ ಮತ್ತು ಅವರೊಂದಿಗೆ ಇದ್ದ ವಿದ್ಯಾರ್ಥಿನಿ ಮೇಲೆ 2014ರಲ್ಲಿ ಆ್ಯಸಿಡ್ ದಾಳಿ ನಡೆದಿತ್ತು. ಅಪರಾಧಕ್ಕೆ ಸೆಕ್ಷನ್ 326ಎ ಮತ್ತು ಸೆಕ್ಷನ್ 307ರ ಅಡಿಯಲ್ಲಿ ವಿಚಾರಣಾ ನ್ಯಾಯಾಲಯ ಶಿಕ್ಷೆಗೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಆರೋಪಿ ಮಹೇಶ್ ಮೇಲ್ಮನವಿ ಸಲ್ಲಿಸಿದ್ದರು.

ಆ್ಯಸಿಡ್ ದಾಳಿಯಿಂದ ಮಹಿಳೆಯರ ಮೇಲೆ ದೌರ್ಜನ್ಯ ಎಸಗುವ ಆರೋಪಿಗೆ ಕಠಿಣ ಶಿಕ್ಷೆ ವಿಧಿಸಲು 2013ರಲ್ಲಿ 326ಎ ಸೆಕ್ಷನ್ ಜಾರಿಗೆ ತರಲಾಗಿದೆ. ಇದರ ಅಡಿಯಲ್ಲಿ ಅಪರಾಧಿಗೆ ಜೀವಾವಧಿ ಶಿಕ್ಷೆ ಮತ್ತು ₹10 ಲಕ್ಷ ದಂಡ, ಅಲ್ಲದೇ, ಕೊಲೆ ಯತ್ನ ಆರೋಪದಲ್ಲಿ ಸೆಕ್ಷನ್ 307ರ ಅಡಿಯಲ್ಲೂ ಜೀವಾವಧಿ ಶಿಕ್ಷೆ ಮತ್ತು ₹50 ಸಾವಿರ ದಂಡ ವಿಧಿಸಲಾಗಿತ್ತು.

ವಿಚಾರಣೆ ನಡೆಸಿದ ಬಿ. ವೀರಪ್ಪ ಮತ್ತು ವಿ.ಶ್ರೀಶಾನಂದ ಅವರಿದ್ದ ವಿಭಾಗೀಯ ಪೀಠ, ‘ಈ ರೀತಿಯ ಪ್ರಕರಣದಲ್ಲಿ ಸಿಆರ್‌ಪಿಸಿ ಸೆಕ್ಷನ್ 31(2)ರ ನಿಬಂಧನೆ ಕಾರ್ಯರೂಪಕ್ಕೆ ಬರಲಿದೆ. ಒಂದೇ ಅಪರಾಧಕ್ಕೆ ಎರಡು ಬಾರಿ ವಿಚಾರಣೆ ನಡೆಸಲು ಮತ್ತು ಶಿಕ್ಷೆ ವಿಧಿಸಲು ಅವಕಾಶ ಇಲ್ಲ’ ಎಂದು ಹೇಳಿತು.

ಪ್ಲಾಸ್ಟಿಕ್ ಸರ್ಜರಿ ಸೇರಿ ದುಬಾರಿ ಚಿಕಿತ್ಸೆಗೆ ಮಾಡಿರುವ ಖರ್ಚಿನ ಪರಿಹಾರ ಕೋರಿ ದಾವಣಗೆರೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸಲು ಅನುಮತಿ ನೀಡಿತು. ₹10 ಲಕ್ಷ ದಂಡದಲ್ಲಿ ₹9.75 ಲಕ್ಷ ಸಂತ್ರಸ್ತೆಗೆ ಪಾವತಿಸಬೇಕು ಎಂದು ಪೀಠ ಆದೇಶಿಸಿತು.

ಕೆಳಸೇತುವೆಯಲ್ಲಿ ಸಂಚಾರ ಬಂದ್: ದಟ್ಟಣೆ

ಬೆಂಗಳೂರು: ಮೆಜೆಸ್ಟಿಕ್‌ನ ರೈಲ್ವೆ ಕೆಳಸೇತುವೆಯಲ್ಲಿ ವಾಹನಗಳ ಸಂಚಾರ ಬಂದ್ ಮಾಡಲಾಗಿದ್ದು, ಸುತ್ತಮುತ್ತಲ ರಸ್ತೆಗಳಲ್ಲಿ ಸೋಮವಾರ ವಿಪರೀತ ದಟ್ಟಣೆ ಉಂಟಾಯಿತು.

ಓಕಳಿಪುರದಿಂದ ಮೆಜೆಸ್ಟಿಕ್ ಕಡೆಗೆ ಹೋಗುವ ಮಾರ್ಗದಲ್ಲಿರುವ ಕೆಳಸೇತುವೆಯ ದುರಸ್ತಿ ಕೆಲಸ ನಡೆಯುತ್ತಿದೆ. ಹೀಗಾಗಿ, ವಾಹನಗಳ ಓಡಾಟ ಸ್ಥಗಿತಗೊಳಿಸಲಾಗಿದೆ. ಮೆಜೆಸ್ಟಿಕ್‌ನಿಂದ ಓಕಳಿಪುರ ಕಡೆಗೆ ಬರುವ ವಾಹನಗಳು, ಇನ್ನೊಂದು ಕೆಳಸೇತುವೆ ಮೂಲಕ ಸಂಚರಿಸುತ್ತಿವೆ.

ಮಾಗಡಿ ರಸ್ತೆ, ರಾಜಾಜಿನಗರ ಕಡೆಯಿಂದ ಬಂದ ವಾಹನಗಳು, ಓಕಳಿಪುರ ಹಾಗೂ ರೈಲ್ವೆ ಪ್ಲಾಟ್‌ಫಾರಂ ರಸ್ತೆ ಮೂಲಕ ಮುಂದಕ್ಕೆ ಸಾಗಿದವು. ಕೆಲ ವಾಹನಗಳು ಆನಂದ್ ರಾವ್ ವೃತ್ತ ಹಾಗೂ ಮಲ್ಲೇಶ್ವರ ರಸ್ತೆ ಕಡೆ ಸಂಚರಿಸಿದವು. ಈ ಮಾರ್ಗದಲ್ಲಿ ವಿಪರೀತ ದಟ್ಟಣೆ ಉಂಟಾಗಿ, ವಾಹನಗಳು ನಿಧಾನಗತಿಯಲ್ಲಿ ಸಾಗಿದವು.

ಕೆಲ ವಾಹನಗಳು, ಕೆಳಸೇತುವೆಯಲ್ಲಿ ಹಾದು ಆನಂದರಾವ್ ವೃತ್ತದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೇಲ್ಸೇತುವೆ ಮೂಲಕ ಕಾರ್ಪೊರೇಷನ್, ಮೈಸೂರು ರಸ್ತೆ ಕಡೆ ಹೋಗುತ್ತವೆ. ಅಂಥ ವಾಹನಗಳು, ರೈಲ್ವೆ ಪ್ಲಾಟ್‌ಫಾರಂ ರಸ್ತೆ ಮೂಲಕ ಸಾಗಿ ಮೆಜೆಸ್ಟಿಕ್ ತಲುಪಲು ಸಾಕಷ್ಟು ಸಮಯ ಹಿಡಿಯಿತು.


‘ಕೆಳಸೇತುವೆ ಬಂದ್ ಮಾಡಿದ್ದರಿಂದ ಬೇರೆ ಮಾರ್ಗದಲ್ಲಿ ಸಂಚರಿಸಿ ಸುತ್ತುವರಿದು ಮೆಜೆಸ್ಟಿಕ್‌ಗೆ ಬರಬೇಕಾಯಿತು’ ಎಂದು ಸವಾರರೊಬ್ಬರು ಹೇಳಿದ್ದರು.



ವಾಹನಗಳು ಸಂಚರಿಸದಂತೆ ಮೆಜೆಸ್ಟಿಕ್‌ನ ರೈಲ್ವೆ ಕೆಳಸೇತುವೆ ಮಾರ್ಗ ಬಂದ್ ಮಾಡಿರುವುದು

ಮಾಧ್ಯಮ ಅಕಾಡೆಮಿ ಸದಾಶಿವ ಶೆಣೈ ಅಧ್ಯಕ್ಷ

ಬೆಂಗಳೂರು: ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷರನ್ನಾಗಿ ಪತ್ರಕರ್ತ ಕೆ.ಸದಾಶಿವ ಶೆಣೈ ಅವರನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ.



ಸದಸ್ಯರಾಗಿ ಗೋಪಾಲ ಸಿಂಗಪ್ಪಯ್ಯ ಯಡಗೆರೆ, ಕೆ.ಕೆ. ಮೂರ್ತಿ, ಕೂಡ್ಲಿ ಗುರುರಾಜ, ಶಿವಕುಮಾರ್ ಬೆಳ್ಳಿತಟ್ಟೆ, ಶಿವಾನಂದ ತಗಡೂರು, ಸಿ.ಕೆ.ಮಹೇಂದರ್, ಜಗನ್ನಾಥ ಬಾಳ, ದೇವೇಂದ್ರಪ್ಪ ಕಪನೂರು, ಕೆ.ವಿ.ಶಿವಕುಮಾರ್ ಅವರನ್ನು ನೇಮಿಸಲಾಗಿದೆ.

ಮೂಸಂಬಿ–ಕಿತ್ತಳೆ ಹರಾಜು

ಬೆಂಗಳೂರು: ಬೆಂಗಳೂರು ದಕ್ಷಿಣ ತಾಲ್ಲೂಕಿನ ಹುಳಿಮಾವು ತೋಟಗಾರಿಕೆ ಜೈವಿಕ ಕೇಂದ್ರದಲ್ಲಿ ಬೆಳೆದಿರುವ ಮೂಸಂಬಿ, ಕಿತ್ತಳೆ ಫಸಲನ್ನು ಆಗಸ್ಟ್ 8ರಂದು ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ‘ಆಸಕ್ತ ಹಣ್ಣು ಮಾರಾಟಗಾರರು ₹500 ಮುಂಗಡ ಠೇವಣಿ ಪಾವತಿಸಿ ಭಾಗವಹಿಸಬಹುದು’ ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕ: 080-26584904, 9611521806



ನಗರದ ಕನಕಪುರ ರಸ್ತೆ ಬಳಿಯ ಪವನ್ ಹುಂಡೈ ಷೋರೂಂನ ಐದನೇ ವರ್ಷಾಚರಣೆ ಈಚೆಗೆ ನಡೆಯಿತು. ಈ ಸಂದರ್ಭದಲ್ಲಿ ಹುಂಡೈನ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಎಚ್‌. ಪಾರ್ಕ್ ಮತ್ತು ಕಂಪನಿಯ ನಿರ್ದೇಶಕ ತರುಣ್ ಗರ್ಗ್ ಅವರು ಪವನ್ ಹುಂಡೈನ ಅಧ್ಯಕ್ಷ ಸುರೇಶ್ ಬಾಬು ಮತ್ತು ವ್ಯವಸ್ಥಾಪಕ ನಿರ್ದೇಶಕ ಆಲೋಕ್ ಬಿ.ಎಸ್‌. ಅವರಿಗೆ ಶುಭ ಕೋರಿದರು.

ಹೆಚ್ಚುವರಿ ಕಾರ್ಯದರ್ಶಿಯಾಗಿ ಕೃಷ್ಣಮೂರ್ತಿ ಕುಲಕರ್ಣಿ

ಬೆಂಗಳೂರು: ರಾಜ್ಯ ಸರ್ಕಾರವು ಮುಖ್ಯ ಎಂಜಿನಿಯರ್ ವೃಂದದ ಕೆಲವು ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದು, ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದ ಬಿ.ಜಿ. ರಾಮಚಂದ್ರಯ್ಯ ಅವರನ್ನು ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಆಡಳಿತಾಧಿಕಾರಿ (ಕಾಡಾ) ಹುದ್ದೆಗೆ ವರ್ಗಾಯಿಸಲಾಗಿದೆ.

ಶಿವಮೊಗ್ಗದ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಆಡಳಿತಾಧಿಕಾರಿಯಾಗಿದ್ದ ಕೃಷ್ಣಮೂರ್ತಿ ಬಿ. ಕುಲಕರ್ಣಿ ಅವರನ್ನು ಜಲಸಂಪನ್ಮೂಲ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಲಾಗಿದೆ.

ಕೃಷ್ಣಮೂರ್ತಿಯವರ ವರ್ಗಾವಣೆಯಿಂದ ತೆರವಾದ ಸ್ಥಾನಕ್ಕೆ, ಸ್ಥಳ ನಿರೀಕ್ಷೆಯಲ್ಲಿದ್ದ ಆರ್. ಪ್ರಸಾದ್ ಅವರನ್ನು ವರ್ಗಾಯಿಸಲಾಗಿದೆ.

ನಾಲ್ಕು ಬಾರಿಯೂ ಬಿಕ್ಕಟ್ಟಿನಲ್ಲೇ ನಿರ್ಗಮನ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಜಿಲ್ಲೆಯ ಬೂಕನಕೆರೆಯಲ್ಲಿ ಹುಟ್ಟಿ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರಕ್ಕೆ ವಲಸೆ ಬಂದು ಜನ ನಾಯಕನಾಗಿ ಬೆಳೆದ ಬಿ.ಎಸ್. ಯಡಿಯೂರಪ್ಪ ಅವರು ನಾಲ್ಕು ಬಾರಿ ಮುಖ್ಯಮಂತ್ರಿ ಗಾದಿ ಏರಿದ್ದಾರೆ. ಎಲ್ಲ ಸಂದರ್ಭಗಳಲ್ಲೂ ಅಗತ್ಯ ಸಂಖ್ಯಾಬಲದ ಕೊರತೆಯ ನಡುವೆಯೂ 'ಕಸರತ್ತು' ನಡೆಸಿ ಮುಖ್ಯಮಂತ್ರಿಯಾದ ಅವರು, ಬಿಕ್ಕಟ್ಟಿನಲ್ಲೇ ಅಧಿಕಾರದಿಂದ ನಿರ್ಗಮಿಸಿದ್ದಾರೆ

2006ರಲ್ಲಿ ಕಾಂಗ್ರೆಸ್– ಜೆಡಿಎಸ್ ಸಮ್ಮಿಶ್ರ ಸರ್ಕಾರದಿಂದ ಹೊರಬಂದ ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಶಾಸಕರ ಗುಂಪು, ಬಿಜೆಪಿ ಜತೆ ಕೈಜೋಡಿಸಿತ್ತು. ಆಗ ತಲಾ 20 ತಿಂಗಳ ಅವಧಿಗೆ ಮುಖ್ಯಮಂತ್ರಿ ಹುದ್ದೆಯ ಅಧಿಕಾರ ಹಂಚಿಕೆಯಾಗಿತ್ತು.

ಮೊದಲ ಅವಧಿಗೆ ಮುಖ್ಯಮಂತ್ರಿಯಾಗಿ ಕುಮಾರಸ್ವಾಮಿ ಮತ್ತು ಉಪ ಮುಖ್ಯಮಂತ್ರಿಯಾಗಿ ಯಡಿಯೂರಪ್ಪ ಅಧಿಕಾರ ಸ್ವೀಕರಿಸಿದ್ದರು. 20 ತಿಂಗಳ ಬಳಿಕ ಅಧಿಕಾರ ಹಸ್ತಾಂತರಿಸಲು ಹಿಂದೇಟು ಹಾಕಿದ್ದ ಜೆಡಿಎಸ್ ವರಿಷ್ಠರು, ಕೆಲವು ಷರತ್ತು ಮುಂದಿಟ್ಟಿದ್ದರು. ಇದರಿಂದ ಬೇಸರಗೊಂಡ ಯಡಿಯೂರಪ್ಪ ತುಮಕೂರಿನ ಸಿದ್ಧಗಂಗಾ ಮಠಕ್ಕೆ ಭೇಟಿನೀಡಿ, ಅಲ್ಲಿಂದ ರಾಜ್ಯ ಪ್ರವಾಸಕ್ಕೆ ಮುಂದಾಗಿದ್ದರು.

ಅಷ್ಟರಲ್ಲೇ ಮತ್ತೆ ಅಧಿಕಾರ ಹಸ್ತಾಂತರದ ಭರವಸೆ ಜೆಡಿಎಸ್‌ನಿಂದ ಬಂದಿತ್ತು. ವಾಪಸು ಬಂದ ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಮೊದಲ ಬಾರಿಗೆ ಪ್ರಮಾಣವಚನ ಸ್ವೀಕರಿಸಿದ್ದರು. ಆದರೆ, ವಾರದೊಳಗೆ ನಡೆದ ವಿಶ್ವಾಸಮತ ಯಾಚನೆಯಲ್ಲಿ ಜೆಡಿಎಸ್ ಬೆಂಬಲ ನೀಡಲಿಲ್ಲ. ಯಡಿಯೂರಪ್ಪ ರಾಜೀನಾಮೆ ನೀಡಿ, ಪದತ್ಯಾಗ ಮಾಡಿದ್ದರು.

ಲೋಕಾಯುಕ್ತ ವರದಿಯ ಪೆಟ್ಟು: ಜೆಡಿಎಸ್ ತಮಗೆ ಅಧಿಕಾರ ಹಸ್ತಾಂತರಿಸದೇ ವಚನ ಭ್ರಷ್ಟವಾಗಿದೆ ಎಂದು ಯಡಿಯೂರಪ್ಪ ರಾಜ್ಯದ ಉದ್ದಗಲಕ್ಕೆ ಪ್ರಚಾರ ನಡೆಸಿದ್ದರು. 2008ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 110 ಸ್ಥಾನಗಳೊಂದಿಗೆ ಬಹುಮತದ ಸನಿಹ ಬಂದು ನಿಂತಿತ್ತು. 'ಆಪರೇಷನ್ ಕಮಲ'ದ ಹೆಸರಿನಲ್ಲಿ ಆರು ಮಂದಿ ಪಕ್ಷೇತರರೂ ಸೇರಿದಂತೆ ಕೆಲವು ಶಾಸಕರನ್ನು ತಮ್ಮ ತೆಕ್ಕೆಗೆ ಸೆಳೆದಿದ್ದ ಯಡಿಯೂರಪ್ಪ, ಸರ್ಕಾರ ರಚಿಸುವಲ್ಲಿ ಸಫಲವಾಗಿದ್ದರು.

ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಲೋಕಾಯುಕ್ತ ತನಿಖಾ ವರದಿಯಲ್ಲಿ ಯಡಿಯೂರಪ್ಪ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧ ಆರೋಪಗಳಿದ್ದವು. ಈ ಕಾರಣಕ್ಕಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಬಿಜೆಪಿ ಹೈಕಮಾಂಡ್ ಸೂಚಿಸಿತ್ತು. ಹೈಕಮಾಂಡ್ ಒತ್ತಡ ಹೆಚ್ಚಿದಾಗ ಬೇರೆ ಮಾರ್ಗವಿಲ್ಲದೆ 2011ರ ಜುಲೈ 31ರಂದು ಯಡಿಯೂರಪ್ಪ ರಾಜೀನಾಮೆ ನೀಡಿದ್ದರು.

ಪತನ: 2018ರ ವಿಧಾನಸಭಾ ಚುನಾವಣೆಯಲ್ಲಿ 224 ವಿಧಾನಸಭಾ ಕ್ಷೇತ್ರಗಳ ಪೈಕಿ 222 ಕ್ಷೇತ್ರಗಳಲ್ಲಿ ಮಾತ್ರ ಮತದಾನ ನಡೆದಿತ್ತು. 104 ಸದಸ್ಯ ಬಲದೊಂದಿಗೆ ಬಿಜೆಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಕಾಂಗ್ರೆಸ್ 78, ಜೆಡಿಎಸ್ 37 ಸದಸ್ಯರನ್ನು ಹೊಂದಿದ್ದವು. ಬಿಎಸ್‌ಪಿ ಒಬ್ಬರು ಮತ್ತು ಇಬ್ಬರು ಪಕ್ಷೇತರರು ಗೆಲುವು ಸಾಧಿಸಿದ್ದರು.

ಕಾಂಗ್ರೆಸ್ ಮತ್ತು ಜೆಡಿಎಸ್ ಚುನಾವಣೋತ್ತರ ಮೈತ್ರಿಕೂಟ ರಚಿಸಿಕೊಂಡು, ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದವು. ಆದರೆ, ರಾಜ್ಯಪಾಲ ವಜುಭಾಯಿ ವಾಲಾ ಅವರು ಯಡಿಯೂರಪ್ಪ ಅವರಿಗೆ ಸರ್ಕಾರ ರಚನೆಗೆ ಆಹ್ವಾನ ನೀಡಿದ್ದರು. ಯಡಿಯೂರಪ್ಪ 2018ರ ಮೇ 17ರಂದು ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು.

ಬಹುಮತ ಸಾಬೀತುಪಡಿಸಲು ರಾಜ್ಯಪಾಲರು 15 ದಿನ ಕಾಲಾವಕಾಶ ನೀಡಿದ್ದರು. ಆದರೆ, ಕಾಂಗ್ರೆಸ್ ಮತ್ತು ಜೆಡಿಎಸ್ ಇದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದವು. ಒಂದೇ ದಿನದೊಳಗೆ ಬಹುಮತ ಸಾಬೀತುಪಡಿಸುವಂತೆ ಸುಪ್ರೀಂಕೋರ್ಟ್ ಆದೇಶಿಸಿತ್ತು. ಬಹುಮತ ಸಾಬೀತುಪಡಿಸಲು ಸಾಧ್ಯವಾಗದೇ ಮೇ 19ರಂದು ಯಡಿಯೂರಪ್ಪ ರಾಜೀನಾಮೆ ಸಲ್ಲಿಸಿದ್ದರು.

ಸಂಭ್ರಮದ ಕ್ಷಣದಲ್ಲೇ ಪದತ್ಯಾಗ: ಕಾಂಗ್ರೆಸ್ ಮತ್ತು ಜೆಡಿಎಸ್‌ನ 17 ಶಾಸಕರು ರಾಜೀನಾಮೆ ಸಲ್ಲಿಸಿ, ಬಿಜೆಪಿ ಸೇರಿದ್ದರಿಂದ 2019ರಲ್ಲಿ ಕುಮಾರಸ್ವಾಮಿ ನೇತೃತ್ವದ ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಪತನಗೊಂಡಿತ್ತು. ಎರಡನೇ ಬಾರಿ 'ಆಪರೇಷನ್ ಕಮಲ'ದ ಮೂಲಕ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ, 2019ರ ಜುಲೈ 26ರಂದು ಪ್ರಮಾಣವಚನ ಸ್ವೀಕರಿಸಿದ್ದರು.

ಸೋಮವಾರ ತಮ್ಮ ಸರ್ಕಾರ ಎರಡು ವರ್ಷಗಳನ್ನು ಪೂರೈಸಿದ ಸಂಭ್ರಮಾಚರಣೆಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗದ್ಗದಿತರಾಗಿಯೇ ರಾಜೀನಾಮೆ ವಿಷಯ ಪ್ರಕಟಿಸಿದರು. ನಾಲ್ಕನೇ ಬಾರಿಯೂ ಅವರು ಬಿಕ್ಕಟ್ಟಿನಿಂದಾಗಿಯೇ ಅಧಿಕಾರದಿಂದ ನಿರ್ಗಮಿಸಿದರು.

ಬಿಎಸ್‌ವೈಗೆ ಸಚಿವರು, ಶಾಸಕರ ಸಾಥ್

ಪದತ್ಯಾಗ ಘೋಷಿಸಿ, ರಾಜೀನಾಮೆ ಪತ್ರ ಸಹಿತ ರಾಜಭವನಕ್ಕೆ ಹೊರಟ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಸಂಪುಟದ ಕೆಲವು ಸಚಿವರು, ಬೆನ್ನ ಹಿಂದೆ ಕಾಣಿಸಿಕೊಳ್ಳುತ್ತಿದ್ದ ಆಪ್ತ ಶಾಸಕರು, ಮಾಜಿ ಶಾಸಕರು ಸಾಥ್ ನೀಡಿದರು.

ವಿಧಾನಸೌಧದಿಂದ ಕಾರಿನಲ್ಲಿ ನೇರವಾಗಿ ರಾಜಭವನಕ್ಕೆ ತೆರಳಿದ ಯಡಿಯೂರಪ್ಪ, ಸಚಿವ ಸಂಪುಟದ ರಾಜೀನಾಮೆ ಪತ್ರವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಕೈಯಲ್ಲಿಟ್ಟು ಕೆಲವೇ ಕ್ಷಣಗಳಲ್ಲಿ ಹೊರಬಂದರು.


ಬಳಿಕ ರಾಜಭವನದ ಮುಂಭಾಗದಲ್ಲಿ ಸುದ್ದಿಗಾರರ ಜೊತೆ ಯಡಿಯೂರಪ್ಪ ಮಾತನಾಡಿದಾಗ, ಅವರ ಪುತ್ರ, ಸಂಸದ ಬಿ. ವೈ. ರಾಘವೇಂದ್ರ, ಆರ್. ಅಶೋಕ, ಬಸವರಾಜ ಬೊಮ್ಮಾಯಿ, ಡಾ. ಸಿ.ಎನ್. ಅಶ್ವತ್ಥನಾರಾಯಣ್, ಎಸ್. ಸುರೇಶ್‌ಕುಮಾರ್, ಎಂ.ಪಿ. ರೇಣುಕಾಚಾರ್ಯ, ಎಸ್. ಆರ್. ವಿಶ್ವನಾಥ್, ರಾಜು ಗೌಡ, ಡಿ.ಎನ್. ಜೀವರಾಜ್, ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಇದ್ದರು.

ಸುದ್ದಿ 2 ನಿಮಿಷ

'ಪ್ರವಾಹದ ಸಂದರ್ಭದಲ್ಲಿ ಸಿ.ಎಂ. ಬದಲಾವಣೆ ಬೇಕಿರಲಿಲ್ಲ'

ಸಾಗರ: 'ರಾಜ್ಯದ ಹೆಚ್ಚಿನ ಭಾಗದಲ್ಲಿ ಪ್ರವಾಹ ಪರಿಸ್ಥಿತಿ ಇರುವಾಗ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಬದಲಾವಣೆ ಮಾಡಿರುವ ಕ್ರಮ ಸರಿಯಲ್ಲ' ಎಂದು ಕಾಂಗ್ರೆಸ್ ಮುಖಂಡ ಕಾಗೋಡು ತಿಮ್ಮಪ್ಪ ಅಭಿಪ್ರಾಯಪಟ್ಟರು.

ಮುಖ್ಯಮಂತ್ರಿ ಬದಲಾವಣೆ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಹೊಸ ಮುಖ್ಯಮಂತ್ರಿ ಅಧಿಕಾರ ಸ್ವೀಕರಿಸಿ ಆಡಳಿತದ ಮೇಲೆ ಹಿಡಿತ ಸಾಧಿಸಲು ಒಂದಷ್ಟು ಸಮಯ ಬೇಕಾಗುತ್ತದೆ. ಅಲ್ಲಿಯವರೆಗೆ ನೆರೆ ಸಂತ್ರಸ್ತರಿಗೆ ಪರಿಹಾರ ದೊರಕುವುದಿಲ್ಲ. ಈ ಕಾರಣಕ್ಕಾದರೂ ಒಂದಷ್ಟು ಕಾಲ ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿಯಾಗಿ ಮುಂದುವರಿಸಬೇಕಿತ್ತು' ಎಂದರು.



'ಬಿಜೆಪಿಯಲ್ಲಿ ನಾಯಕತ್ವದ ಕುರಿತು ಪರಸ್ಪರ ಒಡಕು ಇದೆ. ಒಮ್ಮತದ ಕೊರತೆಯಿಂದಾಗಿ ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯಬೇಕಾಗಿದೆ. ಅವರ ಎರಡು ವರ್ಷದ ಆಡಳಿತದ ಅವಧಿಯಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ರಾಜ್ಯದ ಅಭಿವೃದ್ಧಿ ಆಗಿಲ್ಲ. ಇವುಗಳೇನೆ ಇದ್ದರೂ ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಬದಲಾವಣೆ ನಿರ್ಧಾರ ಸರಿಯಾದುದ್ದಲ್ಲ' ಎಂದು ಹೇಳಿದರು.

ನಿರುಮ್ಮಳವಾಗಿ ಕುಟುಂಬದೊಂದಿಗೆ ದಿನ ಕಳೆದ ಬಿಎಸ್‌ವೈ

ಬೆಂಗಳೂರು: ರಾಜಭವನಕ್ಕೆ ತೆರಳಿ ರಾಜೀನಾಮೆ ಸಲ್ಲಿಸಿದ ಯಡಿಯೂರಪ್ಪ, ನಂತರ ನೇರವಾಗಿ ಮನೆಗೆ ತೆರಳಿದರು. ಇಡೀ ದಿನ ತಮ್ಮ ಅಧಿಕೃತ ನಿವಾಸ ಕಾವೇರಿಯಲ್ಲೇ ಇದ್ದ ಅವರು, ಪದತ್ಯಾಗದ ಬೇಸರವನ್ನು ತೋರಿಸಿಕೊಳ್ಳದಂತೆ ಎಲ್ಲರೊಂದಿಗೂ ನಗುತ್ತಲೇ ಮಾತನಾಡುತ್ತಾ ಕಾಲ ಕಳೆದರು.

ರಾಜೀನಾಮೆ ಸಲ್ಲಿಸಿ ತೆರಳುತ್ತಿದ್ದ ಅವರನ್ನು ನಿರ್ಗಮಿತ ಸಂಪುಟದ ಸದಸ್ಯರು, ಹಲವು ಶಾಸಕರು ಹಿಂಬಾಲಿಸಿದರು. ಮನೆ ತಲುಪಿದ ಬಳಿಕ ಎದುರಿನ ಮೊಗಸಾಲೆಯಲ್ಲೇ ಕುಳಿತ ಯಡಿಯೂರಪ್ಪ, ಕೆಲಕಾಲ ಎಲ್ಲರೊಂದಿಗೆ ಮಾತುಕತೆ ನಡೆಸಿದರು. ಉಪ ಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಲಕ್ಷ್ಮಣ ಸವದಿ, ಸಚಿವ ಬಸವರಾಜ ಬೊಮ್ಮಾಯಿ, ಆರ್. ಅಶೋಕ ಸೇರಿದಂತೆ ಹಲವು ಸಚಿವರು, ಶಾಸಕರು ಇದ್ದರು.

'ರಾಜ್ಯದ ವಿವಿಧೆಡೆಯಿಂದ ಬಂದಿದ್ದ ನೂರಾರು ಮಂದಿ ಬಿಜೆಪಿ ಮುಖಂಡರು ಸಂಜೆಯವರೆಗೂ ಯಡಿಯೂರಪ್ಪ ಅವರನ್ನು ಭೇಟಿಮಾಡಿದರು. 'ರಾಜೀನಾಮೆಯಿಂದ ನಮಗೆ ನೋವಾಗಿದೆ' ಎಂದು ಕೆಲವು ಮುಖಂಡರು ಬೇಸರ ವ್ಯಕ್ತಪಡಿಸಿದರು. ಎಲ್ಲರನ್ನೂ ಸಮಾಧಾನಿಸಿದ ಯಡಿಯೂರಪ್ಪ, ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿರುವುದಾಗಿ ಭರವಸೆ ನೀಡಿ ಕಳುಹಿಸಿದರು' ಎಂದು ಮೂಲಗಳು ತಿಳಿಸಿವೆ.

ಹೋಟೆಲ್‌ನಲ್ಲಿ ಊಟ: ಯಡಿಯೂರಪ್ಪ ಅವರ ಕುಟುಂಬದ ಬಹುತೇಕ ಸದಸ್ಯರು ಸೋಮವಾರ ಕಾವೇರಿಯಲ್ಲೇ ಇದ್ದರು. ರಾತ್ರಿ ಕುಟುಂಬದ ಸದಸ್ಯರೊಂದಿಗೆ ಹೋಟೆಲ್‌ಗೆ ತೆರಳಿದ್ದ ಯಡಿಯೂರಪ್ಪ, ಅಲ್ಲಿಯೇ ಊಟ ಮುಗಿಸಿ ಮನೆಗೆ ಮರಳಿದರು.

'ಬಿಎಸ್‌ವೈ ಬೆನ್ನಿಗೆ ಚೂರಿ ಹಾಕಿದ್ದಾರೆ'

ಬೆಂಗಳೂರು: 'ಬಿಜೆಪಿ ನಾಯಕರು ಯಡಿಯೂರಪ್ಪ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಿದ್ದಾರೆ. ರಾಜೀನಾಮೆ ವಿಚಾರ ಪ್ರಸ್ತಾಪಿಸುವಾಗ ಅವರು ಕಣ್ಣೀರಿಟ್ಟಿದ್ದು, ಆ ನೋವು ಕೊಟ್ಟವರು ಯಾರು ಎಂಬುದನ್ನು ಅವರು ಬಹಿರಂಗಪಡಿಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ಬಿಜೆಪಿಯ ರಾಜ್ಯ ಮತ್ತು ರಾಷ್ಟ್ರೀಯ ನಾಯಕರು ಯಡಿಯೂರಪ್ಪ ಅವರಿಗೆ ಮೊದಲಿನಿಂದಲೂ ತೊಂದರೆ ಕೊಟ್ಟಿದ್ದಾರೆ. ವಿರುದ್ಧ ಮಾತನಾಡಿದವರನ್ನು ಅವರ ಪಕ್ಷದ ಹೈಕಮಾಂಡ್ ನಿಯಂತ್ರಿಸಲಿಲ್ಲ. ರಾಜೀನಾಮೆ ಕೊಟ್ಟು ಇದೆಲ್ಲದಕ್ಕೂ ಅವರು ತೆರೆ ಎಳೆದಿದ್ದಾರೆ. ಯಡಿಯೂರಪ್ಪ ಅವರನ್ನು ಬಿಜೆಪಿ ನಾಯಕತ್ವದಿಂದ ಬದಲಿಸಿದ್ದರಿಂದ ನಮಗೇನೂ ಲಾಭ ಇಲ್ಲ. ಮುಂದಿನ ದಿನಗಳಲ್ಲಿ ಬಿಜೆಪಿಯನ್ನು ಬದಲಿಸಬೇಕು ಎಂದು ರಾಜ್ಯದ ಜನರೇ ತೀರ್ಮಾನಿಸಿದ್ದಾರೆ' ಎಂದೂ ಹೇಳಿದರು.

ಎನ್‌.ಎಚ್‌ 75: ಲಘು ವಾಹನಗಳ ಸಂಚಾರಕ್ಕೆ ಅನುಮತಿ

ಹಾಸನ: ರಾಷ್ಟ್ರೀಯ ಹೆದ್ದಾರಿ 75ರ ಬೆಂಗಳೂರು- ಮಂಗಳೂರು ರಸ್ತೆಯಲ್ಲಿ ಗಂಟೆಗೆ 30 ಕಿ.ಮೀ ವೇಗದಲ್ಲಿ ಲಘು ವಾಹನಗಳ ಸಂಚಾರಕ್ಕೆ ಜಿಲ್ಲಾಧಿಕಾರಿ ಆರ್.ಗಿರೀಶ್ ಅನುಮತಿ ನೀಡಿ ಆದೇಶ ಹೊರಡಿಸಿದ್ದಾರೆ.

ಕಾರು, ಜೀಪ್, ಟೆಂಪೊ, ಮಿನಿ ವ್ಯಾನ್, ದ್ವಿಚಕ್ರ ವಾಹನಗಳು, ಆ್ಯಂಬುಲೆನ್ಸ್ ಹಾಗೂ ಸಾರ್ವಜನಿಕರು ಸಂಚರಿಸುವ ಬಸ್‌ಗಳಿಗೆ ಅನುಮತಿ ನೀಡಲಾಗಿದೆ. ಬೆಂಗಳೂರಿನಿಂದ ಮಂಗಳೂರಿಗೆ ಸಂಚರಿಸುವ ವಾಹನಗಳು ಆನೆಮಹಲ್ ಕೆಸಗಾನಹಳ್ಳಿ - ಕ್ಯಾನಹಳ್ಳಿ - ಹೆಗ್ಗದ್ದೆ ಮಾರ್ಗದ ಮೂಲಕ ಹೋಗಬಹುದು.

ಮಂಗಳೂರಿನಿಂದ ಬೆಂಗಳೂರು ಕಡೆಗೆ ಸಂಚರಿಸುವ ವಾಹನಗಳು ಮಾರ್ಗ-1 ರಲ್ಲಿ ಮಾರನಹಳ್ಳಿ - ಕ್ಯಾಮನಹಳ್ಳಿ - ಹಾರ್ಲೆ ಕೂಡಿಗೆ - ಆನೆಮಹಲ್ ಮಾರ್ಗದ ಮೂಲಕ ಸಂಚರಿಸಬಹುದು. ಹಾಗೇಯೇ ಮಾರ್ಗ -2ರಲ್ಲಿ ದೊಡ್ಡತಪ್ಪಲೆ-ಕುಂಬರಡಿ-ಹಾರ್ಲೆಕೂಡಿಗೆ-ಆನೆಮಹಲ್ ಮಾಲಕ ಬೆಂಗಳೂರು ಕಡೆಗೆ ಸಂಚರಿಸಬಹುದು ಎಂದು ತಿಳಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 75ರ ದೋಣಿಗಲ್ ಬಳಿ ಭೂ ಕುಸಿತ ಉಂಟಾಗಿ ಈ ಹಿಂದೆ ದೋಣಿಗಲ್ ನಿಂದ ಶಿರಾಡಿ ಘಾಟ್‌ವರೆಗೆ ಎಲ್ಲಾ ರೀತಿಯ ವಾಹನಗಳ ಸಂಚಾರ ನಿರ್ಬಂಧಿಸಲಾಗಿತ್ತು.

ರಾಜ್ಯಪಾಲ ಹುದ್ದೆ ಒಪ್ಪುವುದಿಲ್ಲ: ಕಡ್ಡಿ ಮುರಿದಂತೆ ಹೇಳಿದ ಬಿ.ಎಸ್‌. ಯಡಿಯೂರಪ್ಪ

'ರಾಜಕೀಯದಿಂದ ಹಿಂದೆಸರಿವ ಪ್ರಶ್ನೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಪಾಲ ಹುದ್ದೆಯೂ ಸೇರಿದಂತೆ, ಕೇಂದ್ರದಲ್ಲಿ ಯಾವುದೇ ಸ್ಥಾನಮಾನ ವಹಿಸುವುದಿಲ್ಲ' ಎಂದು ಬಿ.ಎಸ್. ಯಡಿಯೂರಪ್ಪ ಕಡ್ಡಿ ಮುರಿದಂತೆ ಹೇಳಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದ ಬಳಿಕ ರಾಜಭವನದ ಮುಂಭಾಗದಲ್ಲಿ ಸುದ್ದಿಗಾರರಿಗೆ ಈ ಮಾತುಗಳನ್ನು ಹೇಳುವಾಗ ಅವರು ನಿರಾಳರಾಗಿದ್ದರು.

ರಾಜೀನಾಮೆ ನೀಡುವ ವಿಷಯ ಪ್ರಸ್ತಾಪಿಸುವಾಗ ಗದ್ಗದಿತರಾಗಿದ್ದ ಯಡಿಯೂರಪ್ಪ ಅವರ ಮುಖಭಾವ, ಪದತ್ಯಾಗದ ಬಳಿಕ ಸಂಪೂರ್ಣವಾಗಿ ಬದಲಾಗಿತ್ತು. 'ಮುಖ್ಯಮಂತ್ರಿ ಸ್ಥಾನಕ್ಕೆ ಯಾವುದೇ ಹೆಸರನ್ನು ನಾನು ಪ್ರಸ್ತಾಪಿಸುವುದಿಲ್ಲ. ಅದು ಹೈಕಮಾಂಡ್‌ಗೆ ಬಿಟ್ಟದ್ದು. ಅವರು ಯಾರನ್ನು ಮಾಡಿದರೂ ಸಹಕಾರ ಕೊಡುತ್ತೇನೆ' ಎಂದರು.



ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ನಂತರ ರಾಜಭವನದಿಂದ ಹೊರಬರುತ್ತಿರುವ ಬಿ.ಎಸ್‌. ಯಡಿಯೂರಪ್ಪ. ರೇಣುಕಾಚಾರ್ಯ, ಡಾ. ಸಿ.ಎನ್‌. ಅಶ್ವತ್ಥನಾರಾಯಣ ಇದ್ದರು –ಪ್ರಜಾವಾಣಿ ಚಿತ್ರ

'ರಾಜೀನಾಮೆ ನೀಡುವಂತೆ ದೆಹಲಿಯಿಂದ ಯಾವುದೇ ಒತ್ತಡ ಇಲ್ಲ. ನಾನೇ ನಿರ್ಧಾರ ಮಾಡಿ ರಾಜೀನಾಮೆ ಕೊಟ್ಟು, ಬೇರೆಯವರಿಗೆ ಅವಕಾಶ ಸಿಗಬೇಕು, ಬೇರೆಯವರೂ ಮುಖ್ಯಮಂತ್ರಿಯಾಗಲು ಅವಕಾಶ ಮಾಡಿಕೊಟ್ಟಿದ್ದೇನೆ' ಎಂದು ಅವರು ಹೇಳಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ನೂರಕ್ಕೆ ನೂರು ಸಕ್ರಿಯ ರಾಜಕೀಯದಲ್ಲಿ ಮುಂದುವರಿಯುತ್ತೇನೆ. ಮತ್ತೊಮ್ಮೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕು. ನಾಳೆಯಿಂದಲೇ ಆ ಕೆಲಸ ಆರಂಭಿಸುತ್ತೇನೆ. ಸಂಘಟನೆಯನ್ನು ಬಲಪಡಿಸುತ್ತೇನೆ. ಯಾವ ಕಾರಣಕ್ಕೂ ರಾಜಕೀಯದಿಂದ ಹಿಂದೆಸರಿಯುವ ಪ್ರಶ್ನೆ ಇಲ್ಲ. ಆ ಬಗ್ಗೆ ಅನುಮಾನ ಬೇಡ' ಎಂದು ಹೇಳಿದರು.

'75 ವಯಸ್ಸು ದಾಟಿದವರಿಗೆ ದೇಶದ ಎಲ್ಲೂ ಪಕ್ಷ ಅಧಿಕಾರ ಕೊಟ್ಟಿಲ್ಲ. ಎರಡು ತಿಂಗಳ ಹಿಂದೆಯೇ ರಾಜೀನಾಮೆಗೆ ನಿರ್ಧಾರ ಮಾಡಿದ್ದೆ. ಎರಡು ವರ್ಷ ತುಂಬಿದ ಶುಭ ಸಂದರ್ಭದಲ್ಲಿ ನೀಡುವುದು ಒಳ್ಳೆಯದು ಎಂದು ಕೊಟ್ಟಿದ್ದೇನೆ' ಎಂದರು.


ಪೂರ್ಣಾವಧಿ ಪೂರೈಸದ ಶಿವಮೊಗ್ಗದ ಮುಖ್ಯಮಂತ್ರಿಗಳು

ರಾಜ್ಯಕ್ಕೆ ನಾಲ್ವರು ಮುಖ್ಯಮಂತ್ರಿಗಳನ್ನು ನೀಡಿರುವ ಶಿವಮೊಗ್ಗ, ನಾಲ್ಕು ಬಾರಿ ಯಡಿಯೂರಪ್ಪ ಪ್ರಮಾಣ ವಚನ

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಕರ್ನಾಟಕದ ಇತಿಹಾಸದಲ್ಲಿ ಜಿಲ್ಲೆಯ ನಾಲ್ವರು ಮುಖ್ಯಮಂತ್ರಿ ಸ್ಥಾನ ಅಲಂಕರಿಸಿದ್ದಾರೆ. ಯಾರೊಬ್ಬರಿಗೂ ಪೂರ್ಣಾವಧಿ ಅಧಿಕಾರ ನಡೆಸಲು ಅವಕಾಶ ದೊರೆತಿಲ್ಲ.

ತೀರ್ಥಹಳ್ಳಿ ಕ್ಷೇತ್ರದ ಕಡಿದಾಳು ಮಂಜಪ್ಪ, ಸೊರಬದ ಎಸ್.ಬಂಗಾರಪ್ಪ, ಅವಿಭಜಿತ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ಕ್ಷೇತ್ರದ ಜೆ.ಎಚ್.ಪಟೇಲ್ ಹಾಗೂ ಶಿಕಾರಿಪುರದ ಬಿ.ಎಸ್.ಯಡಿಯೂರಪ್ಪ ರಾಜ್ಯದ ಮುಖ್ಯಮಂತ್ರಿಗಳಾಗಿ ಅಧಿಕಾರ ನಡೆಸಿದ್ದಾರೆ. ಕಡಿದಾಳ್, ಬಂಗಾರಪ್ಪ ಅವರಿಗೆ ಕಾಂಗ್ರೆಸ್, ಜೆ.ಎಚ್. ಪಟೇಲರಿಗೆ ಜನತಾ ದಳ ಅವಕಾಶ ನೀಡಿತ್ತು. ಯಡಿಯೂರಪ್ಪ ಅವರು ಬಿಜೆಪಿ ಶಾಸಕರಾಗಿ ಮುಖ್ಯಮಂತ್ರಿ ಸ್ಥಾನ ಪಡೆದಿದ್ದರು.



ಕಡಿದಾಳ್ ಮಂಜಪ್ಪ



ಎಸ್‌.ಬಂಗಾರಪ್ಪ



ಜೆ.ಎಚ್‌.ಪಟೇಲ್



ಯಡಿಯೂರಪ್ಪ

ಕಡಿದಾಳ್ ಮಂಜಪ್ಪ ಜಿಲ್ಲೆಯ ಮೊದಲ ಮುಖ್ಯಮಂತ್ರಿ: ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ 1952ರಲ್ಲಿ ನಡೆದ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದ ಕಡಿದಾಳ್ ಮಂಜಪ್ಪ ಅವರು 1956 ಆಗಸ್ಟ್ 19ರಂದು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ಮುಖ್ಯಮಂತ್ರಿಯಾಗಿ ನಾಲ್ಕೂವರೆ ವರ್ಷಗಳು ಕಾರ್ಯ ನಿರ್ವಹಿಸಿದ್ದ ಕೆಂಗಲ್ ಹನುಮಂತಯ್ಯ ಅವರು ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅವರಿಗೆ ದೊರೆತದ್ದು ಕೇವಲ 73 ದಿನಗಳು. ಅದೇ ವರ್ಷ ಅಕ್ಟೋಬರ್ 31ಕ್ಕೆ ವಿಧಾನಸಭೆಯ ಅವಧಿ ಪೂರ್ಣಗೊಂಡಿತ್ತು.

ಎರಡನೆಯವರು ಬಂಗಾರಪ್ಪ: ಸೊರಬ ಕ್ಷೇತ್ರದಿಂದ 1989ರಲ್ಲಿ 6ನೇ ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಸಾರೆಕೊಪ್ಪ ಬಂಗಾರಪ್ಪ ಅವರು ವೀರೇಂದ್ರ ಪಾಟೀಲ್ ನಂತರ 1990 ಅ.17ರಂದು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. 1992ರ ನ. 19ರಂದು ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಕೇಂದ್ರ ನಾಯಕ ನರಸಿಂಹರಾವ್ ಅವರ ಜತೆ ಸಂಘರ್ಷಕ್ಕೆ ಇಳಿದಿದ್ದ ಅವರು ರಾಜಕೀಯ ಕಾರಣಗಳಿಂದ ರಾಜೀನಾಮೆ ನೀಡಿದ್ದರು. ಉಳಿದ ಅವಧಿಗೆ ವೀರಪ್ಪ ಮೊಯಿಲಿ ಅವರು ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದರು.

ಮೂರನೇ ಮುಖ್ಯಮಂತ್ರಿ ಜೆ.ಎಚ್. ಪಟೇಲ್: ಅವಿಭಜಿತ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ಕ್ಷೇತ್ರದಿಂದ 1994ರ ಚುನಾವಣೆಯಲ್ಲಿ ಗೆಲುವು ಕಂಡಿದ್ದ ಜನತಾದಳದ ಜೆ.ಎಚ್. ಪಟೇಲ್ 1996ರ ಮೇ 31ರಂದು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. 1994ರ ವಿಧಾನಸಭಾ ಚುನಾವಣೆಯ ನಂತರ ಜನತಾ ದಳ ಅಧಿಕಾರದ ಚುಕ್ಕಾಣಿ ಹಿಡಿದಿತ್ತು. ಎಚ್.ಡಿ.ದೇವೇಗೌಡರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಅನಿರೀಕ್ಷಿತ ರಾಜಕೀಯ ಬೆಳವಣಿಗೆಯಲ್ಲಿ ಅವರು ದೇಶದ ಪ್ರಧಾನಿಯಾದರು. ಆಗ ಉಪ ಮುಖ್ಯಮಂತ್ರಿಯಾಗಿದ್ದ ಜೆ.ಎಚ್. ಪಟೇಲರಿಗೆ ಮುಖ್ಯಮಂತ್ರಿ ಯೋಗ ಒಲಿದುಬಂದಿತ್ತು. 1999 ಅ.7ರವರೆಗೆ ಉಳಿದ ಅವಧಿ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದರು.

ಮುಖ್ಯಮಂತ್ರಿಯಾಗಿ ಯಡಿಯೂರಪ್ಪ: ಬಿ.ಎಸ್. ಯಡಿಯೂಪ್ಪ ಅವರು 2004ರ ಚುನಾವಣೆಯಲ್ಲಿ 5ನೇ ಬಾರಿ ಶಿಕಾರಿಪುರದಿಂದ ಆಯ್ಕೆಯಾಗಿದ್ದರು. ಅಂದು ರಾಜ್ಯದಲ್ಲಿ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ದೊರೆತಿರಲಿಲ್ಲ. ಹಾಗಾಗಿ, ಕಾಂಗ್ರೆಸ್, ಜೆಡಿಎಸ್ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು. ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದರು. ಕಾಂಗ್ರೆಸ್‌ಗೆ ನೀಡಿದ್ದ ಬೆಂಬಲ ಜೆಡಿಎಸ್ ಹಿಂಪಡೆದಿದ್ದರಿಂದ ಸರ್ಕಾರ ಪತನವಾಗಿತ್ತು. ನಂತರ ಬಿಜೆಪಿ, ಜೆಡಿಎಸ್ 20:20 ಸರ್ಕಾರ ರಚಿಸಲಾಯಿತು. ಮೊದಲ 20 ತಿಂಗಳಿಗೆ ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾದರು. ಹಲವು ನಾಟಕೀಯ ಬೆಳವಣಿಗೆಗಳ ನಂತರ 2007ರ ನ. 12ರಂದು ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಆದರೆ, ಜೆಡಿಎಸ್ ಬೆಂಬಲ ಹಿಂಪಡೆದ ಕಾರಣ ಕೇವಲ 7 ದಿನಕ್ಕೆ ಅವರು ರಾಜೀನಾಮೆ ನೀಡಬೇಕಾಯಿತು. ಮೂರೂವರೆ ವರ್ಷಕ್ಕೆ ಆಗಿನ ವಿಧಾನಸಭೆ ವಿಸರ್ಜನೆಯಾಗಿತ್ತು.

2008ರ ಚುನಾವಣೆಯಲ್ಲಿ ಶಿಕಾರಿಪುರದಿಂದ 6ನೇ ಬಾರಿ ಆಯ್ಕೆಯಾದ ಅವರು ಆ ವರ್ಷ ಮೇ 30ರಂದು ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಪಕ್ಷದಲ್ಲೇ ನಡೆದ ಆಂತರಿಕ ಕಲಹ, ಭ್ರಷ್ಟಾಚಾರ ಪ್ರಕರಣಗಳ ಪರಿಣಾಮ 2011ರ ಜುಲೈ 31ರಂದು ರಾಜೀನಾಮೆ ನೀಡಿದ್ದರು. ಉಳಿದ ಅವಧಿಗೆ ಸದಾನಂದ ಗೌಡ, ಜಗದೀಶ ಶೆಟ್ಟರ್ ಮುಖ್ಯಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದ್ದರು.

2018ರ ಮೇನಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲೂ 8ನೇ ಬಾರಿ ಶಿಕಾರಿಪುರದಿಂದ ಆಯ್ಕೆಯಾದ ನಂತರ ಮೇ 17ರಂದು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಆದರೆ, 104 ಶಾಸಕರ ಬಲ ಹೊಂದಿದ್ದ ಅವರಿಗೆ ಅದೃಷ್ಟ ಒಲಿಯಲಿಲ್ಲ. ಸುಪ್ರೀಂ ಕೋರ್ಟ್ ಆದೇಶದಂತೆ ಎರಡೇ ದಿನದಲ್ಲಿ ಬಹುಮತ ಸಾಬೀತುಪಡಿಸುವ ಅನಿವಾರ್ಯತೆಗೆ ಸಿಲುಕಿ ರಾಜೀನಾಮೆ ನೀಡಿದ್ದರು.

ನಂತರ ಕಾಂಗ್ರೆಸ್ ಸಹಭಾಗಿತ್ವದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಎಚ್.ಡಿ.ಕುಮಾರಸ್ವಾಮಿ ಸರ್ಕಾರ ಉರುಳಿಸಿ 2019 ಜುಲೈ 26ರಂದು ನಾಲ್ಕನೇ ಬಾರಿ ಮುಖ್ಯಮಂತ್ರಿಗಾದಿ ಅಲಂಕರಿಸಿದ್ದರು. ಎರಡು ವರ್ಷಗಳ ಅವಧಿ ಪೂರ್ಣಗೊಂಡ ದಿನವೇ ಮತ್ತೆ ರಾಜೀನಾಮೆ ನೀಡಿದ್ದಾರೆ.

'ಬಿಎಸ್‌ವೈ ಮುಕ್ತ ಮಾಡುವುದೇ ಮನುವಾದಿ ಬಿಜೆಪಿಗರ ಗುರಿ'

ಬೆಂಗಳೂರು: 'ಕಾಂಗ್ರೆಸ್– ಜೆಡಿಎಸ್ ಪಕ್ಷದ 17 ಶಾಸಕರನ್ನು ಸೆಳೆದು ಅನೈತಿಕ ಮಾರ್ಗದಲ್ಲಿ ಸರ್ಕಾರ ರಚಿಸಲು ಹೊರಟಿದ್ದ ಪ್ರಯತ್ನಕ್ಕೆ ಬೆಂಬಲ ನೀಡಿದ್ದ ಬಿಜೆಪಿ ವರಿಷ್ಠರು, ಸರ್ಕಾರ ರಚನೆಗೆ ಕಾರಣವಾದ ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ ನಿರ್ದಾಕ್ಷಿಣ್ಯವಾಗಿ ಮನೆಗೆ ಕಳುಹಿಸಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ಎಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

'ಯಡಿಯೂರಪ್ಪನಂಥ ನಾಯಕನನ್ನು ಎರಡನೇ ಆಲೋಚನೆ ಇಲ್ಲದೇ ಮುಖ್ಯಮಂತ್ರಿ ಸ್ಥಾನದಿಂದ ಬಿಜೆಪಿ ಕೆಳಗಿಳಿಸಿದೆ. ಆ ಮೂಲಕ, ಯಡಿಯೂರಪ್ಪನವರಿಗೂ ಮನುವಾದಿಗಳ ಫ್ಯಾಸಿಸಂನ ಸ್ವರೂಪ ಹೇಗಿರುತ್ತದೆ ಎಂಬುದರ ಪರಿಚಯವಾಗಿದೆ. ಫ್ಯಾಸಿಸಂನ ಮೂಲ ಮಂತ್ರ ಮತ್ತು ತಂತ್ರ ಇದೇ ಆಗಿದೆ' ಎಂದಿದ್ದಾರೆ.

ಸಂಭ್ರಮವಿಲ್ಲದ ಸಾಧನಾ ಪರ್ವ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರಕ್ಕೆ ಎರಡು ವರ್ಷ ತುಂಬಿದ್ದರಿಂದ ಆಯೋಜಿಸಿದ್ದ 'ಸಾಧನಾ ಪರ್ವ' ಸಮಾರಂಭದಲ್ಲಿ ಸಂಭ್ರಮವೇ ಮಾಯವಾಗಿತ್ತು. ಮುಖ್ಯಮಂತ್ರಿ ಸ್ಥಾನಕ್ಕೆ ಬಿ.ಎಸ್. ಯಡಿಯೂರಪ್ಪ ಅವರು ರಾಜೀನಾಮೆ ನೀಡುವುದಾಗಿ ಪ್ರಕಟಿಸುತ್ತಿದ್ದಂತೆ ಅಲ್ಲಿ ಸೇರಿದ್ದ ಸಚಿವರು ಮತ್ತು ಶಾಸಕರು ಒಂದು ಕ್ಷಣ ದಿಗ್ಭ್ರಾಂತರಾದರು.

ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಸೇರಿದ್ದ ಕೆಲ ಸಚಿವರು, ಶಾಸಕರು ರಾಜೀನಾಮೆ ನೀಡುವ ಬಗ್ಗೆ ಆರಂಭದಲ್ಲಿ ಸಂದೇಹ ಹೊಂದಿದ್ದರು. 'ವರಿಷ್ಠರಿಂದ ಸಂದೇಶ ಬಾರದಿದ್ದರೆ, ಮುಂದಿನ ತೀರ್ಮಾನ ಪ್ರಕಟಿಸುತ್ತೇನೆ' ಎಂದಿದ್ದ ಯಡಿಯೂರಪ್ಪ ಅಷ್ಟು ಸುಲಭದಲ್ಲಿ ರಾಜೀನಾಮೆ ನೀಡುತ್ತಾರೆಯೇ ಎಂಬುದು ಅವರ ಹಲವು ಸಚಿವರ ಮತ್ತು ಶಾಸಕರ ಸಂಶಯಕ್ಕೆ ಕಾರಣವಾಗಿತ್ತು.

ಉಪ ಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ, ಡಾ. ಸಿ. ಎನ್. ಅಶ್ವತ್ಥನಾರಾಯಣ ಮತ್ತು ಲಕ್ಷಣ ಸವದಿ ಅವರನ್ನು ವೇದಿಕೆಯಲ್ಲಿ ಜತೆಗೇ ಕೂರಿಸಿಕೊಂಡಿದ್ದರು. ಎಲ್ಲವೂ ಯಾಂತ್ರಿಕವಾಗಿಯೇ ನಡೆದವು. ಎರಡು ವರ್ಷಗಳ ಸಾಧನೆಯ ಬಗ್ಗೆ ಜನ ಸಾಮಾನ್ಯರ ಅಭಿಪ್ರಾಯಗಳು ಮತ್ತು ಉದ್ಯಮಿಗಳ ಸಂದೇಶದ ವಿಡಿಯೋ ದೃಶ್ಯಾವಳಿಗಳನ್ನು ಪ್ರದರ್ಶಿಸಲಾಯಿತು.

ಭಾಷಣದ ಕೊನೆಗೆ ರಾಜೀನಾಮೆ ಪ್ರಕಟಿಸಿ 'ಎಲ್ಲರೂ ಒಟ್ಟಿಗೆ ಊಟ ಮಾಡೋಣ ಬನ್ನಿ' ಎಂದು ಶಾಸಕರು ಮತ್ತು ಸಚಿವರನ್ನು ಆಹ್ವಾನಿಸಿದರು. ಮೂವರು ಡಿಸಿಎಂಗಳು ಮತ್ತು ಶೆಟ್ಟರ್ ಜತೆಗೆ ಕುಳಿತು ಊಟದ ಶಾಸ್ತ್ರ ಮುಗಿಸಿ ರಾಜಭವನದತ್ತ ತೆರಳಿದರು.

ಹಿರಿಯ ಸಚಿವರಾದ ಜಗದೀಶ ಶೆಟ್ಟರ್, ಕೆ.ಎಸ್.ಈಶ್ವರಪ್ಪ, ಬಸವರಾಜ ಬೊಮ್ಮಾಯಿ, ಎಸ್. ಸುರೇಶ್ ಕುಮಾರ್ ಮುಂತಾದವರು ಈ ಬೆಳವಣಿಗೆಯ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲು ಸಿದ್ಧರಿರಲಿಲ್ಲ.

ಕಾರ್ಯಕ್ರಮದಲ್ಲಿ ಸಚಿವ ಸಿ.ಪಿ. ಯೋಗೇಶ್ವರ್ ಕಾಣಿಸಿಕೊಳ್ಳಲಿಲ್ಲ. ಯಡಿಯೂರಪ್ಪ ಅವರ ಕಟು ಟೀಕಾಕಾರರಾದ ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಬೆಲ್ಲದ ಅವರೂ ಇರಲಿಲ್ಲ. ಸರ್ಕಾರಿ ನೌಕರರು ಮತ್ತು ಮಾಧ್ಯಮಕ್ಕೆ ಧನ್ಯವಾದ ಹೇಳಿದರು.

'ಎರಡನೇ ವರ್ಷ ತುಂಬಿದ್ದಕ್ಕೇ ಯಾರೂ ಹಾರ– ತುರಾಯಿ ಹಾಕುವುದು, ಸನ್ಮಾನ ಮಾಡುವುದು ಬೇಡ' ಎಂದು ಯಡಿಯೂರಪ್ಪ ತಾಕೀತು ಮಾಡಿದರು.

ಸರ್ಕಾರಕ್ಕೆ ಬಿಬಿಎಂಪಿ ಪ್ರಸ್ತಾವನೆ

ಪ್ರತಿ ವಿಧಾನಸಭಾ ಕ್ಷೇತ್ರಕ್ಕೊಂದು ಆಸ್ಪತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಂತರ ಆರೋಗ್ಯ ಮೂಲಸೌಕರ್ಯವನ್ನು ಬಲಪಡಿಸಲು ಬಿಬಿಎಂಪಿ ಮುಂದಾಗಿದೆ. ನಗರದಲ್ಲಿ ನಾಲ್ಕು ಹೊಸ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಹಾಗೂ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ತಲಾ ಒಂದು ದ್ವಿತಿಯ ಹಂತದ ಆಸ್ಪತ್ರೆಗಳನ್ನು ನಿರ್ಮಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

'ಸದ್ಯ ಬಿಬಿಎಂಪಿ ಪ್ರಾಥಮಿಕ ಹಂತದ ಆರೋಗ್ಯ ಸೇವೆಯನ್ನು ಹಾಗೂ ಆರು ರೆಫರಲ್ ಆಸ್ಪತ್ರೆಗಳನ್ನು ನಿರ್ವಹಿಸುತ್ತಿದೆ. ಭವಿಷ್ಯದಲ್ಲಿ ಕೋವಿಡ್‌ನಂತಹ ಸಾಂಕ್ರಾಮಿಕ ಕಾಣಿಸಿಕೊಂಡರೆ, ನಿಭಾಯಿಸಲು ವೈದ್ಯಕೀಯ ಸೌಕರ್ಯ ಹೆಚ್ಚಳ ಮಾಡಬೇಕಿದೆ. ಇದಕ್ಕಾಗಿ ರೂಪರೇಷೆ ಸಿದ್ಧಪಡಿಸಿದ್ದೇವೆ. ಪ್ರತಿ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ದ್ವಿತೀಯ ಹಂತದ ಆರೈಕೆ ಒದಗಿಸುವ ಆಸ್ಪತ್ರೆಗಳು ಹಾಗೂ ನಗರದಲ್ಲಿ ಮೂರರಿಂದ ನಾಲ್ಕು ಆಸ್ಪತ್ರೆಗಳನ್ನು ನಿರ್ಮಿಸುವ ಉದ್ದೇಶವಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸುದ್ದಿಗಾರರಿಗೆ ಸೋಮವಾರ ತಿಳಿಸಿದರು.

'ಮನೆ ಮುಳುಗಡೆ ತಡೆಯಲು ಕ್ರಮ'

'ಮಳೆಗಾಲವನ್ನು ಸಮರ್ಥವಾಗಿ ಎದುರಿಸಲು ಬಿಬಿಎಂಪಿ ಸನ್ನದ್ಧವಾಗಿದೆ. ದೀರ್ಘಕಾಲದ ಸಮಸ್ಯೆಗಳನ್ನು ಬಗೆಹರಿಸಲು ಕ್ರಮಕೈಗೊಂಡಿದ್ದೇವೆ' ಎಂದು ಗೌರವ್ ಗುಪ್ತ ತಿಳಿಸಿದರು.

'ಕೆಲವು ಕಡೆ ಮನೆಗಳು ರಾಜಕಾಲುವೆಗಿಂತಲೂ ತಗ್ಗಾದ ಪ್ರದೇಶಗಳಲ್ಲಿವೆ. 40– 50 ವರ್ಷಗಳ ಹಿಂದೆ ಕಟ್ಟಿದ ಇಂತಹ ಮನೆಗಳನ್ನು ಸ್ಥಳಾಂತರ ಮಾಡಲು ಸಾಧ್ಯವಿಲ್ಲ. ಇಂತಹ ಕಡೆ ಪ್ರವಾಹ ತಡೆಯಲು ರಾಜಕಾಲುವೆಯ ತಡೆಗೋಡೆ ಎತ್ತರಿಸುವುದು ಒಂದೇ ದಾರಿ. ಅನೇಕ ಕಡೆ ಈಗಾಗಲೇ ರಾಜಕಾಲುವೆಯ ತಡೆಗೋಡೆ ಎತ್ತರಿಸಲಾಗಿದೆ. ಬಾಕಿ ಇರುವ ಕಡೆಯೂ ಶೀಘ್ರವೇ ತಡೆಗೋಡೆ ಎತ್ತರಿಸಲು ಕ್ರಮಕೈಗೊಳ್ಳಲಿದ್ದೇವೆ' ಎಂದರು.

'ಕೆಲವು ಕಡೆ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡಗಳು ಲಭ್ಯ ಇವೆ. ಇನ್ನು ಕೆಲವು ಕಡೆ ಕಟ್ಟಡಗಳಿಲ್ಲ. ಕೆಲವೆಡೆ ಹೊಸ ಕಟ್ಟಡ ನಿರ್ಮಿಸಬೇಕಾಗುತ್ತದೆ. ಈ ಕುರಿತ ಅಂದಾಜು ವೆಚ್ಚದ ಬಗ್ಗೆಯೂ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಿದ್ದೇವೆ' ಎಂದರು.

ನಗರದಲ್ಲಿ ಇತ್ತೀಚಿನ ದಿನದಲ್ಲಿ 200ರಷ್ಟು ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿದ್ದವು. ಈ ಪ್ರಮಾಣ ದಿಢೀರ್ 500ಕ್ಕೆ ಏರಿಕೆ ಆಗಿದೆ. ಈ ಕುರಿತು ಪ್ರತಿಕ್ರಿಯಿಸಿದ ಗೌರವ್ ಗುಪ್ತ, 'ಕೋವಿಡ್ ಪ್ರಕರಣಗಳ ಪತ್ತೆ ಪ್ರಮಾಣದಲ್ಲಿ ದಿನದಿಂದ ದಿನಕ್ಕೆ ಅಲ್ಪ ವ್ಯತ್ಯಾಸ ಇದ್ದೇ ಇರುತ್ತದೆ. ಏಳು ದಿನಗಳಲ್ಲಿ ಪತ್ತೆಯಾಗುವ ಪ್ರಕರಣಗಳ ಸರಾಸರಿಯನ್ನು ತೆಗೆದು, ಅದರ ಪ್ರಕಾರ ಸೊಂಕು ಪತ್ತೆ ಪ್ರಮಾಣವನ್ನು ನಿರ್ಧರಿಸಲಾಗುತ್ತದೆ. ಕೋವಿಡ್ ಪರೀಕ್ಷೆಯ ಪ್ರಮಾಣದಲ್ಲೂ ದಿನದಿಂದ ದಿನಕ್ಕೆ ವ್ಯತ್ಯಾಸ ಇರುತ್ತದೆ. ಹಾಗಾಗಿ ಒಂದು ದಿನದ ಅಂಕಿ ಅಂಶವನ್ನು ಆಧರಿಸಿ ಯಾವುದೇ ನಿರ್ಧಾರಕ್ಕೆ ಬರಲಾಗದು' ಎಂದರು.

'ಕೋವಿಡ್ ಪ್ರಕರಣಗಳ ಸಂಖ್ಯೆ ಎಷ್ಟೇ ಇರಲಿ, ನಮ್ಮಲ್ಲಿನ ಸಿದ್ಧತೆ ಹಾಗೂ ಮುನ್ನೆಚ್ಚರಿಕೆ ಕಡಿಮೆ ಆಗಬಾರದು' ಎಂದು ತಿಳಿಸಿದರು.

ಕಾಲೇಜು ವಿದ್ಯಾರ್ಥಿಗಳಿಗೆ ಲಸಿಕೆಯ ಮೊದಲ ಡೋಸ್ ಸಿಗದ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು, 'ಸರ್ಕಾರದ ಆದೇಶ ಪ್ರಕಾರ ಒಂದು ಡೋಸ್ ಪಡೆದವರು ಮಾತ್ರ ತರಗತಿಗೆ ಹಾಜರಾಗಲು ಅವಕಾಶ ಇದೆ. ವಿದ್ಯಾರ್ಥಿಗಳಿಗೆ ವಿಶೇಷ ಶಿಬಿರಗಳನ್ನು ಆಯೋಜಿಸಿ ಲಸಿಕೆ ನೀಡಿದ್ದೇವೆ. ಈಗಾಗಲೇ ನಗರದಲ್ಲಿ 1.80 ಲಕ್ಷ ವಿದ್ಯಾರ್ಥಿಗಳು ಲಸಿಕೆಯ ಮೊದಲ ಡೋಸ್ ಪಡೆದಿದ್ದಾರೆ' ಎಂದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,25,227 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
8,182 ▲	12,01,209 ▲	15,835 ▲

ದಿನದ ಏರಿಕೆ	
ಹೊಸ ಪ್ರಕರಣ	467 ▲
ಗುಣಮುಖ	497 ▲
ಸಾವು	3

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	19.51 ಕೋಟಿ ▲	3.14 ಕೋಟಿ
ಸಕ್ರಿಯ ಪ್ರಕರಣ	1.39 ಕೋಟಿ ▲	3.92 ಲಕ್ಷ ▼
ಗುಣಮುಖ	17.70 ಕೋಟಿ ▲	3.06 ಕೋಟಿ
ಸಾವು	41.80 ಲಕ್ಷ ▲	4.21 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.28 ಲಕ್ಷ ▲	30,092 ▼
ಗುಣಮುಖ	2.99 ಲಕ್ಷ ▼	41,606 ▼
ಸಾವು	6,917 ▼	415 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರಿಟನ್	ಸ್ಪೇನ್	ರಷ್ಯಾ
28,985 ▼	20,542	24,072

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಬ್ರಿಟನ್
50.60 ▲	7.89 ▲	11.17 ▲

(*ರಾತ್ರಿ 12ಗಂಟೆಯವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.31 ಲಕ್ಷ
ತಮಿಳುನಾಡು	33,937 ▲
ದೆಹಲಿ	25,044 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	62.69
ಕೇರಳ	32.83
ತಮಿಳುನಾಡು	25.50 ▲

ಪ್ರಜಾವಾಣಿ ಗ್ರಾಫಿಕ್ಸ್

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ



‘ಮಂತ್ರಿ ಮಂಡಲ ರಚನೆಗೂ ಅವಕಾಶ ನೀಡಲಿಲ್ಲ • ಪ್ರವಾಹದ ವೇಳೆ ರಾಜ್ಯದಾದ್ಯಂತ ಹುಚ್ಚನಂತೆ ತಿರುಗಾಡಿದೆ’

ಹೆಜ್ಜೆ ಹೆಜ್ಜೆಗೂ ಅಗ್ನಿಪರೀಕ್ಷೆ: ಕಣ್ಣೀರಿಟ್ಟ ಬಿಎಸ್‌ವೈ

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಸರ್ಕಾರದ ಎರಡನೇ ವರ್ಷದ ಆಚರಣೆಯ ನಂತರ ಮುಖ್ಯಮಂತ್ರಿ ಊಟ ಮಾಡಿದರು. ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಲಕ್ಷ್ಮಣ ಸವದಿ, ಸಚಿವರಾದ ಜಗದೀಶ ಶೆಟ್ಟರ್, ವಿ.ಸೋಮಣ್ಣ, ಜೆ.ಸಿ ಮಾಧುಸ್ವಾಮಿ ಇದ್ದರು.

ಬೆಂಗಳೂರು: ‘ಕಣ್ಣುಗಳು ಕೆಂಪಗಾಗಿದ್ದವು. ಮುಖದಲ್ಲಿ ನಗುವಿನ ಸುಳಿವೇ ಇರಲಿಲ್ಲ. ತಮ್ಮ ಸುದೀರ್ಘ ರಾಜಕೀಯ ಜೀವನ ಯಾನದ ಒಂದೊಂದೇ ಘಟನೆ ನೆನಪುಗಳ ಪದರಗಳನ್ನು ಬಿಡಿಸುತ್ತಾ ಭಾವುಕರಾದರು, ಗದ್ಗದಿತರಾದರು, ಮನದಾಳದ ನೋವು ತಡೆಯಲಾಗದೇ ಕೊನೆಗೆ ಕಣ್ಣೀರು ಧುಮ್ಮಿಕ್ಕಿತು . . .’

ಇದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಕೊನೆಯ ಮತ್ತು ವಿದಾಯದ ಭಾಷಣದ ಯಥಾವತ್ತು ದೃಶ್ಯ. ಎಂದಿನ ಗುಡುಗು–ಸಿಡಿಲಿನ ಅಬ್ಬರ ಇರಲಿಲ್ಲ, ಸೋನೆ ಮಳೆಯ ಬಾಷ್ಪದಂತಿತ್ತು.

ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಸರ್ಕಾರದ ಎರಡನೇ ವರ್ಷದ ಆಚರಣೆ ನಡೆದರೂ, ಅಲ್ಲಿ ಸಂಭ್ರಮ ಮರೆಯಾಗಿತ್ತು. ಯಡಿಯೂರಪ್ಪ ತಮ್ಮ ರಾಜಕೀಯ ಜೀವನದ ನೋವು– ನಲಿವನ್ನು ರಾಜ್ಯದ ಜನರ ಮುಂದಿಟ್ಟರು. ಹಲವು ಸಲ ಕಣ್ಣಲ್ಲಿ ನೀರು ಜಿನುಗಿತು. ಕರವಸ್ತ್ರದಿಂದ ಒರೆಸಿಕೊಂಡರು. ಒಂದೆರಡು ಬಾರಿ ಮಾತೇ ಹೊರಡದಂತಾಗಿ, ಅವರು ತಡವರಿಸಿದರು.

ಭಾಷಣದಲ್ಲಿ ಎರಡು ವರ್ಷಗಳ ಸಾಧನೆಗಳನ್ನೇನೂ ಪ್ರಸ್ತಾಪಿಸ-ಲಿಲ್ಲ. ಆರಂಭದಲ್ಲೇ ವಿದಾಯದ ಸುಳಿವು ನೀಡಿದರು. ಆದರೆ, ರಾಜ್ಯದ ಜನರಿಗೆ ಯಾವ ಸಂದೇಶ ನೀಡಬೇಕಿತ್ತೋ ಅದನ್ನು ಸ್ಪಷ್ಟವಾಗಿ ರವಾನಿಸಿದರು.

‘ಎರಡು ವರ್ಷವೂ ಹೆಜ್ಜೆ ಹೆಜ್ಜೆಗೂ ಅಗ್ನಿಪರೀಕ್ಷೆಗಳು ಎದುರಿಸಿದೆ. ಮುಖ್ಯಮಂತ್ರಿ ಆಗಿ ಅಧಿಕಾರ ವಹಿಸಿಕೊಂಡರೂ ಸಂಪುಟ ವಿಸ್ತರಣೆಗೆ ವರಿಷ್ಠರು ಅವಕಾಶ ನೀಡಲಿಲ್ಲ. ಭೀಕರ ಪ್ರವಾಹ ಬಂದಿತ್ತು, ಒಬ್ಬನೇ ಹುಚ್ಚನಂತೆ ರಾಜ್ಯವಿಡೀ ತಿರುಗಾಡಿದೆ’ ಎಂದು ಯಡಿಯೂರಪ್ಪ ಭಾವುಕರಾದರು.

‘ಪ್ರವಾಹದ ಅಬ್ಬರ ಮುಗಿಯುತ್ತಿ-ದ್ದಂತೆ ಕೋವಿಡ್ ಬಂದಿತು. ಒಂದೂವರೆ ವರ್ಷದಿಂದ ಅದರ ವಿರುದ್ಧ ಶಕ್ತಿ ಮೀರಿ ಹೋರಾಟ ಮಾಡಿದ್ದೇವೆ. ಇಡೀ ದೇಶದಲ್ಲಿ ಕೋವಿಡ್ ತಡೆಗಟ್ಟುವಲ್ಲಿ ಕರ್ನಾಟಕ ಯಶಸ್ವಿಯಾಗಿದೆ ಎಂಬ ಮಾತನ್ನು ಕೇಂದ್ರ ಸರ್ಕಾರವೇ ಹೇಳಿತು. ಅಗ್ನಿ ಪರೀಕ್ಷೆಗಳ ಮಧ್ಯೆಯೂ ನಮ್ಮ ಇತಿ ಮಿತಿಯಲ್ಲಿ ರಾಜ್ಯದ ಜನರಿಗಾಗಿ ಕೆಲಸ ಮಾಡಿದ ತೃಪ್ತಿ ಇದೆ’ ಎಂದರು.

‘ಶಿಕಾರಿಪುರದಲ್ಲಿ ಆರಂಭದ ದಿನಗಳಲ್ಲಿ ಹೋರಾಟ ನಡೆಸಲು 50 ಜನರೂ ಸಿಗುತ್ತಿರಲಿಲ್ಲ. ಶಿವಮೊಗ್ಗ, ಶಿಕಾರಿಪುರ, ಬನವಾಸಿ ಹೀಗೆ ಎಲ್ಲ ಕಡೆ ಪಕ್ಷವನ್ನು ಬಲಪಡಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದೆ. ವಿಧಾನಸಭೆಯ-ಲ್ಲಿ ನಾನು ಮತ್ತು ವಸಂತ ಬಂಗೇರ ಆಯ್ಕೆ ಆಗಿ ಬಂದಾಗ ಇದ್ದದ್ದು ಇಬ್ಬರೇ. ಬಂಗೇರ ಪಕ್ಷ ಬಿಟ್ಟರು. ಆದರೆ ನಾನು ಪಕ್ಷ ಬಿಡಲಿಲ್ಲ. ಬೇರೆ ಯಾವುದೇ ಯೋಚನೆ ಮಾಡದೇ ಒಬ್ಬನೇ ವಿಧಾ-ನಸಭೆಯಲ್ಲಿ ಹೋರಾಟ ನಡೆಸಿಕೊಂಡು ಬಂದೆ’ ಎಂದು ನೆನಪಿನ ಸುರುಳಿ ಬಿಚ್ಚಿದರು.

‘ಜನ ಮೆಚ್ಚುವ ರೀತಿಯಲ್ಲಿ ಕೆಲಸ ಮಾಡಿದೆ ಎಂಬ ತೃಪ್ತಿ, ವಿಶ್ವಾಸ ಮತ್ತು ಸಮಾಧಾನ ನನಗಿದೆ. ಮಂಡ್ಯ ಜಿಲ್ಲೆ ಬೂಕನಕೆರೆಯಲ್ಲಿ ಹುಟ್ಟಿದರೂ ಶಿಕಾರಿಪುರಕ್ಕೆ ಹೋದೆ. ಆರ್‌ಎಸ್‌ಎಸ್ ಪ್ರಚಾರಕನಾಗಿ ಕೆಲಸ ಮಾಡಿದೆ. ಪುರಸಭೆ ಚುನಾವಣೆಯಲ್ಲಿ ಗೆದ್ದು ಅಧ್ಯಕ್ಷನಾದೆ. ಒಮ್ಮೆ ದಾರಿಯಲ್ಲಿ ನನ್ನ ಮೇಲೆ ಮಾರಣಾಂತಿಕ ಹಲ್ಲೆ ನಡೆಯಿತು. ಬದುಕಿದರೆ, ಜನರ ಸೇವೆಗೆ ನನ್ನ ಜೀವನ ಮೀಸಲಿಡಬೇಕು ಎಂಬ ಭಾವನೆ ಬಂದಿತು. ಅದೇ ರೀತಿ ನಡೆದುಕೊಂಡೆ’ ಎಂದರು.

‘ಕೇಂದ್ರದಲ್ಲಿ ಅಟಲ್ ಬಿಹಾರಿ ವಾಜಪೇಯಿ ಸರ್ಕಾರ ರಚನೆ ಆದಾಗ ಮಂತ್ರಿ ಆಗಲು ಬನ್ನಿ ಎಂದು ಆಹ್ವಾನ ನೀಡಿದರು. ನಾನು ದೆಹಲಿಗೆ ಬರುವುದಿಲ್ಲ, ಕರ್ನಾಟಕದಲ್ಲಿ ಪಕ್ಷ ಕಟ್ಟಲು ಬಿಡಿ ಎಂದು ಹೇಳಿದ್ದೆ’ ಎಂದು ಹೇಳುವಾಗ ಅವರಿಗೆ ದುಃಖ ಉಮ್ಮಳಿಸಿ ಬಂದಿತು.

‘ಬಿಜೆಪಿಯ ಆರಂಭದ ದಿನಗಳಲ್ಲಿ ಅಟಲ್ – ಅಡ್ವಾಣಿ ರಾಜ್ಯಕ್ಕೆ ಬಂದಾಗ 200 ರಿಂದ 300 ಜನ ಸೇರಿಸುವುದು ಕಷ್ಟ ಆಗುತ್ತಿತ್ತು. ಛಲ ಬಿಡದೇ ಅವರನ್ನು ಕರೆದುಕೊಂಡು ರಾಜ್ಯದ ಉದ್ದಗಲ ಓಡಾಟ ಮಾಡಿದೆ. ಕರ್ನಾಟ-ಕದಲ್ಲಿ ಇಬ್ಬರು ಇದ್ದ ಶಾಸಕರು ನಾಲ್ಕು ಜನ ಆದರು. ಹೀಗೆ ನಾವೆಲ್ಲರೂ ಸೇರಿ ಪಕ್ಷವನ್ನು ಕಟ್ಟಿದೆವು. ಕರ್ನಾಟಕದಲ್ಲಿ ಅಧಿಕಾರ ಹಿಡಿದೆವು. ಹಣದ ಬಲ, ಹೆಂಡದ ಬಲ ಮತ್ತು ತೋಳ್ಬಲದ ವಿರುದ್ಧ ಹೋರಾಡಿದೆವು. ಜನ ನಮ್ಮ ಕೈಬಿಡಲಿಲ್ಲ. ಲಕ್ಷಾಂತರ ಕಾರ್ಯಕರ್ತರ ಶ್ರಮದಿಂದ ಇದು ಸಾಧ್ಯವಾಯಿತು’ ಎಂದು ಯಡಿಯೂರಪ್ಪ ಹೇಳಿದರು.

‘ನಮ್ಮಲ್ಲಿ ಕಾರು ಇಲ್ಲದ ಕಾಲದಲ್ಲಿ ಸೈಕಲ್‌ನಲ್ಲಿ ಓಡಾಡಿ ಪಕ್ಷವನ್ನು ಕಟ್ಟಿದೆವು. ಅವೆಲ್ಲ ನೆನಪಿಸಿಕೊಂಡರೆ ನಗು ಬರುತ್ತದೆ ಮತ್ತು ಆಶ್ಚರ್ಯವೂ ಆಗುತ್ತದೆ. ಇದೀಗ ದೇಶ ಅತಿ ದೊಡ್ಡ ಪಕ್ಷವಾಗಿ ಬೆಳೆದಿದೆ’ ಎಂದು ಹೇಳಿ ಮನತುಂಬಿ ಸಂತಸದಿಂದ ನಕ್ಕರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3y2obme

‘ಸಂತೋಷದಿಂದಲೇ ರಾಜೀನಾಮೆ’

ಭಾಷಣದ ಕೊನೆಯಲ್ಲಿ ರಾಜೀನಾಮೆ ನೀಡುವ ಪ್ರಸ್ತಾಪ ಮಾಡಿದರು. ‘ಅನ್ಯಥಾ ಭಾವಿಸಬಾರದು. ನಾನು ತಮ್ಮೆಲ್ಲರ ಅಪ್ಪಣೆ ಪಡೆದು (ಗಂಟಲು ಕಟ್ಟಿ ತುಸು ಹೊತ್ತ ಮಾತು ನಿಲ್ಲಿಸಿದರು)... ತೀರ್ಮಾನಿಸಿದ್ದೇನೆ. ಎಲ್ಲರೂ ಊಟ ಮಾಡಿದ ನಂತರ ನಾನು ರಾಜಭವನಕ್ಕೆ ಹೋಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಲು ತೀರ್ಮಾನ ಮಾಡಿದ್ದೇನೆ’ ಎನ್ನುವಾಗ ದುಃಖಿತರಾದರು, ಕಣ್ಣಲ್ಲಿ ಮತ್ತೊಮ್ಮೆ ನೀರು ಬಂದಿತ್ತು.

‘ದುಃಖದಿಂದ ಅಲ್ಲ, ಸಂತೋಷದಿಂದ– ಖುಷಿಯಿಂದ ರಾಜೀನಾಮೆ ನೀಡುತ್ತಿದ್ದೇನೆ. ಇದಕ್ಕಾಗಿ ವರಿಷ್ಠರಿಗೆ ಆಬಾರಿಯಾಗಿದ್ದೇನೆ’ ಎಂದರು.

‘ಜನಪ್ರತಿನಿಧಿಗಳು, ಅಧಿಕಾರಿಗಳ ಬಗ್ಗೆ ಜನರಲ್ಲಿ ವಿಶ್ವಾಸ ಕಡಿಮೆ ಆಗುತ್ತಿದೆ. ಪ್ರಾಮಾಣಿಕವಾಗಿ ಕೆಲಸ ಮಾಡಿ ದೇಶ, ರಾಜ್ಯವನ್ನು ಮುಂದಕ್ಕೆ ಒಯ್ಯಬೇಕು ಎಂಬ ಅಪೇಕ್ಷೆ ಮೋದಿ ಅವರದ್ದಾಗಿದೆ’ ಎಂದರು.

‘ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ತೆರಿಗೆ ಸಂಗ್ರಹ ಸಂಪೂರ್ಣ ನಿಂತು ಹೋಯಿತು. ವ್ಯಾಪಾರ– ವಹಿವಾಟು ಬಂದ್ ಆಯಿತು. ಆದರೂ ಅಭಿವೃದ್ಧಿ ಕಾರ್ಯ ನಿಲ್ಲಲಿಲ್ಲ. ಸಾಕಷ್ಟು ಪ್ರಾಮಾಣಿಕ ಅಧಿಕಾರಿಗಳ ಪರಿಶ್ರಮದಿಂದ ಬೆಂಗಳೂರು ಮಾದರಿ ನಗರ ಮಾಡುವ ಪ್ರಯತ್ನ ನಡೆದಿದೆ’ ಎಂದರು.

ಮೋದಿ–ಶಾ ವಾತ್ಸಲ್ಯವಿತ್ತು

‘ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ನನ್ನ ಮೇಲೆ ವಾತ್ಸಲ್ಯವಿದೆ. ಆದ ಕಾರಣ 75 ವರ್ಷ ಮೀರಿದ್ದರೂ 2 ವರ್ಷ ಮುಖ್ಯಮಂತ್ರಿಯಾಗಿ ಕೆಲಸ ಮಾಡಲು ಅವಕಾಶ ನೀಡಿದರು. ಅಬಾರಿಯನ್ನು ಶಬ್ದಗಳಲ್ಲಿ ಹೇಳಲು ಆಗಲ್ಲ, ಅದಕ್ಕಾಗಿ ಅವರಿಗೆ ಋಣಿಯಾಗಿದ್ದೇನೆ’ ಎಂದು ಹೇಳುತ್ತಾ ಮತ್ತೆ ಭಾವುಕರಾದರು.

ದೇಶದಲ್ಲಿ ಮತ್ತೆ ಮೋದಿ ಮತ್ತು ಶಾ ಜೋಡಿ ಗೆದ್ದು ಕೇಂದ್ರದಲ್ಲಿ ಮೂರನೇ ಬಾರಿ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರಬೇಕು. ದೇಶವನ್ನು ಇನ್ನಷ್ಟು ಪ್ರಬಲಗೊಳಿಸಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಬಿಎಸ್‌ವೈ ಅವರ ಕಡೇ ಘೋಷಣೆ

ಒಲಿಂಪಿಕ್ ಕ್ರೀಡೆಗಳಿಗೆ ರಾಜ್ಯದಿಂದ ಹೋಗಿರುವ ಕ್ರೀಡಾಪಟುಗಳು ಪದಕ ಗೆದ್ದರೆ ಸರ್ಕಾರ ವತಿಯಿಂದ ಬಹುಮಾನ ನೀಡುವುದಾಗಿ ಯಡಿಯೂರಪ್ಪ ಪ್ರಕಟಿಸಿದರು. ಚಿನ್ನದ ಪದಕ ಗೆದ್ದರೆ ₹ 5 ಕೋಟಿ, ಬೆಳ್ಳಿ ₹ 3 ಕೋಟಿ ಮತ್ತು ಕಂಚಿನ ಪದಕ ಗೆದ್ದರೆ ₹2 ಕೋಟಿ ಬಹುಮಾನ ನೀಡಲಾಗುವುದು. ಇತರ ರಾಜ್ಯದ ಕ್ರೀಡಾಪಟುಗಳು ಚಿನ್ನದ ಪದಕ ಗೆದ್ದರೆ ₹15 ಲಕ್ಷ, ಬೆಳ್ಳಿಗೆ ₹10 ಲಕ್ಷ ಮತ್ತು ಕಂಚಿನ ಪದಕ ಗೆದ್ದರೆ ₹5 ಲಕ್ಷ ನೀಡುವುದಾಗಿ ಘೋಷಿಸಿದರು.

ನಾಲ್ಕು ದಶಕದ ಹೋರಾಟ: ಐದೇ ವರ್ಷ ಅಧಿಕಾರದಾಟ

ಮುಗಿಯಿತೇ ಯಡಿಯೂರಪ್ಪ ಪರ್ವ?

• ವೈ.ಗ. ಜಗದೀಶ್

ತಪ್ಪು ಮಾಡುವುದು ಸಹಜ; ನಾಯಕ ಅದನ್ನು ತಿದ್ದಿಕೊಂಡು ನಡೆಯಬೇಕು. ಯಡಿಯೂರಪ್ಪ ಅವರು 2019ರಲ್ಲಿ ಅಧಿಕಾರ ಹಿಡಿದಾಗ ಮಾಡಿದ್ದ ತಪ್ಪನ್ನು ತಿದ್ದಿಕೊಂಡಿದ್ದರೆ ಪೂರ್ಣಾವಧಿ ಅವಕಾಶ ಅವರಿಗೆ ಸಿಗುತ್ತಿತ್ತು. ಈಗ ಅವರನ್ನು ಕುರ್ಚಿಯಿಂದ ಇಳಿಸಲು ವಯಸ್ಸಿನ ಜೊತೆಗೆ ಪ್ರಮುಖ ಅಸ್ತ್ರವಾಗಿದ್ದು ಯಡಿಯೂರಪ್ಪ ಅವರನ್ನು ‘ಕಟ್ಟಿ ಹಾಕಿದ್ದ’ ಧೃತರಾಷ್ಟ್ರ ಪ್ರೇಮವೇ ಎಂಬುದೇನೂ ಸುಳ್ಳಲ್ಲ.

ಸುದ್ದಿ ವಿಶ್ಲೇಷಣೆ

'ಆಪರೇಷನ್ ಕಮಲ’ ಎಂಬ ಕೆಟ್ಟ ರಾಜಕೀಯ ಪರಂಪರೆಯನ್ನು ದೇಶದಲ್ಲೇ ಹುಟ್ಟುಹಾಕಿ, ದಕ್ಷಿಣದ ಭಾರತದಲ್ಲಿ ಎರಡು ಬಾರಿ ಕೇಸರಿ ಪತಾಕೆ ಹಾರಿಸಿದ್ದ ಬಿ.ಎಸ್.ಯಡಿಯೂರಪ್ಪ ಅವರ ‘ಹೋರಾಟ ಪರ್ವ’ದ ಪ್ರಧಾನ ಅಧ್ಯಾಯ ಮುಕ್ತಾಯದ ಹಂತಕ್ಕೆ ಬಂದು ನಿಂತಿದೆ.

ವರ್ಷದ ಹಿಂದೆ ಬಿಜೆಪಿಯ ‘1–2’ ಎಂದೇ ಬಿಂಬಿತರಾದ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಹೆಣೆದಿದ್ದ ‘ಆಪರೇಷನ್ ಯಡಿಯೂರಪ್ಪ’ ಎಂಬ ಕಾರ್ಯಾಚರಣೆ ತಾರ್ಕಿಕ ಅಂತ್ಯವನ್ನೂ ಕಂಡಿದೆ.

ವಿರೋಧ ಪಕ್ಷದಲ್ಲಿ-ದ್ದಾಗ ಪ್ರಮುಖವಾಗಿ ರೈತರನ್ನೂ ಒಳಗೊಂಡಂತೆ ಜನರ ಪರವಾಗಿ ಹೋರಾಟ, ಸಾಮ–ದಾನ–ಭೇದ–ದಂಡ... ಹೀಗೆ ಸಕಲ ತಂತ್ರವನ್ನೂ ಬಳಸಿ ಅಧಿಕಾರ ಹಿಡಿದ ಮೇಲೆ ಅದನ್ನು ಹೇಗಾದರೂ ಮಾಡಿ ಉಳಿ-ಸಿಕೊಳ್ಳಲೇಬೇಕೆಂಬ ಹೋರಾಟ, ಸರ್ಕಾರ ನಡೆಸಲೂ ಹೋರಾಟ... ಹೀಗೆ ಜೀವಿತಾವಧಿಯ ಉದ್ದಕ್ಕೂ ನಾನಾ ಬಗೆಯ ಹೋರಾಟವನ್ನೇ ಮೈಕಸುವಾಗಿ-ಸಿಕೊಂಡ ಯಡಿಯೂರಪ್ಪ ರಾಜಕೀಯ ವಿಶ್ರಾಂತಿಗೆ ತೆರಳಲಿದ್ದಾರೋ ಅಥವಾ ತಮ್ಮ ಎಂದಿನ ಅವಿಶ್ರಾಂತ ಹೋರಾಟಕ್ಕೆ ಮರಳಲಿದ್ದಾರೋ ಎಂಬುದನ್ನು ಮುಂದಿನ ದಿನಗಳ ವಿದ್ಯಮಾನಗಳೇ ನಿರ್ಧರಿಸಲಿವೆ.

ಒಂದು ಕಾಲದಲ್ಲಿ ಗುಡುಗುತ್ತಿದ್ದ ಯಡಿಯೂರಪ್ಪ ಅವರು ವಯೋಸಹಜ ಸಮಸ್ಯೆಗಳು, ಪಕ್ಷದ ರಾಷ್ಟ್ರೀಯ ಮಟ್ಟದಲ್ಲಿ ರೂಪುಗೊಂಡ ನಾಯಕರ ಧೋರಣೆಗಳ ಕಾರಣಕ್ಕೆ ತಮ್ಮ ಇಳಿಗಾಲದಲ್ಲಿ ನಡುಗುವ ಸ್ಥಿತಿ ತಲುಪಿದ್ದನ್ನು ದೇಶ ನೋಡಿದೆ. ನಾಲ್ಕು ದಶಕಗಳ ಹೋರಾಟ ನಡೆಸಿದರೂ ಅಧಿಕಾರ ಲಕ್ಷ್ಮಿಯೇನೂ ಅವರನ್ನು ಅರಸಿ ಬರಲಿಲ್ಲ. ಸಿಕ್ಕದ ಅಧಿಕಾರವನ್ನು ದಕ್ಕಿಸಿಕೊಳ್ಳುವ ಶೈಲಿಯನ್ನು ರೂಢಿಸಿಕೊಂಡರು. ಅಧಿಕಾರವನ್ನು ಬಿಡಲೊಲ್ಲೆ ಎಂಬ ಹಟ ಅವರನ್ನು ವಿಧಾನಸೌಧದ ಮೂರನೇ ಮಹಡಿಗೆ ಹತ್ತಿಸಿದ್ದು ಬಿಟ್ಟರೆ, ರಾಜ್ಯದ ಜನರು ಅವರಿಗೆ ಚಿನ್ನದ ತಟ್ಟೆಯಲ್ಲಿ ಅಧಿಕಾರವನ್ನು ಕೊಡಲಿಲ್ಲ. ಅಂತಹದೇ ಅವಕಾಶವಾದಿ ಸನ್ನಿವೇಶವನ್ನು ಅನು-ಕೂಲಕಾರಿಯಾಗಿ ಮಾಡಿಕೊಂಡ ಯಡಿಯೂರಪ್ಪ 2006ರಲ್ಲಿ ಉಪಮು-ಖ್ಯಮಂತ್ರಿಯೂ ಆದರು. ಶಾಸನಸಭೆ-ಯಲ್ಲಿ ತಮಗೆ ಸಿಗದೇ ಇದ್ದ ಬಲವನ್ನು ಸೃಷ್ಟಿಸಿಕೊಂಡೇ ಅವರು 2008 ಹಾಗೂ 2019ರಲ್ಲಿ ಮುಖ್ಯಮಂತ್ರಿಯೂ ಆದರು.

2020ರ ಮಾರ್ಚ್‌ನಲ್ಲಿ ‘ಆಪರೇಷನ್ ಯಡಿಯೂರಪ್ಪ’ ಕಾರ್ಯಾಚರಣೆ ಶುರುವಾಗಿದೆ ಎಂದು ‘ಪ್ರಜಾವಾಣಿ’ ಸ್ಪಷ್ಟವಾಗಿ ಬರೆದಿತ್ತು. ಅದೀಗ, ನಿಜವಾಗಿದೆ.

ಬದಲಾಗದ ನಾಯಕ: 2008ರಲ್ಲಿ ಅಧಿಕಾರ ಹಿಡಿಯುವಷ್ಟು ಬಲ ಸಿಗದಾಗ ಪಕ್ಷೇತರರ ಬಲದ ಮೇಲೆ ಅಧಿಕಾರ ಹಿಡಿದ ಯಡಿಯೂರಪ್ಪ, ಅದನ್ನು ಶಾಶ್ವತವಾಗಿಸಲು ‘ಆಪರೇಷನ್ ಕಮಲ’ಕ್ಕೆ ಕೈ ಹಾಕಿದರು. ಆಗ ರಾಜಕಾರಣದಲ್ಲಿ ವಿಜೃಂಭಿಸುತ್ತಿದ್ದ ಗಾಲಿ ಜನಾರ್ದನ ರೆಡ್ಡಿ ಅದಕ್ಕೆ ಹಣವನ್ನೂ ಹೂಡಿದರು. ಬಂಡವಾಳ ಹೂಡಿದ್ದ ರೆಡ್ಡಿ ಸೋದರರು, ಸರ್ಕಾರವನ್ನು ಆಟವಾಡಿಸಲು ತೊಡಗಿದಾಗ ಯಡಿಯೂರಪ್ಪ ಅವರಿಗೆ ಹಣ ಇದ್ದರೆ ಏನನ್ನೂ ಸಾಧಿಸಬಹುದು ಎಂಬ ಆಲೋಚನೆ ಮೊಳತಿತು. ಅದು ವಿಕೋಪಕ್ಕೆ ಹೋಗಿ, ಕೊನೆಗೆ ಭ್ರಷ್ಟಾಚಾರದ ಆಪಾದನೆಯ ಸುಳಿಗೆ ಸಿಕ್ಕಿ ಅಧಿಕಾರವನ್ನು ತ್ಯಾಗ ಮಾಡಬೇಕಾಯಿತು.

ಈಗ ನಾಲ್ಕನೇ ಬಾರಿ ಯಡಿಯೂರಪ್ಪ ಅವರು ‘ಮಾಜಿ’ ಆಗಿದ್ದಾರೆ; ಆಗಿಸಲಾಗಿದೆ. ಏಕೆಂದರೆ ಯಡಿಯೂರಪ್ಪ ಅಷ್ಟು ಸುಲಭಕ್ಕೆ ಅಧಿಕಾರದಿಂದ ಇಳಿಯುವ ಜಾಯ-ಮಾನದವರಲ್ಲ. ಅವರನ್ನು ಮಣಿಸಲು ಬಿಜೆಪಿ ವರಿಷ್ಠರು ಅನೇಕ ತಂತ್ರಗಳನ್ನು ಹೆಣೆದಿದ್ದಾರೆ ಎಂಬ ಮಾಹಿತಿಗಳು ದೆಹಲಿಯಿಂದಲೇ ಹೊರಬೀಳುತ್ತಿದ್ದವು. ಆ ಕಾರಣಕ್ಕಾಗಿಯೇ ಒಂದು ವಾರದಿಂದ ಯಡಿಯೂರಪ್ಪ ನಾನಾ ವಿಧದ ಆಟಗಳನ್ನು ಆಡಿದ್ದಾರೆ. ಮಠಾಧೀಶರ ಹೋರಾಟ ಇದರ ಭಾಗವೂ ಹೌದು. ಆ ಚೌಕಾಶಿಯಲ್ಲಿ ಯಡಿಯೂರಪ್ಪ ಯಶಸ್ವಿಯಾಗದೇ ಇರಲು ವರಿಷ್ಠರ ಬಳಿ ಇರುವ ಅಸ್ತ್ರವೇ ಕಾರಣ ಎನ್ನಲಾಗುತ್ತಿ-ದೆ. ಸಿಬಿಐ, ಇ.ಡಿ ಬಳಸುವ ಭಯವೂ ಇದ್ದೀತು. ಇದರ ಜತೆಗೆ ಆಗಸ್ಟ್ 21ರಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಮುಂದೆ ಬರಲಿರುವ ಬೆಳ್ಳಂದೂರು ಭೂಮಿ ಡಿನೋಟಿಫೈ ಪ್ರಕರಣದಲ್ಲಿ ಯಡಿಯೂರಪ್ಪ ಅವರಿಗೆ ಸಮನ್ ಬರುವ ಸಾಧ್ಯತೆಯೂ ಇತ್ತು. ಇದು ಕೂಡ ಕೊನೆಗಳಿಗೆ-ಯಲ್ಲಿ ಯಡಿಯೂರಪ್ಪ ಪದತ್ಯಾಗಕ್ಕೆ ಕಾರಣ ಎಂಬ ಮಾಹಿತಿಯೂ ದಟ್ಟವಾಗಿದೆ. ಇವೆಲ್ಲದರ ಜತೆಗೆ ಈಗ ವಯೋಸಹಜವಾಗಿ ಒದಗುವ ದೈಹಿಕ ಅಸಾಮರ್ಥ್ಯ ಅವರನ್ನು ಕಾಡುತ್ತಿದೆ.

ಅಧಿಕಾರಕ್ಕೇರಲು, ಅಧಿಕಾರ ಉಳಿಸಿಕೊಳ್ಳಲು ಯಡಿಯೂರಪ್ಪ ಶಕ್ತಿಯನ್ನು ಬಳಸಿಕೊಂಡ ಬಿಜೆಪಿ ನಾಯಕರು, ಕೇಂದ್ರ ಸಂಪುಟ ಪುನರ್ ರಚನೆ ವೇಳೆ ಕೈಗೊಂಡ ಗಟ್ಟಿ ತೀರ್ಮಾನಗಳನ್ನು ಗಮನಿಸಿದರೆ, ಕರ್ನಾಟಕದ ನೂತನ ಸರ್ಕಾರ ರಚನೆಯಲ್ಲಿ ಯಡಿಯೂರಪ್ಪ ಅವರನ್ನು ಕಡೆಗಣಿಸಿದರೆ ಅಚ್ಚರಿಯಿಲ್ಲ.

ಬಿಎಸ್‌ವೈ ನಡೆ ?

- ಮುಖ್ಯಮಂತ್ರಿ ಆಯ್ಕೆಯಲ್ಲಿ ತಮ್ಮ ಸಲಹೆಗೆ ಮನ್ನಣೆ ಕೊಟ್ಟರೆ, ತಮ್ಮ ಪುತ್ರ ಬಿ.ವೈ. ವಿಜಯೇಂದ್ರ ಅವರಿಗೆ ಆಯಕಟ್ಟಿನ ಸ್ಥಾನ ಕೊಟ್ಟರೆ ಯಡಿಯೂರಪ್ಪ ಮತ್ತೆ ಎಂದಿನ ಉತ್ಸಾಹದಲ್ಲಿ ಚಿಮ್ಮಿ ನಡೆಯಬಹುದು
- ವಿಜಯೇಂದ್ರ ಅವರಿಗೆ ನೀಡದೇ ಸಂಸದರಾಗಿರುವ ಬಿ.ವೈ. ರಾಘವೇಂದ್ರ ಅವರನ್ನು ಉಪಮುಖ್ಯಮಂತ್ರಿ ಮಾಡಿದರೂ ಅದಕ್ಕೆ ಒಪ್ಪಿಕೊಂಡು ಉತ್ಸಾಹದಿಂದಲೇ ಕೆಲಸ ಮಾಡಬಹುದು
- ಯಡಿಯೂರಪ್ಪ ಬಯಸಿದವರು ಮುಖ್ಯಮಂತ್ರಿಯಾಗದೇ, ಪುತ್ರರಿಗೆ ಸ್ಥಾನ ಸಿಗದೇ ಇದ್ದರೆ ಅವರು ಸರ್ಕಾರವನ್ನು ಪರೋಕ್ಷವಾಗಿ ನಿಯಂತ್ರಿಸಲು ತಮ್ಮದೇ ಸಚಿವರು, ಶಾಸಕರ ಗುಂಪು ಕಟ್ಟಿಕೊಂಡು ಕಾರ್ಯಪ್ರವೃತ್ತ-ರಾಗಬಹುದು
- ಬಿಜೆಪಿ ವರಿಷ್ಠರು ನಿರ್ಲಕ್ಷ್ಯ ಮಾಡಿದರೆ ಪಕ್ಷದ ಕಡೆ ಮುಖ ಕೂಡ ಹಾಕದೇ ಸುಮ್ಮನೇ ವಿಶ್ರಾಂತಿ ಪಡೆಯಬಹುದು
- ತಮ್ಮನ್ನು ಕುರ್ಚಿಯಿಂದ ಇಳಿಸಲು ಕಾರಣರಾದವರನ್ನೇ ಮುಖ್ಯಮಂತ್ರಿ ಮಾಡಿದರೆ ಕೆಲಕಾಲ ಸುಮ್ಮನಿದ್ದು ಪ್ರತಿತಂತ್ರ ಹೂಡಿ ಸರ್ಕಾರ ಕೆಡಹುವ ಕೆಲಸಕ್ಕೂ ಕೈಹಾಕಬಹುದು

ಬಿಜೆಪಿ ಮುಖ್ಯಮಂತ್ರಿಗಳು

ಮುಖ್ಯಮಂತ್ರಿಗಳು	ಅವಧಿ	ಒಟ್ಟು ವರ್ಷ/ದಿನ
ಬಿ.ಎಸ್. ಯಡಿಯೂರಪ್ಪ	12 ನವೆಂಬರ್ 2007 ರಿಂದ 19 ನವೆಂಬರ್ 2007	7 ದಿನಗಳು
	30 ಮೇ 2008 ರಿಂದ 4 ಆಗಸ್ಟ್ 2011	3 ವರ್ಷ 66 ದಿನಗಳು
ಡಿ.ವಿ.ಸದಾನಂದಗೌಡ	5 ಆಗಸ್ಟ್ 2011 ರಿಂದ 11 ಜುಲೈ 2012	341 ದಿನಗಳು
ಜಗದೀಶ ಶೆಟ್ಟರ್	12 ಜುಲೈ 2012 ರಿಂದ 12 ಮೇ 2013	304 ದಿನಗಳು
ಬಿ.ಎಸ್. ಯಡಿಯೂರಪ್ಪ	17 ಮೇ 2018 ರಿಂದ 23 ಮೇ 2018	6 ದಿನಗಳು
	26 ಜುಲೈ 2019 ರಿಂದ ಜುಲೈ 26, 2021	2 ವರ್ಷಗಳು

ಸಿ.ಎಂ: ಸಂಭಾವ್ಯ ಅಭ್ಯರ್ಥಿಗಳ ಬಲಾಬಲ

ಬೆಂಗಳೂರು: ರಾಜ್ಯದ ಮುಂದಿನ ಮುಖ್ಯಮಂತ್ರಿ ಗಾದಿ ಎಂಬ ಕುತೂಹಲ ಈಗ ತೀವ್ರವಾಗಿದೆ. ಬಿಜೆಪಿ ಹೈಕಮಾಂಡ್ ಭಾಗವಾಗಿರುವ ನಾಯಕರು, ಹಿರಿಯ ಸಚಿವರು, ಶಾಸಕರು ಸೇರಿದಂತೆ ಹಲವರ ಹೆಸರುಗಳು ಸಂಭವನೀಯರ ಪಟ್ಟಿಯಲ್ಲಿವೆ. ಸಂಭವನೀಯರ ಪಟ್ಟಿಯಲ್ಲಿರುವರ ಸಾಮರ್ಥ್ಯ– ದೌರ್ಬಲ್ಯದ ಅಂಶಗಳೇನು ಎಂಬ ವಿವರ ಇಲ್ಲಿದೆ.

ಪ್ರಲ್ಹಾದ ಜೋಶಿ

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಉತ್ತರ ಕರ್ನಾಟಕದವರು, ಸಂಘ ಪರಿವಾರದ ನಿಷ್ಠಾವಂತ ಮತ್ತು ಪ್ರಧಾನಿ ಮೋದಿ ಅವರೊಂದಿಗಿನ ನಿಕಟ ಒಡನಾಟ ಇರುವುದು ವರದಾನವಾಗಬಹುದು. ವಿವಾದಗಳಿಲ್ಲ. ಆದರೆ, ಸುಸೂತ್ರವಾಗಿ ಸಂಸದೀಯ ವ್ಯವಹಾರಗಳ ಖಾತೆ ನಿರ್ವಹಿಸುತ್ತಿರುವ ಅವರನ್ನು ರಾಜ್ಯ ರಾಜಕಾರಣಕ್ಕೆ ಕಳುಹಿಸುವುದು ಅನುಮಾನ.

ಜಗದೀಶ ಶೆಟ್ಟರ್

ಜಗದೀಶ ಶೆಟ್ಟರ್ ಒಮ್ಮೆ ಮುಖ್ಯಮಂತ್ರಿ ಆಗಿದ್ದವರು. ಪರಿವಾರದ ಮೂಲ, ಉತ್ತರ ಕರ್ನಾಟಕ ಮತ್ತು ಲಿಂಗಾಯತ ಸಮುದಾಯದವರು ಅನುಕೂಲಕರ ಅಂಶ. ಯಡಿಯೂರಪ್ಪ ಅವರ ಜತೆಯಲ್ಲೇ ಅವರ ಸಮಕಾಲೀನರನ್ನೂ ಸರ್ಕಾರದಿಂದ ಹೊರಗಿಡುವ ಪ್ರಸ್ತಾವವು ಶೆಟ್ಟರ್‌ಗೆ ಅಡ್ಡಿಯಾಗಬಹುದು.

ಬಿ.ಎಲ್. ಸಂತೋಷ್

’ಸಂಘ’ದಿಂದ ಬಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿರುವ ಬಿ.ಎಲ್. ಸಂತೋಷ್ ಪಕ್ಷದ ಹೈಕಮಾಂಡ್‌ನ ಭಾಗವಾಗಿಯೇ ಇರುವವರು. ಸದ್ಯ ಬಿಜೆಪಿ ನಾಯಕತ್ವ ಬಯಸುವ ಹಿಂದುತ್ವ ಪರ ಸರ್ಕಾರಕ್ಕೆ ಸೂಕ್ತ ಆಯ್ಕೆ ಎನಿಸಬಹುದು. ಅವರು ಮುಖ್ಯಮಂತ್ರಿ ಹುದ್ದೆಗೇರುವುದಾದರೆ ಆರ್‌ಎಸ್‌ಎಸ್ ಅನುಮತಿಯೂ ಬೇಕಿದೆ.

ಸಿ.ಟಿ. ರವಿ

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪಕ್ಷ ನಿಷ್ಠರು, ಯಾವುದೇ ತ್ಯಾಗಕ್ಕೂ ಸಿದ್ಧ ಎಂಬ ಅಭಿಪ್ರಾಯವಿದೆ. ಒಕ್ಕಲಿಗರು. ಜಾತಿಗಿಂತಲೂ ಹೆಚ್ಚಾಗಿ ‘ಹಿಂದುತ್ವದ ನಾಯಕ’ ಎಂಬುದು ಅನುಕೂಲಕರ. ಆದರೆ, ಸರ್ಕಾರ ಮುನ್ನಡೆಸಲು ಅನುಭವದ ಕೊರತೆ ಜೊತೆಗೆ ಕೆಲವೊಮ್ಮೆ ಪ್ರಬುದ್ಧವಲ್ಲದ ರೀತಿಯಲ್ಲಿ ಮಾತನಾಡುತ್ತಾರೆ ಎಂಬ ಅಪವಾದವೂ ಇದೆ.

ಮುರುಗೇಶ ನಿರಾಣಿ

ಯಡಿಯೂರಪ್ಪ ಸಂಪುಟದಲ್ಲಿ ಸಚಿವರಾಗಿದ್ದ ಮುರುಗೇಶ ನಿರಾಣಿ ಪ್ರಬಲ ಆಕಾಂಕ್ಷಿ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪುತ್ರ ಜಯ್ ಶಾ ಜತೆಗೆ ವ್ಯಾವಹಾರಿಕ ನಂಟು ಹೊಂದಿರುವುದು ಇವರ ಪ್ರಬಲ ಶಕ್ತಿ. ಉತ್ತರ ಕರ್ನಾಟಕ, ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಆದ್ಯತೆ ನೀಡುವುದಾದಲ್ಲಿ ಇವರಿಗೆ ಆದ್ಯತೆ ಸಿಗಬಹುದು.

ವಿಶ್ವೇಶ್ವರ ಹೆಗಡೆ ಕಾಗೇರಿ

ಆರ್‌ಎಸ್‌ಎಸ್ ಕಾರ್ಯಕರ್ತರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಬ್ರಾಹ್ಮಣ ಸಮುದಾಯದಿಂದ ಕೇಳಿಬರುತ್ತಿರುವ ಹೆಸರುಗಳಲ್ಲಿ ಒಂದು. ಸಂಘ ಪರಿವಾರದ ಬೆಂಬಲವೂ ಇದೆ. ಮತದಾರರನ್ನು ಆಕರ್ಷಿಸಬಲ್ಲ ನಾಯಕತ್ವ ಇಲ್ಲ ಎಂಬುದು ಋಣಾತ್ಮಕ ಅಂಶ.

ಬಸವರಾಜ ಬೊಮ್ಮಾಯಿ

ಬಸವರಾಜ ಬೊಮ್ಮಾಯಿ ಅವರನ್ನು ಯಡಿಯೂರಪ್ಪ ಅವರ ಆಪ್ತ ಎಂದೇ ಗುರುತಿಸಲಾಗುತ್ತಿದೆ. ಲಿಂಗಾಯತರಾಗಿರುವುದು, ಬಿ.ಎಲ್.ಸಂತೋಷ್ ಜತೆಗಿನ ಒಡನಾಟ ಮತ್ತು ಅವರ ಆಶಯಕ್ಕೆ ತಕ್ಕಂತೆ ಗೃಹ ಇಲಾಖೆಯನ್ನು ನಿರ್ವಹಿಸಿ-ದ್ದಾರೆಂಬುದೂ ವರದಾನವಾಗಬಹುದು. ಆದರೆ, ಹೊರಗಿನಿಂದ ಬಂದವರು ಎಂಬುದು ಇವರಿಗಿರುವ ದೊಡ್ಡ ಅಡ್ಡಿ.

ಶಿವಕುಮಾರ ಉದಾಸಿ

ಹಾವೇರಿ ಸಂಸದ ಶಿವಕುಮಾರ್ ಉದಾಸಿ ಕೂಡ ಯುವಕರು. ಮೂರನೇ ಅವಧಿಗೆ ಸಂಸದರು. ಸಕ್ರಿಯರಾಗಿದ್ದು, ಪಕ್ಷದ ವರಿಷ್ಠರಲ್ಲಿ ಒಳ್ಳೆಯ ಅಭಿಪ್ರಾಯ ಗಳಿವೆ. ಇವರ ತಂದೆ ಸಿ.ಎಂ.ಉದಾಸಿ ಜನತಾಪರಿವಾರದವರು ಎಂಬುದು ಪ್ರತಿಕೂಲ ಅಂಶ.

ಡಾ.ಸಿ.ಎನ್. ಅಶ್ವತ್ಥನಾರಾಯಣ

ಸಂಘ ಪರಿವಾರ ಹಿನ್ನೆಲೆಯ ಡಾ.ಸಿ.ಎನ್. ಅಶ್ವತ್ಥನಾರಾಯಣ, ಬಿಜೆಪಿ ಬಯಸುವ ಕಾರ್ಪೊರೇಟ್ ಶೈಲಿಯ ನಾಯಕತ್ವದ ಗುಣಗಳನ್ನು ಹೊಂದಿದ್ದಾರೆ. ಇದೇ ಕಾರಣಕ್ಕಾಗಿ ಯಡಿಯೂರಪ್ಪ ಸಂಪುಟದಲ್ಲಿ ಉಪ ಮುಖ್ಯಮಂತ್ರಿ ಹುದ್ದೆ ನೀಡಲಾಗಿತ್ತು.

ಬಿಎಸ್‌ವೈ ‘ಶಿಕಾರಿ’: ಯಾರಿಗೆ ಗರಿ?

ಒಂದನೇ ಪುಟದಿಂದ...

ಇನ್ನೊಂದೆಡೆ ವೀರಶೈವ–ಲಿಂಗಾಯತ ಸಮುದಾಯದವರನ್ನೇ ಪರಿಗಣಿಸುವ ಮೂಲಕ ತಮ್ಮ ಮತ ಬ್ಯಾಂಕ್ ಅನ್ನು ಭದ್ರವಾಗಿ ಕಾಪಿಟ್ಟುಕೊ-ಳ್ಳಬೇಕೆಂಬ ಚರ್ಚೆಯೂ ನಡೆದಿದೆ. ವ್ಯ-ಕ್ತಿತ್ವದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದ ಹೊಸ ಮುಖಕ್ಕೆ ಮನ್ನಣೆ ನೀಡಬೇಕೆಂಬ ಬೇಡಿಕೆಯೂ ಈಗ ಬಿಜೆಪಿಯಲ್ಲಿ ಮುನ್ನೆಲೆಗೆ ಬಂದಿದೆ.

ಜಾತಿ ಮತ್ತು ಕುಟುಂಬ ಆಧಾರಿತ ಕರ್ನಾಟಕದ ರಾಜಕಾರಣದ ಧ್ಯೆಲಿಯನ್ನೇ ಬದಲಿಸಬೇಕು ಎಂಬ ಆಶಯ ಬಿಜೆಪಿಯ ವರಿಷ್ಠರದ್ದಾಗಿದೆ. ಅದೇ ದೃಢಪಟ್ಟರೆ, ಜಾತಿ–ಕುಟುಂಬ ಆಧಾರಿತ ರಾಜಕಾರಣ ಮಾಡದವರಿಗೆ ಆದ್ಯತೆ ಸಿಗುವ ಸಾಧ್ಯತೆಯೇ ಹೆಚ್ಚು ಮಾತುಗಳು ಬಿಜೆಪಿ ವಲಯದಲ್ಲಿ ಹರಿದಾಡುತ್ತಿವೆ.

ಕರ್ನಾಟಕದ ಮುಂದಿನ ವಿಧಾನ ಸಭೆ ಚುನಾವಣೆ ಹಾಗೂ ಸದ್ಯದಲ್ಲೇ ನಡೆಯಲಿರುವ ವಿವಿಧ ರಾಜ್ಯಗಳ ವಿಧಾನಸಭೆ ಚುನಾವಣೆಗೆ ಸಂಪನ್ಮೂಲ ಕ್ರೋಡೀಕರಣದ ಚರ್ಚೆಯೂ ನಡೆದಿದೆ. ಅದೇ, ಪ್ರಮುಖವಾದಲ್ಲಿ ಕಾರ್ಪೊರೇಟ್ ಶೈಲಿಯ ರಾಜಕಾರಣ ಗೊತ್ತಿರುವವರಿ-ಗೆ ಆದ್ಯತೆ ಸಿಕ್ಕರೂ ಆಶ್ಚರ್ಯವೇನಿಲ್ಲ ಎಂದು ಬಿಜೆಪಿ ಮೂಲಗಳು ಹೇಳಿವೆ.

ಯಾರಿಗೆ ಒಲಿಯಲಿದೆ ಪಟ್ಟ

ಒಂದನೇ ಪುಟದಿಂದ

ಬ್ರಾಹ್ಮಣ: ಪ್ರಲ್ಹಾದ ಜೋಶಿ, ಬಿ.ಎಲ್. ಸಂತೋಷ್, ವಿಶ್ವೇಶ್ವರ ಹೆಗಡೆ ಕಾಗೇರಿ.

ಒಕ್ಕಲಿಗ: ಸಿ.ಟಿ. ರವಿ, ಡಾ.ಸಿ. ಎನ್. ಅಶ್ವತ್ಥನಾರಾಯಣ,ಆರ್. ಅಶೋಕ.

ಅಚ್ಚರಿ: ಶಾಸಕರ ಬಲಕ್ಕಿಂತಲೂ ಹೆಚ್ಚಾಗಿ ಪಕ್ಷದ ವರಿಷ್ಠರ ವಿಶ್ವಾಸಕ್ಕೆ ಪಾತ್ರರಾಗುವವರೇ ಆಯ್ಕೆಯಾಗಬಹುದು. ಭವಿಷ್ಯದ ಚುನಾವಣೆ ಸೇರಿದಂತೆ ಹಲವು ವಿಷಯ ಮುಂದಿಟ್ಟುಕೊಂಡಿರುವ ಬಿಜೆಪಿ ವರಿಷ್ಠರು, ಈಗ ಚರ್ಚೆಯಲ್ಲಿ ಇರದ ಹೆಸರೊಂದನ್ನು ಆಯ್ಕೆಮಾಡಬಹುದು.

ಐವರು ಡಿಸಿಎಂ?:

ಯಡಿಯೂರಪ್ಪ ಸಂಪುಟದಲ್ಲಿ ಮೂವರು ಉಪ ಮುಖ್ಯಮಂತ್ರಿಗಳಿದ್ದರು. ಹೆಚ್ಚು ಜನರಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಮೂವರ ಬದಲಿಗೆ ಐವರಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡುವ ಕುರಿತು ಬಿಜೆಪಿ ವರಿಷ್ಠರು ಚರ್ಚೆ ನಡೆಸುತ್ತಿದ್ದಾರೆ ಎಂದೂ ಹೇಳಲಾಗುತ್ತಿದೆ.

ಒಕ್ಕಲಿಗ ಅಥವಾ ಲಿಂಗಾಯತರು ಮುಖ್ಯಮಂತ್ರಿಯಾದರೆ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಲಕ್ಷ್ಮಣ ಸವದಿ ಅವರಿಗೆ ಉಪ ಮುಖ್ಯಮಂತ್ರಿ ಪಟ್ಟ ಕೈತಪ್ಪಬಹುದು. ಗೋವಿಂದ ಕಾರಜೋಳ ಮುಂದುವರಿಯಬಹುದು.

ವೀರಶೈವ– ಲಿಂಗಾಯತ ಸಮುದಾಯಕ್ಕೆ ಸೇರಿಲ್ಲದವರು ಮುಖ್ಯಮಂತ್ರಿಯಾದರೆ ಯಡಿಯೂರಪ್ಪ ಅವರ ಹಿರಿಯ ಮಗ ಬಿ.ವೈ. ರಾಘವೇಂದ್ರ ಹಾಗೂ ಬಿ. ಶ್ರೀರಾಮುಲು ಅವರಿಗೂ ಉಪ ಮುಖ್ಯಮಂತ್ರಿ ಹುದ್ದೆ ದೊರೆಯಬಹುದು ಎಂದು ಗೊತ್ತಾಗಿದೆ.

ವಲಸಿಗರಲ್ಲಿ ಅರ್ಧದಷ್ಟು ಮಂದಿ ಹೊರಕ್ಕೆ?: 2019ರಲ್ಲಿ ಯಡಿಯೂರಪ್ಪ ಅವರು ಸರ್ಕಾರ ರಚಿಸುವ ಮುನ್ನ ಕಾಂಗ್ರೆಸ್, ಜೆಡಿಎಸ್ ತೊರೆದು ಬಿಜೆಪಿ ಸೇರಿದ್ದ 17 ಮಂದಿಯಲ್ಲಿ 11 ಜನರಿಗೆ ಸಚಿವ ಸ್ಥಾನ ನೀಡಲಾಗಿತ್ತು. ಹೊಸ ಸಂಪುಟದಲ್ಲಿ ವಲಸಿಗ ಶಾಸಕರ ಪೈಕಿ ಐದರಿಂದ ಆರು ಜನರಿಗೆ ಮಾತ್ರ ಅವಕಾಶ ನೀಡುವ ಸಾಧ್ಯತೆ ಇದೆ ಎಂದೂ ಹೇಳಲಾಗುತ್ತಿದೆ.

ರಾಜೀನಾಮೆ: ಶಿಕಾರಿಪುರ ಬಂದ್

ಪ್ರಜಾವಾಣಿ ವಾರ್ತೆ



ಮುಖ್ಯಮಂತ್ರಿ ಸ್ಥಾನಕ್ಕೆ ಬಿ.ಎಸ್.ಯಡಿಯೂರಪ್ಪ ರಾಜೀನಾಮೆ ನೀಡುತ್ತಿದ್ದಂತೆ ತವರು ಕ್ಷೇತ್ರ ಶಿಕಾರಿಪುರದಲ್ಲಿ ಜನರು ಸ್ವಯಂಘೋಷಿತ ಬಂದ್ ಆಚರಿಸಿದರು

ಶಿವಮೊಗ್ಗ / ಶಿಕಾರಿಪುರ: ಮುಖ್ಯಮಂತ್ರಿ ಸ್ಥಾನಕ್ಕೆ ಬಿ.ಎಸ್. ಯಡಿಯೂರಪ್ಪ ರಾಜೀನಾಮೆ ನೀಡುತ್ತಿದ್ದಂತೆ ಜಿಲ್ಲೆಯ ಬಹುತೇಕ ಜನರು ಮೌನಕ್ಕೆ ಶರಣಾಗಿದ್ದಾರೆ. ತವರು ಕ್ಷೇತ್ರ ಶಿಕಾರಿಪುರ, ಶಿರಾಳ-ಕೊಪ್ಪದಲ್ಲಿ ಅಂಗಡಿಗಳನ್ನು ಸ್ವಯಂ ಪ್ರೇರಿತವಾಗಿ ಮುಚ್ಚಿ ಅಸಮಾಧಾನ ಹೊರಹಾಕಿದ್ದಾರೆ.

ಬಿಜೆಪಿ ಸರ್ಕಾರ ಎರಡು ವರ್ಷ ಪೂರೈಸಿದ ಕಾರ್ಯಕ್ರಮದಲ್ಲಿ ಬಿ.ಎಸ್. ಯಡಿಯೂರಪ್ಪ ಅವರು ರಾಜೀನಾಮೆ ನೀಡುವ ನಿರ್ಧಾರ ಘೋಷಿಸುತ್ತಿದ್ದಂತೆ ಶಿಕಾರಿಪುರದಲ್ಲಿ ದುಃಖ ಮಡುಗಟ್ಟಿತ್ತು.

ಪಕ್ಷದ ಮುಖಂಡರು, ಕಾರ್ಯಕರ್ತರು ಯಡಿಯೂರಪ್ಪ ಪರ ಜೈಕಾರ ಕೂಗುತ್ತ ಪ್ರಮುಖ ರಸ್ತೆಗಳಲ್ಲಿ ಹೆಜ್ಜೆ ಹಾಕಿದರು. ಕೆಲವರು ಬಿಜೆಪಿ ಹೈಕಮಾಂಡ್, ಪ್ರಧಾನಿ ಮೋದಿ ವಿರುದ್ಧ ಘೋಷಣೆ ಕೂಗಿದರು. ಸಚಿವ ಯೋಗೀಶ್ವರ್, ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದು, ದಹನ ಮಾಡಿದರು. ಮಾಳೇರಕೇರಿಯ ನಿವಾಸದಲ್ಲಿ ಮೌನ ಆವರಿಸಿತ್ತು.

ಹುಟ್ಟೂರಿನಲ್ಲಿ ಕಣ್ಣೀರು

ಮಂಡ್ಯ: ಬಿ.ಎಸ್.ಯಡಿಯೂರಪ್ಪ ರಾಜೀನಾಮೆ ನೀಡುವ ಘೋಷಣೆ ಹಿಂದೆಯೇ ಹುಟ್ಟೂರು, ಕೆ.ಆರ್. ಪೇಟೆ ತಾಲ್ಲೂಕು ಬೂಕನಕೆರೆ ಗ್ರಾಮದಲ್ಲಿಯೂ ಅಭಿಮಾನಿಗಳು ಕಣ್ಣೀರು ಹಾಕಿದರು.

ಬಿಎಸ್‌ವೈ ಅವರು ರಾಜಿನಾಮೆ ನಿರ್ಧಾರ ಪ್ರಕಟಿಸಿದಾಗ ಗ್ರಾಮಸ್ಥರ ದುಃಖದ ಕಟ್ಟೆ ಒಡೆಯಿತು. ಹಲವರು ಅಂಗಡಿಗಳನ್ನು ಮುಚ್ಚಿದರು.

ಮೈಷುಗರ್ ಆರಂಭವಾಗಲಿಲ್ಲ: ‘ಯಡಿಯೂರಪ್ಪ ಮುಖ್ಯಮಂತ್ರಿ ಆದರೂ ಜಿಲ್ಲೆಯ ಮೈಷುಗರ್ ಕಾರ್ಖಾನೆ ಆರಂಭಿಸಲು ವಿಫಲರಾದರು’ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಬೇಸರ ವ್ಯಕ್ತವಾಗಿದೆ.

ವರಿಷ್ಠರೊಂದಿಗೆ ಭೇಟಿ: ನಿರಾಣಿಗೆ ದೊರೆಯದ ಅವಕಾಶ

ಕೊನೆ ಕ್ಷಣದವರೆಗೆ ವಿಜಯೇಂದ್ರ ವಿಫಲ ಯತ್ನ!

• ಸಿದ್ದಯ್ಯ ಹಿರೇಮಠ



ವಿಜಯೇಂದ್ರ

ನವದೆಹಲಿ: ವರಿಷ್ಠರ ಭೇಟಿಗಾಗಿ ಜುಲೈ 16ರಂದು ದೆಹಲಿಗೆ ಬಂದಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಜೊತೆಗೇ ಇದ್ದ ಪುತ್ರ ಬಿ.ವೈ. ವಿಜಯೇಂದ್ರ, ತಂದೆಯ ಅಧಿಕಾರ ರಕ್ಷಣೆಗಾಗಿ ಕೊನೆಯ ಕ್ಷಣದವರೆಗೂ ಪ್ರಯತ್ನ ನಡೆಸಿ ವಿಫಲರಾದರು.

ಕಳೆದ ಶುಕ್ರವಾರ ಮತ್ತೆ ದೆಹಲಿಗೆ ಬಂದು, ನಾಲ್ಕು ದಿನ ದೆಹಲಿಯಲ್ಲೇ ಬೀಡುಬಿಟ್ಟಿದ್ದ ಅವರು, ಪಕ್ಷದ ವರಿಷ್ಠರನ್ನು ಭೇಟಿಯಾಗಿ ಕೊನೆ ಹಂತದ ಮಾತುಕತೆ ನಡೆಸಿ ಸಫಲವಾಗದ್ದರಿಂದ, ವರಿಷ್ಠರಿಗೆ ಅತ್ಯಂತ ಆಪ್ತರಾದವರನ್ನೂ ಭೇಟಿ ಮಾಡಿ ತಂದೆಯ ಪರ ವಕಾಲತ್ತು ವಹಿಸುವಂತೆಯೂ ಯತ್ನಿಸಿದ್ದರು ಎಂದು ತಿಳಿದುಬಂದಿದೆ.

ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಲ್ಲೇ ಮುಂದುವರಿಸುವಂತೆ ಭಾನುವಾರ ತಡ ರಾತ್ರಿಯವರೆಗೂ ನಡೆಸಿದ ಯತ್ನ ಫಲಿಸದ್ದರಿಂದ ಸೋಮವಾರ ನಸುಕಿನಲ್ಲಿ ಅವರು ಬೆಂಗಳೂರಿಗೆ ಮರಳಿದ್ದಾರೆ.

ಗುಜರಾತ್ ಮೂಲದ ಕೆಲವು ಉದ್ಯಮಿಗಳು ಹಾಗೂ ಪಕ್ಷದ ಪ್ರಮುಖರ ನೆರವಿನೊಂದಿಗೆ ವರಿಷ್ಠರ ಮನವೊಲಿಸುವ ಅವರ ಪ್ರಯತ್ನಕ್ಕೆ ಫಲ ದೊರೆಯಲಿಲ್ಲ. ಆದರೆ, ಒಂದೊಮ್ಮೆ ಯಡಿಯೂರಪ್ಪ ಅವರ ರಾಜೀನಾಮೆ ಪಡೆದಲ್ಲಿ, ಹೊಸಬರ ನೇತೃತ್ವದಲ್ಲಿನ ಸರ್ಕಾರದಲ್ಲಿ ಸೂಕ್ತ ಸ್ಥಾನಮಾನವ-ನ್ನು ನೀಡುವಂತೆಯೂ ವಿಜಯೇಂದ್ರ ಮನವಿ ಮಾಡಿಕೊಂಡಿದ್ದಾರೆ. ಅದಕ್ಕೆ, ವರಿಷ್ಠರಿಂದ ‘ನೋಡೋಣ’ ಎಂಬ ಪ್ರತಿಕ್ರಿಯೆ ದೊರೆತಿದೆ ಎನ್ನಲಾಗಿದೆ.

ಯಡಿಯೂರಪ್ಪ ಅವರಿಗೆ ಒಂದು ವರ್ಷದ ಅವಧಿಗೆ ಮಾತ್ರ ಪಕ್ಷದ ಹೈಕಮಾಂಡ್ ಅವಕಾಶ ನೀಡಿತ್ತು. ಕೊರೊನಾ ಮತ್ತು ಲಾಕ್‌ಡೌನ್ ಹಿನ್ನೆಲೆಯಲ್ಲಿ ಅದನ್ನು ಎರಡು ವರ್ಷಕ್ಕೆ ವಿಸ್ತರಿಸಲಾಗಿತ್ತು. ಸರ್ಕಾರವು ಪ್ರವಾಹ, ಕೊರೊನಾ ಸಂಕಷ್ಟದ ಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಿದೆ ಎಂದೂ ಅವರು ಮನವರಿಕೆ ಮಾಡಿದರು. ಆದರೆ, ವರಿಷ್ಠರು ಒಪ್ಪಲಿಲ್ಲ ಎಂದು ಪಕ್ಷದ ಮೂಲಗಳು ಹೇಳಿವೆ.

ನಿರಾಣಿ ಯತ್ನ: ಭಾನುವಾರ ಸಂಜೆ ದೆಹಲಿಗೆ ಬಂದು ವರಿಷ್ಠರ ಭೇಟಿಗಾಗಿ ಪ್ರಯತ್ನ ನಡೆಸಿದ್ದ ಮುಖ್ಯಮಂತ್ರಿ ಸ್ಥಾನದ ಪ್ರಬಲ ಆಕಾಂಕ್ಷಿ ಮುರುಗೇಶ ನಿರಾಣಿ ಸೋಮವಾರ ಬೆಂಗಳೂರಿಗೆ ಮರಳಿದ್ದಾರೆ.

ಕೆಲವು ಆಪ್ತರ ಸಹಾಯದೊಂದಿಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರ ಭೇಟಿಗೆ ನಿರಾಣಿ ಸಮಯ ಕೇಳಿದ್ದರು. ಆದರೆ, ವರಿಷ್ಠರು ಅವರ ಮನವಿಗೆ ಸ್ಪಂದಿಸಲಿಲ್ಲ ಎಂದು ತಿಳಿದುಬಂದಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	111.60	27,836	9,661
ಹಾರಂಗಿ	2,859	2,855.22	12,297	8,619
ಕಬಿನಿ	2,284.00	2,280.12	29,000	25,000
ಹೇಮಾವತಿ	2,922	2,917.97	16,346	3,430
ಲಿಂಗನಮಕ್ಕಿ	1,819	1,804.55	25,844	-
ಸೂಪಾ (ಮೀ)	564	550.33	25,383	2,159
ವಾರಾಹಿ	594.36	580.76	4,847	-
ತುಂಗಭದ್ರಾ	1,633	1,631.20	1,82,622	1,40,000
ಮಲಪ್ರಭಾ	2,079.50	2,075.80	11,584	19,394
ಘಟಪ್ರಭಾ	2,175	2,171.66	45,368	22,089
ಭದ್ರಾ	186	179.30	24,770	1,067
ಆಲಮಟ್ಟಿ (ಮೀ)	519.6	515.80	2,91,282	3,03,295
ನಾರಾಯಣಪುರ (ಮೀ)	492.25	489.32	2,85,000	2,86,200

*ನೆಲಮಟ್ಟದಿಂದ

ಕರಾವಳಿ ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ದುರ್ಬಲಗೊಂಡಿದ್ದು, ಕರಾವಳಿ ಭಾಗದಲ್ಲಿ ಜು.27 ಮತ್ತು 28ರಂದು ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ ಭಾಗದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಇದೇ 28ರವರೆಗೆ ಗುಡುಗು, ಸಿಡಿಲು ಸಹಿತ ಹೆಚ್ಚು ಮಳೆಯಾಗುವ ಮುನ್ಸೂಚನೆ ಇರುವುದರಿಂದ ಎರಡೂ ದಿನ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಕರಾವಳಿಯಲ್ಲಿ 3.6 ಮೀಟರ್‌ಗಳಷ್ಟು ಎತ್ತರದ ಸಮುದ್ರ ಅಲೆಗಳು ಏಳುವ ಸಾಧ್ಯತೆ ಇದೆ ಎಂದು ಮೀನುಗಾರರನ್ನು ಎಚ್ಚರಿಸಿದೆ.

ದಕ್ಷಿಣ ಮತ್ತು ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಜು.31ರವರೆಗೆ ಮಳೆ ಪ್ರಮಾಣ ಕಡಿಮೆ ಇರಲಿದೆ. ಕೆಲವು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಬಹುದು ಎಂದು ತಿಳಿಸಿದೆ.

ಮಳೆ–ಎಲ್ಲಿ, ಎಷ್ಟು?: ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ 13 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಸುಬ್ರಹ್ಮಣ್ಯ 11, ಪುತ್ತೂರು 10, ಸುಳ್ಯ, ವಿರಾಜಪೇಟೆ 9, ಮಂಗಳೂರು, ಬೆಳ್ತಂಗಡಿ 8, ಕಾರ್ಕಳ, ಮೂಡುಬಿದಿರೆ 6, ಭಟ್ಕಳ, ಕೊಪ್ಪ, ಹೊಸಕೋಟೆ, ತೀರ್ಥಹಳ್ಳಿ, ಕೋಲಾರ 3, ಕುಂದಾಪುರ, ನಿಪ್ಪಾಣಿ, ಚಿಂತಾಮಣಿ 2, ಧಾರವಾಡ, ಬೆಳಗಾವಿ, ಆನೇಕಲ್, ಶ್ರೀನಿವಾಸಪುರ, ಬಂಗಾರಪೇಟೆ, ಸಾಗರದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ರಾಯಚೂರಿನಲ್ಲಿ 34 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಹಾಗೂ ಮಡಿಕೇರಿಯಲ್ಲಿ 17 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಸಂಚಾರಕ್ಕೆ ಮುಕ್ತ • ಪ್ರವಾಹದಲ್ಲಿ ಕೊಚ್ಚಿ ಹೋದ ವ್ಯಕ್ತಿ

ತಗ್ಗಿದ ಮಳೆ: ಮುಂದುವರಿದ ಕೃಷ್ಣೆಯ ಅಬ್ಬರ

ಪ್ರಜಾವಾಣಿ ವಾರ್ತೆ



ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಗ್ರಾಮದ ಜೀವನ್ ಆಸ್ಪತ್ರೆಯಲ್ಲಿ ಸಿಲುಕಿದ್ದ ನಸಲಾಪುರ ಗ್ರಾಮದ ರೋಗಿಯನ್ನು ಸ್ಥಳೀಯರು ಸ್ಥಳಾಂತರಿಸಿದರು

ಬೆಳಗಾವಿ: ಕೃಷ್ಣಾ ಜಲಾನಯನ ಪ್ರದೇಶಗಳಲ್ಲಿ ಮಳೆ ಅಬ್ಬರ ಕಡಿಮೆಯಾಗಿದೆ. ಆದರೆ, ನೆರೆಯ ಮಹಾರಾಷ್ಟ್ರದ ಜಲಾಶಯಗಳಿಂದ ಈ ನದಿಗೆ ಬರುತ್ತಿರುವ ನೀರಿನ ಪ್ರಮಾಣ ಸೋಮವಾರವೂ ಏರಿಕೆಯಾಗಿದ್ದು ಚಿಕ್ಕೋಡಿ, ರಾಯಬಾಗ, ಅಥಣಿ ತಾಲ್ಲೂಕುಗಳಲ್ಲಿ ಪ್ರವಾಹ ಪರಿಸ್ಥಿತಿ ಮುಂದುವರಿದಿದೆ. ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸುವ ಕಾರ್ಯ ನಡೆಯುತ್ತಿದೆ.

ಅಥಣಿ ತಾಲ್ಲೂಕಿನ ಸವದಿ ಗ್ರಾಮದ ವಾಡಾ ಬಸವೇಶ್ವರ ದೇವಸ್ಥಾನದ ಬಳಿ ಮನೆಯ ಸಾಮಗ್ರಿಗಳನ್ನು ಒಯ್ಯುವಾಗ ರಾಮನಗೌಡ ಪಾಟೀಲ (55) ಎನ್ನುವವರು ಕೃಷ್ಣಾ ನದಿ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದಾರೆ.

ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಗ್ರಾಮದ ಜೀವನ್ ಆಸ್ಪತ್ರೆಯಲ್ಲಿ ಸಿಲುಕಿದ್ದ ನಸಲಾಪುರ ಗ್ರಾಮದ ರೋಗಿಯನ್ನು ಸ್ಥಳೀಯರು ಸ್ಥಳಾಂತರಿಸಿದರು.

ಮಹಾರಾಷ್ಟ್ರದ ರಾಜಾಪುರ ಬ್ಯಾರೇಜ್‌ನಿಂದ 3.40 ಲಕ್ಷ ಮತ್ತು ದೂಧ್‌ಗಂಗಾ ನದಿಯಿಂದ 52,800 ಕ್ಯುಸೆಕ್ ಸೇರಿ 3.92 ಲಕ್ಷ ಕ್ಯುಸೆಕ್ ನೀರು ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣಾ ನದಿಗೆ ಹರಿದು ಸೇರುತ್ತಿದೆ. ಕೃಷ್ಣಾ ಜೊತೆಗೆ ಉಪ ನದಿಗಳಾದ ವೇದಗಂಗಾ, ದೂಧ್‌ಗಂಗಾ, ಪಂಚಗಂಗಾ ನದಿಗಳ ಉಕ್ಕಿ ಹರಿಯುತ್ತಿದ್ದು ಜಮೀನುಗಳಿಗೆ ಮತ್ತು ತೀರದಲ್ಲಿರುವ ಮನೆಗಳಿಗೆ ನುಗ್ಗಿದೆ. ನಿಪ್ಪಾಣಿ ಮತ್ತು ಚಿಕ್ಕೋಡಿ ತಾಲ್ಲೂಕಿನಲ್ಲಿ ಹೆಚ್ಚು ಹಾನಿ ಉಂಟಾಗಿದೆ. 'ಪ್ರವಾಹದಿಂದಾಗಿ ಬುಧವಾರ 22ರಿಂದ ಬಂದ್ ಮಾಡಲಾಗಿದ್ದ ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಯನ್ನು ವಾಹನಗಳ ಸಂಚಾರಕ್ಕೆ ಸೋಮವಾರ ಮಧ್ಯಾಹ್ನದಿಂದ ಮುಕ್ತಗೊಳಿಸಲಾಗಿದೆ' ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಇತ್ತ ಘಟಪ್ರಭಾ, ಹಿರಣ್ಯಕೇಶಿ, ಮಾರ್ಕಂಡೇಯ ಮತ್ತು ಮಲಪ್ರಭಾ ನದಿಗಳ ತೀರದಲ್ಲೂ ಪ್ರವಾಹ ಪರಿಸ್ಥಿತಿ ಮುಂದುವರಿದಿದೆ. ಗೋಕಾಕ, ಮೂಡಲಗಿ, ಹುಕ್ಕೇರಿ, ರಾಮದುರ್ಗ ತಾಲ್ಲೂಕುಗಳಲ್ಲಿ ಹಳ್ಳಿಗಳು ಜಲಾವೃತಗೊಂಡಿವೆ. ಗೋಕಾಕದಿಂದ ಗೋಕಾಕ ಜಲಪಾತದ ಕಡೆಗೆ ಸಂಪರ್ಕ ಕಲ್ಪಿಸುವ ಚಿಕ್ಕೊಳ್ಳಿ ಸೇತುವೆ ಮಾರ್ಕಂಡೇಯ ನದಿ ಪ್ರವಾಹದಿಂದ ಕೊಚ್ಚಿ ಹೋಗಿದೆ. ನೀರು ಇಳಿದಿದ್ದರೂ ವಾಹನ ಸಂಚಾರಕ್ಕೆ ಅವಕಾಶ ನೀಡಿಲ್ಲ.

ಹುಬ್ಬಳ್ಳಿ-ವಿಜಯಪುರ ರಾಷ್ಟ್ರೀಯ ಹೆದ್ದಾರಿ ಬಂದ್: ನವಿಲುತೀರ್ಥ ಜಲಾಶಯದಿಂದ ಮಲಪ್ರಭಾ ಹೊಳೆ, ಕಾಲುವೆಗಳಿಗೆ ಈವರೆಗೆ 18 ಸಾವಿರ ಕ್ಯುಸೆಕ್ ನೀರು ಹರಿಸಿದ್ದರಿಂದಾಗಿ ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ಕೊಣ್ಣೂರ ಬಳಿ ಹುಬ್ಬಳ್ಳಿ-ವಿಜಯಪುರ ರಾಷ್ಟ್ರೀಯ ಹೆದ್ದಾರಿ ಬಂದ್ ಆಗಿದೆ. ಇದರಿಂದಾಗಿ ವಿಜಯಪುರ, ಹುಬ್ಬಳ್ಳಿ ಕಡೆ ತೆರಳುವ ಪ್ರಯಾಣಿಕರು ಪರದಾಡಿದರು.

ಪ್ರವಾಹ ಪರಿಸ್ಥಿತಿಯಿಂದಾಗಿ ಕೊಣ್ಣೂರಿನ 100ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿವೆ. ಇಲ್ಲಿನ ನಿವಾಸಿಗಳಿಗಾಗಿ ಕೆಇಎಸ್ ಕಾಲೇಜಿನಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದೆ. ಕಾಳಜಿ ಕೇಂದ್ರಕ್ಕೆ ಬರಲು ಒಪ್ಪದ ಜನರ ಮನವೊಲಿಸಿ ಸ್ಥಳಾಂತರಿಸಲಾಯಿತು.

ಬಿಡುವು ನೀಡಿದ ವರುಣ (ಶಿವಮೊಗ್ಗ ವರದಿ): ಎರಡು ದಿನಗಳಿಂದ ಜಿಲ್ಲೆಯಲ್ಲಿ ಮಳೆ ಬಿಡುವು ನೀಡಿದ್ದು, ಸೋಮವಾರ ಬಿಸಿಲು ಇದ್ದು, ಅಲ್ಲಲ್ಲಿ ತುಂತುರು ಮಳೆಯಾಗಿದೆ.

ಹೊಸನಗರ, ಸಾಗರ, ತೀರ್ಥಹಳ್ಳಿಯಲ್ಲಿ ಆಗಾಗ ತುಂತುರು ಮಳೆಯಾಗಿದೆ. ಹೊಸನಗರ ತಾಲ್ಲೂಕು ಜಲಾಶಯ ತುಂಬಿದ್ದು, ಹೊರಹೋಗುವ ನೀರಿನ ಸೊಬಗು ನೋಡಲು ಜನರು ಸಾಗರೋಪಾದಿಯಲ್ಲಿ ಬರುತ್ತಿದ್ದಾರೆ.

ಕೊಡಗಿನಲ್ಲಿ ಬಿರುಸಿನ ಮಳೆ (ಮಡಿಕೇರಿ ವರದಿ): ಕೊಡಗು ಜಿಲ್ಲೆಯಲ್ಲಿ ಭಾನುವಾರ ರಾತ್ರಿ ಧಾರಾಕಾರ ಮಳೆಯಾಗಿದೆ. ಸೋಮವಾರವೂ ಉತ್ತಮ ಮಳೆಯಾಯಿತು.

ದಕ್ಷಿಣ ಕನ್ನಡದಲ್ಲಿ ಉತ್ತಮ ಮಳೆ

ಮಂಗಳೂರು: ಕರಾವಳಿಯಲ್ಲಿ ಮಳೆ ಚುರುಕಾಗಿದ್ದು, ಚಿಕ್ಕಮಗಳೂರಿನಲ್ಲಿ ಮಳೆಯ ಪ್ರಮಾಣ ತಗ್ಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು-ಪಾಣಾಜೆ ರಸ್ತೆಯಲ್ಲಿರುವ ಬೆಟ್ಟಂಪಾಡಿ ಗ್ರಾಮದ ಚೆಲ್ಯಡ್ಕ ಮುಳುಗು ಸೇತುವೆ ಸೋಮವಾರ ಮೂರನೇ ಬಾರಿಗೆ ಮುಳುಗಡೆಯಾಗಿದೆ. ಕುಮಾರಧಾರಾ ಮತ್ತು ನೇತ್ರಾವತಿ ನದಿಗಳ ನೀರಿನ ಮಟ್ಟ ಏರಿಕೆಯಾಗಿದೆ. ಮಂಗಳೂರು ತಾಲ್ಲೂಕಿನ ಮಲ್ಲೂರು ಜಂಕ್ಷನ್ ಬಳಿ ಮನೆಯ ಮೇಲೆ ಗುಡ್ಡ ಕುಸಿದು ಹಾನಿಯಾಗಿದೆ. ಬೀಜಾಡಿಯಲ್ಲಿ ಎಂಬುವವರಿಗೆ ಗಾಯವಾಗಿದೆ.

ಉಡುಪಿ ಜಿಲ್ಲೆಯಲ್ಲಿ ಸೋಮವಾರ ಸಾಧಾರಣ ಮಳೆ ಸುರಿಯಿತು. ಕೃಷಿ ಚಟುವಟಿಕೆಗಳು ಬಿರುಸುಪಡೆದುಕೊಂಡಿವೆ. ಕುಂದಾಪುರ ತಾಲ್ಲೂಕಿನ ಯಡಮೊಗೆಯಲ್ಲಿ ಮಳೆಯಿಂದ ಮನೆಗೆ ಹಾನಿಯಾಗಿದೆ.

ಹಂಪಿ ಸ್ಮಾರಕ ಮುಳುಗಡೆ

ಹೊಸಪೇಟೆ (ವಿಜಯನಗರ): ಇಲ್ಲಿನ ತುಂಗಭದ್ರಾ ಜಲಾಶಯದಿಂದ ನದಿಗೆ ನೀರು ಹರಿಸುತ್ತಿರುವುದರಿಂದ ವಿಶ್ವಪ್ರಸಿದ್ಧ ಹಂಪಿ ಸ್ನಾನಘಟ್ಟ, ಚಕ್ರತೀರ್ಥ, ಪುರಂದರದಾಸ ಮಂಟಪ, ವಿಜಯನಗರ ಕಾಲದ ಕಾಲು ಸೇತುವೆ ಸಂಪೂರ್ಣ ಮುಳುಗಡೆಯಾಗಿವೆ.

ತುಂಗಭದ್ರಾ ಜಲಾಶಯದ ಎಲ್ಲ 33 ಕ್ರಸ್ಟ್‌ಗೇಟ್ ತೆಗೆದು 1,40,000 ಕ್ಯುಸೆಕ್ ನೀರು ನದಿಗೆ ಹರಿಸಲಾಗುತ್ತಿದೆ.

ಕಂಪ್ಲಿ-ಗಂಗಾವತಿ ಸೇತುವೆ ಜಲಾವೃತ

ಗಂಗಾವತಿ (ಕೊಪ್ಪಳ ಜಿಲ್ಲೆ): ತುಂಗಭದ್ರಾ ಜಲಾಶಯದಿಂದ ಒಂದು ಲಕ್ಷ ಕ್ಯುಸೆಕ್‌ಗೂ ಅಧಿಕ ನೀರು ನದಿಗೆ ಹರಿಸಲಾಗುತ್ತಿದ್ದು, ಕಂಪ್ಲಿ-ಗಂಗಾವತಿ ನಡುವೆ ಸಂಪರ್ಕ ಕಲ್ಪಿಸುವ ಸೇತುವೆ ಸೋಮವಾರ ಜಲಾವೃತವಾಗಿದೆ.

ವಿರುಪಾಪುರಗಡ್ಡೆಯಿಂದ ಹಂಪಿಗೆ ತೆರಳುವ ಮಾರ್ಗ, ಆನೆಗುಂದಿ ಕೃಷ್ಣ ದೇವರಾಯ ಸಮಾಧಿ (64 ಸಾಲಿನ ಕಂಬಗಳ ದೇವಸ್ಥಾನ) ನೀರಿನಲ್ಲಿ ಮುಳುಗಿದೆ. ನವಬೃಂದಾವನದ ಸಂಪರ್ಕ ಕಡಿತಗೊಂಡಿದೆ.

ಸಾಣಾಪುರ, ಸೇತುವೆ, ಹನುಮನಹಳ್ಳಿ, ದೇವಘಾಟ್, ಲಕ್ಷ್ಮಿಪುರ, ನಾಗನಳ್ಳಿ, ಚಿಕ್ಕಂಜಂಕಲ್ ಭಾಗದ ಭತ್ತ, ಕಬ್ಬು, ಬಾಳೆ ತೋಟಗಳು ಜಲಾವೃತವಾಗಿವೆ.

ಮಹಾರಾಷ್ಟ್ರ: ಮೃತರ ಸಂಖ್ಯೆ 164ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದಲ್ಲಿ ಮಳೆ ಸಂಬಂಧಿ ಅವಘಡಗಳಿಂದ ಮೃತಪಟ್ಟವರ ಸಂಖ್ಯೆ 164ಕ್ಕೆ ಏರಿದ್ದು, 56ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. 2.29 ಲಕ್ಷ ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ.

ಭೂಕುಸಿತ ಸಂಭವಿಸಿದ್ದ ರಾಯಗಡದ ತಾಲಿಯೆ ಗ್ರಾಮದಲ್ಲಿ ಸೋಮವಾರ ಶೋಧ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದ್ದು, ನಾಪತ್ತೆಯಾಗಿರುವ 31 ಮಂದಿ 'ಮೃತಪಟ್ಟಿದ್ದಾರೆ' ಎಂದು ಘೋಷಿಸಲಾಗಿದೆ ಎಂದು ರಾಯಗಡ ಜಿಲ್ಲಾಧಿಕಾರಿ ನಿಧಿ ಚೌಧರಿ ತಿಳಿಸಿದ್ದಾರೆ. ರಾಯಗಡ ಜಿಲ್ಲೆಯೊಂದರಲ್ಲಿಯೇ 71 ಮಂದಿ ಮೃತಪಟ್ಟಿದ್ದಾರೆ.

ಭಾರಿ ಮಳೆಯಿಂದ, ರಾಯಗಡದ ತಾಲಿಯೆ ಗ್ರಾಮದಲ್ಲಿ ಕಳೆದ ಗುರುವಾರ ಭೂಕುಸಿತ ಉಂಟಾಗಿ ಹಲವು ಮನೆಗಳು ನೆಲಸಮವಾಗಿದ್ದವು. 'ಕಾಣೆಯಾದವರ ಸಂಬಂಧಿಕರು, ಶೋಧ ನಿಲ್ಲಿಸುವಂತೆ ನಿನ್ನೆಯಿಂದಲೇ ಹೇಳುತ್ತಿದ್ದರು. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಪಡೆಯ ಅಭಿಪ್ರಾಯ ಪಡೆದು ಶೋಧ ಕಾರ್ಯಾಚರಣೆಯನ್ನು ನಿಲ್ಲಿಸಲಾಗಿದೆ' ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಭಾರಿ ಮಳೆಯಿಂದ ಜನಜೀವನ ಅಸ್ತವ್ಯಸ್ತವಾಗಿರುವ ಕೊಲ್ಹಾಪುರ, ಸಾಂಗ್ಲಿ ಹಾಗೂ ಸಾತಾರ ಜಿಲ್ಲೆಗಳಲ್ಲಿ ಶೋಧ ಹಾಗೂ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ.

ಪ್ರವಾಹ ಪೀಡಿತ ಪ್ರದೇಶಗಳ ವೈಮಾನಿಕ ಸಮೀಕ್ಷೆಗೆ ಮುಂದಾಗಿದ್ದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ಪ್ರತಿಕೂಲ ಹವಾಮಾನದಿಂದಾಗಿ ಸಮೀಕ್ಷೆಯನ್ನು ಸೋಮವಾರ ಕೈಬಿಟ್ಟಿದ್ದಾರೆ.

ರಾಜಸ್ಥಾನ ಹಾಗೂ ಗುಜರಾತ್‌ನ ಹಲವೆಡೆ ಭಾರಿ ಮಳೆಯಾಗಿದೆ.

ನಿಧನ ವಾರ್ತೆ

ಸಿದ್ಧರಾಮ ಸ್ವಾಮೀಜಿ




ಯಡ್ರಾಮಿ (ಕಲಬುರ್ಗಿ ಜಿಲ್ಲೆ): ಇಲ್ಲಿಯ ಮುರುಘೇಂದ್ರ ಶಿವಯೋಗಿ ವಿರಕ್ತ ಮಠದ ಪೀಠಾಧಿಪತಿ ಸಿದ್ಧರಾಮ ಸ್ವಾಮೀಜಿ (78) ಸೋಮವಾರ ನಿಧನರಾದರು. ಅಂತ್ಯಕ್ರಿಯೆ ಮಂಗಳವಾರ (ಜು.27ರಂದು) ಮಧ್ಯಾಹ್ನ 1ಕ್ಕೆ ಮಠದ ಆವರಣದಲ್ಲಿ ನಡೆಯಲಿದೆ.

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಸತ್ಯಂಪೇಟೆ ಗ್ರಾಮದಲ್ಲಿ 1942ರ ಜೂನ್ 2ರಂದು ಜನಿಸಿದ್ದ ಅವರು ಅಲ್ಲಿಯೇ ಪ್ರಾಥಮಿಕ ಶಿಕ್ಷಣ ಪಡೆದರು. ನಂತರ ಯಡ್ರಾಮಿ, ಧಾರವಾಡ ಮತ್ತು ಬೆಂಗಳೂರಿನಲ್ಲಿ ಶಿಕ್ಷಣ ಪೂರೈಸಿದರು. ಧಾರವಾಡದ ಮುರುಘಾಮಠದಲ್ಲೂ ಅವರು ವಾಸವಿದ್ದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಎಚ್.ಜೆ.ಲಕ್ಕಪ್ಪಗೌಡ ನಿಧನ



ಮೈಸೂರು: ವಿಶ್ರಾಂತ ಕುಲಪತಿ ಪ್ರೊ.ಎಚ್.ಜೆ.ಲಕ್ಕಪ್ಪಗೌಡ (83) ಸೋಮವಾರ ಸಂಜೆ ನಗರದ ತಮ್ಮ ಮನೆಯಲ್ಲಿ ವಯೋಸಹಜ ಅನಾರೋಗ್ಯದಿಂದ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಇಲ್ಲಿನ ಕುವೆಂಪು ನಗರದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿ, ಕರ್ನಾಟಕ ರಾಜ್ಯ ಭಾಷಾ ಆಯೋಗದ ಸದಸ್ಯರಾಗಿ, ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಕನ್ನಡ ಜಾನಪದ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ದಕ್ಷಿಣ ಭಾರತದ ಭಾಷೆಗಳ ಜಾನಪದ ಅಧ್ಯಯನ ಕೇಂದ್ರದ ಅಧ್ಯಕ್ಷರಾಗಿದ್ದರು.

ಅಕಾಡೆಮಿ ಅಧ್ಯಕ್ಷರಾಗಿದ್ದಾಗಲೇ ಅಜ್ಞಾತ ಕಲಾವಿದರಿಗೆ 'ಕರ್ನಾಟಕ ಜಾನಪದ ರತ್ನ' ಪ್ರಶಸ್ತಿ ನೀಡುವ ಕಾರ್ಯಕ್ರಮವನ್ನು ಆರಂಭಿಸಿದ್ದರು. ಕುಲಪತಿಯಾಗಿದ್ದಾಗ ಅಧ್ಯಯನ ಪೀಠಗಳನ್ನು ಸ್ಥಾಪಿಸಿದ್ದರು. ಸ್ನಾತಕೋತ್ತರ ಪದವಿ ಸಂಯೋಜಿತ ಪಿಎಚ್.ಡಿ ಕೋರ್ಸ್‌ಗಳನ್ನೂ ಆರಂಭಿಸಿದ್ದರು. ಪ್ರಾಧಿಕಾರದ ಅಧ್ಯಕ್ಷರಾಗಿ ಕಾಲೇಜಿನಿಂದ ಕಾಲೇಜಿಗೆ, ಮನೆಯಿಂದ ಮನೆಗೆ ಪುಸ್ತಕ ಯಾತ್ರೆ, ಪುಸ್ತಕ ಸಂಸ್ಕೃತಿ, ಸಂವಾದ, ಕನ್ನಡ ಪುಸ್ತಕ ವೈವಿಧ್ಯ, ಕನ್ನಡದಲ್ಲಿ ವಿಜ್ಞಾನ ಪುಸ್ತಕಗಳು, ವಿಚಾರ ಸಾಹಿತ್ಯ, ಕನ್ನಡ ಪುಸ್ತಕ ಸಂವಹನ ಮಾಧ್ಯಮಗಳು ಎಂಬ ವಿಶಿಷ್ಟ ಕಾರ್ಯಕ್ರಮಗಳನ್ನು ರೂಪಿಸಿದ್ದರು.

ಕಾವ್ಯ, ಸಣ್ಣಕತೆ, ನಾಟಕ, ಜೀವನ ಚರಿತ್ರೆ, ಸಾಹಿತ್ಯ ವಿಮರ್ಶೆ, ಜಾನಪದ, ಮಕ್ಕಳ ಸಾಹಿತ್ಯ ಪ್ರಕಾರಗಳಲ್ಲಿ ಅವರು ಗಮನ ಸೆಳೆಯುವಂಥ ಕೃತಿಗಳನ್ನು ರಚಿಸಿದ್ದರು. ಪ್ರೌಢಶಾಲಾ ಶಿಕ್ಷಕರಾಗಿ ವೃತ್ತಿಯನ್ನು ಆರಂಭಿಸಿದ್ದ ಅವರು ಹಾಸನ, ಮೈಸೂರು, ಮಂಗಳೂರು, ಶಿವಮೊಗ್ಗದಲ್ಲಿ ಬೋಧನೆಯಿಂದ ಗಮನ ಸೆಳೆದಿದ್ದರು.

ಮೈಸೂರು ಸರ್ಕಾರದ ದೇವರಾಜ ಬಹದ್ದೂರ್ ಪ್ರಶಸ್ತಿ, ವಿಶ್ವಮಾನವ ಸಾಹಿತ್ಯ ಪ್ರಶಸ್ತಿ, ಜಾನಪದ ತಜ್ಞ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿದ್ದ ಅವರು ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಜಾನಪದ ಕುರಿತು ಇಂಗ್ಲಿಷ್‌ನಲ್ಲೂ ಕೃತಿಗಳನ್ನು ರಚಿಸಿದ್ದರು. ಅವರನ್ನು ಕುರಿತು 'ಹೊನ್ನಾರು' ಅಭಿನಂದನ ಗ್ರಂಥ ಪ್ರಕಟವಾಗಿತ್ತು.




ಓದು ಏಕಾಂತದಲ್ಲಿಯ ಲೋಕಾಂತ

ಪ್ರಜ್ಞಾ ಮತ್ತಿಹಳ್ಳಿ

ಅದೃಶ್ಯ ವೈರಾಣುವಿನೊಡನೆ ಹೋರಾಡುತ್ತ ವರ್ಷದ ಮೇಲೆ ವರ್ಷ ಉರುಳುತ್ತಿದೆ. ಅನಿಯಮಿತ ಪರೀಕ್ಷೆ, ಸಾಮಿಪ್ಯರಹಿತ ಪಾಠ-ಪ್ರವಚನಗಳಿಂದ ಯುವ ಸಮುದಾಯದ ಮೇಲೆ ಅಗೋಚರ ಒತ್ತಡಗಳು ಸೃಷ್ಟಿಯಾಗಿವೆ. ದೂರಪ್ರಯಾಣ, ಉಲ್ಲಾಸದ ಪ್ರವಾಸಗಳು ಸಾಧ್ಯವಾಗುತ್ತಿಲ್ಲವಾದ್ದರಿಂದ ಅದೇ ನಾಲ್ಕು ಗೋಡೆಯ ನಡುವೆ ಬದುಕುವ ಏಕತಾನತೆಯಿಂದ ಬಿಡುಗಡೆ ಹೊಂದಬೇಕೆಂದು ಮನಸ್ಸು ಚಡಪಡಿಸುತ್ತಿದೆ. ನಾವಿರುವ ಜಾಗದಲ್ಲಿ ಇರುವಂತೆಯೇ ಬೇರೊಂದು ಪ್ರಪಂಚವನ್ನು ಪ್ರವೇಶಿಸಿ ಜೀವಿಸಲಿಕ್ಕೆ ಮನುಷ್ಯರಿಗೆ ಸಾಧ್ಯವಿದೆಯೆ? ‘ಹೌದು’ ಎನ್ನುತ್ತಿದೆ ಅಕ್ಷರ ಲೋಕದ ಹೆಬ್ಬಾಗಿಲಿನ ಮೇಲೆ ಕುಳಿತಿರುವ ಅರಗಿಳಿ.

ಪುಸ್ತಕವನ್ನು ಓದುವುದು ಎಂದರೆ ಶಬ್ದಗಳ ಮೂಲಕ ಚಿತ್ರಬಿಂಬಗಳನ್ನು ನಮ್ಮ ಮನಸ್ಸಿನಲ್ಲಿ ಮೂಡಿಸಿಕೊಳ್ಳುತ್ತ, ವಾಸನೆ, ರುಚಿ, ಸ್ಪರ್ಶಗಳ ಕ್ಷಣಗಳನ್ನು ರೂಪಿಸಿಕೊಳ್ಳುತ್ತ, ನಮ್ಮ ಇಂದ್ರಿಯಗಳು ತಮ್ಮಷ್ಟಕ್ಕೆ ಅಚ್ಚೊತ್ತಿಕೊಳ್ಳುವ ಸಂವೇದನೆಗಳನ್ನು ಮನೋಚಿತ್ರವಾಗಿಸಿಕೊಂಡು ವಾಸ್ತವದ ಅನುಭವವನ್ನೇ ಕೊಡಮಾಡುವ ಒಂದು ಪ್ರಕ್ರಿಯೆ. ಆದ್ದರಿಂದ ಕಥೆ-ಕಾದಂಬರಿ ಅಥವಾ ಮಹಾಕಾವ್ಯಗಳನ್ನು ಓದುವಾಗ ನಾವು ಆ ಪಾತ್ರಲೋಕದೊಳಗೆ ಒಂದಾಗಿ ಹೋಗಿ ಅವರ ಕಷ್ಟ-ಕಾರ್ಪಣ್ಯಗಳಿಗೆ ಕೊರಗುತ್ತ, ಅವರ ಸುಖ-ಸಂತೋಷಗಳಿಗೆ ಸಂಭ್ರಮಿಸುತ್ತ ನಮ್ಮ ನಿಜ ಬದುಕಿನ ಏಕತಾನತೆಯನ್ನು ಮೀರಿಬಿಡುತ್ತೇವೆ. ಪುಸ್ತಕದ ಒಳಗಿನ ಜಗತ್ತು ಓದುಗನನ್ನು ಎಷ್ಟರಮಟ್ಟಿಗೆ ತನ್ನೊಳಗೆ ಕರಗಿಸಿಕೊಳ್ಳುತ್ತದೆಯೆಂದರೆ ಓದಿ ಮುಗಿದ ಎಷ್ಟೋ ದಿನಗಳವರೆಗೆ ಆ ಗುಂಗಿನಿಂದ ಹೊರಗೆ ಬರುವುದು ಅಸಾಧ್ಯವಾಗುತ್ತದೆ. ಪುಸ್ತಕಗಳ ಓದು ಕೇವಲ ಕಾಲಕ್ಷೇಪ ಅಥವಾ ಮನರಂಜನೆಗಷ್ಟೇ ಕಾರಣವಾಗುವುದಿಲ್ಲ, ಮನುಷ್ಯ ಸಂಬಂಧಗಳ ವಿಶ್ಲೇಷಣೆ, ತನ್ಮೂಲಕ ಆರೋಗ್ಯಕರ ಸಮಾಜದ ನಿರ್ಮಾಣಕ್ಕೂ ಮುನ್ನುಡಿ ಬರೆಯುತ್ತದೆ. ಆದರೆ ಈ ನಿಟ್ಟಿನಲ್ಲಿ ಬಹುಮುಖ್ಯವಾದ ಅಂಶವೆಂದರೆ ನಾವು ಆಯ್ಕೆ ಮಾಡಿಕೊಳ್ಳುವ ಪುಸ್ತಕ. ಕೇವಲ ರಂಜನೆಯನ್ನೇ ಗುರಿಯಾಗಿರಿಸಿಕೊಂಡಿರುವ ಪುಸ್ತಕಗಳ ಓದಿನಿಂದ ಹೆಚ್ಚಿನ ಪರಿಣಾಮ ಪ್ರಾಪ್ತಿಯಾಗುವುದಿಲ್ಲ. ಜೀವನ ಮೌಲ್ಯಗಳೆಂಬ ರಸಗಟ್ಟಿಗಳನ್ನು ಹುದುಗಿಸಿಕೊಂಡು ರಸ-ಭಾವಗಳ ಹದಮಿಶ್ರಣದಲ್ಲಿ ಸಿದ್ಧಗೊಂಡ ಸುರಪಾಕದಂತಹ ಕೃತಿಗಳನ್ನು ಓದಿದರೆ ಮನಸ್ಸು ದೇವಗಂಗೆಯಲ್ಲಿ ಮಿಂದು ಬಂದ ಸುಖಾನುಭೂತಿಗೆ ಒಳಗಾಗುತ್ತದೆ. ಆ ಪಾತ್ರಗಳ ಜೊತೆಗೆ ಲೀನವಾಗಿ ಕಾಲ-ದೇಶದಾಚೆಗೆ ಪರ್ಯಟನ ಮಾಡಿ ನಿಜಾನಂದವನ್ನು ಗಳಿಸಿಕೊಳ್ಳುತ್ತದೆ.



ರಾಮಾಯಣ-ಮಹಾಭಾರತ ಇತ್ಯಾದಿ ಮಹಾಕಾವ್ಯಗಳು ಅಥವಾ ಕಾರಂತ-ಕುವೆಂಪು ಮುಂತಾದವರ ಕೃತಿಗಳು ಅನೇಕ ತಲೆಮಾರುಗಳ ನಂತರವೂ ಓದುಗನನ್ನು ತಲುಪಬಲ್ಲ ಅಮೃತ ಫಲ ಹೊತ್ತ ಮರಗಳಂತೆ ನಿಂತಿವೆ. ಈ ಪುಸ್ತಕಗಳು ತಮ್ಮ ರಚನೆಯ ಎಷ್ಟೋ ವರ್ಷಗಳ ಕ್ರಮಿಸುವಿಕೆಯಲ್ಲಿ ಜನಾಂಗದ ಅಭಿರುಚಿ ಬದಲಾವಣೆಯ ಪರೀಕ್ಷೆಗಳನ್ನು ಗೆದ್ದುಕೊಂಡು ವಿಜಯಿಯಾಗಿರಲು ಕಾರಣ ಅವುಗಳಲ್ಲಿನ ವಿಷಯಕ್ಕಿರುವ ಸರ್ವಕಾಲಿಕ ಪ್ರಸ್ತುತತೆ. ಪ್ರಾಚೀನ ಕಾವ್ಯಗಳನ್ನು ಬರೆಯುವಾಗ ಕವಿಗಳು ಅದನ್ನೊಂದು ಪವಿತ್ರ ಕಾರ್ಯವೆಂದು ಭಾವಿಸಿ, ಅತ್ಯಂತ ಶುದ್ಧ ಹೃದಯದಿಂದ ಭಗವದರ್ಪಣೆಯ ಗೌರವದೊಂದಿಗೆ ಬರೆದಿದ್ದಾರೆ. ಛಂದೋಬದ್ಧವಾಗಿ ರಚಿತವಾದ ಪ್ರಾಚೀನ ಗ್ರಂಥಗಳನ್ನು ಓದಿದರೆ ಕೆಲವು ವೃತ್ತದಲ್ಲಿರುವ ಸಾಲುಗಳು ಗುಡ್ಡ ಹತ್ತುವ ಅಂದರೆ ಚಾರಣದ ಅನುಭವಗಳನ್ನು, ಕೆಲವು ವೃತ್ತದಲ್ಲಿರುವ ಸಾಲು ಮಂದ ಮಾರುತದ ಸೋಂಕಿನ ಅನುಭವವನ್ನು ನೀಡುತ್ತವೆ. ರನ್ನನ ಗದಾಯುದ್ಧದ ‘ಧಪ್ಪರಿ ದಟ್ಟುಂ ಪೊಟ್ಟನೆ ಧೊಪ್ಪ ದೊಗಪ್ಪನೆ ದಿಧಿಲ್ ಬುಧಿಲ್ಲೆನೆ ಸೊಪ್ಪು ಸವಡಪ್ಪಿನಂ’ ಎಂಬ ಪದ್ಯದ ಉದಾಹರಣೆ ನೋಡಬಹುದು. ಭೀಮ-ದುರ್ಯೋಧನರ ಗದಾಯುದ್ಧದ ವರ್ಣನೆ ಓದುವಾಗ ನಾವೇ ಹಾರಿ ನೆಗೆದು ವ್ಯಾಯಾಮ ಮಾಡಿದ ಪರಿಣಾಮ ಅನುಭವಕ್ಕೆ ಬರುತ್ತದೆ. ಕೆಲವು ಛಂದಸ್ಸಿನಲ್ಲಿ ಬರಹಗಳನ್ನು ಸ್ಪಷ್ಟ ಉಚ್ಚಾರ ಮಾಡಿ ಓದುವಾಗ ಉಸಿರಾಟದ ಏರಿಳಿತಗಳು ಪ್ರಾಣಾಯಾಮದ ಲಾಭವನ್ನೇ ನೀಡುತ್ತವೆ. ಈ ಎಲ್ಲ ಅಂಶಗಳನ್ನು ಮನಗಂಡ ನಮ್ಮ ಹಿರಿಯರು ಪ್ರಾಚೀನ ಗ್ರಂಥಗಳನ್ನು ನಿತ್ಯಪಾರಾಯಣ ಮಾಡಬೇಕೆಂದು ರೂಢಿಸಿಕೊಂಡಿದ್ದರು. ಅವುಗಳಲ್ಲಿನ ಮೌಲ್ಯಗಳು ಕ್ರಮೇಣ ಓದುಗನ ಮನದಾಳಕ್ಕಿಳಿದು ಅವನ ಸ್ವಭಾವವನ್ನು ಹದಗೊಳಿಸುತ್ತಿತ್ತು.

> ಕೋವಿಡ್ ಕಾರಣದಿಂದ ನಾವೆಲ್ಲರೂ ಬಲವಂತದ ಒಂಟಿತನವನ್ನು ಅನುಭವಿಸುತ್ತಿದ್ದೇವೆ. ಈ ಏಕಾಂತದಲ್ಲಿ ನಮ್ಮನ್ನು ಪ್ರಪಂಚದೊಂದಿಗೆ ಮುಖಾಮುಖಿ ಮಾಡಿಸುವಂಥದ್ದು ಪುಸ್ತಕಗಳ ಓದು...

ಮಾಸ್ತಿ, ಪು.ತಿ.ನ. ಅವರಿಂದ ಹಿಡಿದು ತೇಜಸ್ವಿಯವರ ತನಕ ಅನೇಕ ಸಾಹಿತಿಗಳು ಜನಮಾನಸಕ್ಕೆ ಉತ್ತಮ ಸಂದೇಶ ತಲುಪಿಸಿ, ಆರೋಗ್ಯಪೂರ್ಣ ಸಮಾಜವನ್ನು ಕಟ್ಟುವ ಸದಾಶಯ ಇಟ್ಟುಕೊಂಡಿದ್ದರು. ಆದ್ದರಿಂದ ಆ ಪುಸ್ತಕಗಳ ಓದನ್ನು ಒಂದು ರಸಯಾತ್ರೆಗೆ ಹೋಲಿಸಬಹುದು. ನಮ್ಮ ಹುಲುಬದುಕಿನ ಸಂಕಟಗಳನ್ನು ಎದುರಿಸುವ ತಾಕತ್ತನ್ನು ಓದು ದೊರಕಿಸಿಕೊಡುತ್ತದೆಯೆನ್ನುವುದು ಅನೇಕ ಅಧ್ಯಯನಗಳಲ್ಲೂ ದೃಢಪಟ್ಟಿದೆ. 2013ರಲ್ಲಿ ನಡೆದ ಸಂಶೋಧನೆಯೊಂದು ತಿಳಿಸಿರುವ ಪ್ರಕಾರ ಯೋಗ ಅಥವಾ ಧ್ಯಾನಗಳು ನೀಡುವಷ್ಟೇ ಪ್ರಮಾಣದ ಮಾನಸಿಕ ಪುನಶ್ಚೇತನದ ಪರಿಣಾಮವನ್ನು ಒಳ್ಳೆಯ ಓದಿನಿಂದಲೂ ಪಡೆದುಕೊಳ್ಳಬಹುದು.


ಮನೋತಜ್ಞರು ಅಭಿಪ್ರಾಯ ಪಡುವಂತೆ ಮನುಷ್ಯ ತನ್ನ ಜೀವನದ ಕುರಿತಾಗಿ ಮಾತ್ರ ಗಮನವನ್ನು ಕೇಂದ್ರೀಕರಿಸಿದಾಗ ಅವನ ಸಣ್ಣ-ಪುಟ್ಟ ಸಮಸ್ಯೆಗಳೂ ಕೂಡ ಆತನಿಗೆ ದೊಡ್ಡದಾಗಿ ಕಾಣುತ್ತವೆ. ನಾವು ಛಾಯಾಚಿತ್ರವನ್ನು ತೆಗೆಯುವಾಗ ಆ ವಸ್ತುವಿನ ಹತ್ತಿರ ಕ್ಯಾಮೆರಾವನ್ನು ತೆಗೆದುಕೊಂಡು ಹೋದರೆ ಅದು ಹೇಗೆ ಝೂಮ್ ಪರಿಣಾಮವನ್ನು ತೋರಿಸುತ್ತದೆಯೋ ಹಾಗೆಯೇ ಬದುಕಿನಲ್ಲಿಯೂ ಕೂಡ ಲಕ್ಷ್ಯದ ಕೇಂದ್ರೀಕರಿಸುವಿಕೆ ಬಹಳ ಮುಖ್ಯವಾಗುತ್ತದೆ. ಪುಸ್ತಕವನ್ನು ಓದುವಾಗ ನಮ್ಮ ಲಕ್ಷ್ಯ ಅದರಲ್ಲಿನ ಕತೆ-ಸನ್ನಿವೇಶ-ಪಾತ್ರಗಳು ಇವುಗಳ ಕುರಿತಾಗಿ ಕೇಂದ್ರೀಕೃತವಾಗುವುದರಿಂದ ಮನಸ್ಸು ತನ್ನ ಸ್ವಮರುಕದಿಂದ ಹೊರಬರುತ್ತದೆ. ದೇಶ ಸುತ್ತಿ ನೋಡಿದರೆ ಸಿಗುವ ಲಾಭವನ್ನು ಕೋಶ ಓದಿ ನೋಡಿದಾಗಲೂ ಪಡೆದುಕೊಳ್ಳಬಹುದು. ❖

‘ನಿದಿರೇ ನೀನಿಲ್ಲದೆ ನಾನಿಲ್ಲ’

ಎಸ್. ಎನ್. ಓಂಕಾರ್

ನಿದ್ರೆ. ಇದು ದೇಹ ಹಾಗೂ ಮನಸ್ಸುಗಳೆರಡನ್ನೂ ಚೇತೋಹಾರಿಯಾಗಿ ಮಾಡುವ ಸ್ವಾಭಾವಿಕ ಪ್ರಕ್ರಿಯೆಯಾಗಿದೆ. ನಮ್ಮ ಪರಿಪೂರ್ಣ ಸ್ವಾಸ್ಥ್ಯಕ್ಕೆ ನಿದ್ರೆ ಅನಿವಾರ್ಯ. ಸಹಜವಾದ ಈ ಪ್ರಕ್ರಿಯೆಯಲ್ಲಿ ಏರುಪೇರಾದಾಗ ನಿದ್ರೆಯ ಮಹತ್ವ ತಿಳಿಯುತ್ತದೆ. ಅನಿದ್ರತೆ, ಕುಂಠಿತ ನಿದ್ರೆ ಹಾಗೂ ಭಾದಿತ ನಿದ್ರೆ – ಇವು ನಮ್ಮ ಮನೋದೈಹಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತವೆ. ಆರೋಗ್ಯಕರ ನಿದ್ರೆಗಾಗಿ ಒತ್ತಡ ರಹಿತ ಜೀವನ ಅತ್ಯಗತ್ಯ. ಇದರೊಂದಿಗೆ ಕೆಲವು ಯೋಗಾಸನಗಳು ಹಾಗೂ ಪ್ರಾಣಾಯಾಮ ವಿಧಾನಗಳು ಸುಖ-ನಿದ್ರೆಗೆ ಸೋಪಾನ.

ಮುಂಬಾಗುವಿಕೆಯ ಆಸನಗಳು



1. ಮ್ಯಾಟ್ ಒಂದರ ಮೇಲೆ ಬ್ಲ್ಯಾಂಕೆಟ್ ಎರಡನ್ನು ಇರಿಸಿಕೊಳ್ಳಿ. ಅದರ ಮೇಲೆ ಸ್ವಸ್ತಿಕಾಸನದಲ್ಲಿ ಕುಳಿತುಕೊಳ್ಳಿ.
2. ನಿಮ್ಮ ಮುಂದೆ ಒಂದು ಕುರ್ಚಿಯನ್ನು ಇರಿಸಿ; ಕುರ್ಚಿಯ ಆಸನದ ಮೇಲೆ ಬ್ಲ್ಯಾಂಕೆಟ್ ಒಂದನ್ನು ಇರಿಸಿಕೊಳ್ಳಿ.
3. ನಿಧಾನವಾಗಿ ಮುಂದಕ್ಕೆ ಬಾಗಿ, ಹಣೆಯನ್ನು ಕುರ್ಚಿಯ ಆಸನದ ಮೇಲೆ ಇರುವ ಬ್ಲ್ಯಾಂಕೆಟ್‌ನ ಮೇಲೆ ವಿರಮಿಸಿ.
4. ಕೈಗಳೆರಡನ್ನೂ ಕುರ್ಚಿಯ ಮೇಲೆ ವಿರಮಿಸಿ.
5. ಬೆನ್ನುಗಂಬವು ನೇರವಾಗಿರುವಂತೆ ಎಚ್ಚರ ವಹಿಸಿ.
6. ನಿಧಾನವಾಗಿ ಮತ್ತು ದೀರ್ಘವಾಗಿ ಉಸಿರಾಡುತ್ತಾ ಸುಮಾರು 3-5 ನಿಮಿಷದ ಕಾಲ ಈ ಸ್ಥಿತಿಯಲ್ಲಿ ವಿರಮಿಸಿ.
7. ನಂತರ ನೇರವಾಗಿ ಕುಳಿತುಕೊಳ್ಳಿ.

ಸೂಚನೆ: ನೆಲದ ಮೇಲೆ ಕುಳಿತುಕೊಳ್ಳಲು ಸಾಧ್ಯವಾಗದಿದ್ದಲ್ಲಿ ಕುರ್ಚಿಯ ಮೇಲೆ ಕುಳಿತು ಮಾಡಬಹುದು.

1. ಕುರ್ಚಿಯ ಮೇಲೆ ನೇರವಾಗಿ ಕುಳಿತುಕೊಳ್ಳಿ.
2. ಗೋಡೆಗೆ ಬಟ್ಟೆಯೊಂದನ್ನು (ಟವಲ್ ಅಥವಾ ದುಪ್ಪಟ್ಟ) ಒರಗಿಸಿ ಇರಿಸಿಕೊಳ್ಳಿ.
3. ನಿಧಾನವಾಗಿ ಮುಂದಕ್ಕೆ ಬಾಗಿ, ಹಣೆಯನ್ನು ಬಟ್ಟೆಯ ಮೇಲೆ ಒರಗಿಸಿ ವಿರಮಿಸಿ.
4. ಹಸ್ತಗಳನ್ನು ಮಂಡಿಯ ಮೇಲೆ ಆರಾಮವಾಗಿ ಇರಿಸಿ; ಹೆಬ್ಬೆರಳು ಹಾಗೂ ತೋರ್ಬೆರಳು ಪರಸ್ಪರ ಸ್ಪರ್ಶದಲ್ಲಿರಲಿ.
5. ಬೆನ್ನುಗಂಬವು ನೇರವಾಗಿರುವಂತೆ ಎಚ್ಚರ ವಹಿಸಿ.



6. ನಿಧಾನವಾಗಿ ಮತ್ತು ದೀರ್ಘವಾಗಿ ಉಸಿರಾಡುತ್ತಾ ಸುಮಾರು 3-5 ನಿಮಿಷದ ಕಾಲ ಈ ಸ್ಥಿತಿಯಲ್ಲಿ ವಿರಮಿಸಿ.
7. ನಂತರ ನೇರವಾಗಿ ಕುಳಿತುಕೊಳ್ಳಿ.

ಈ ಆಸನಗಳಲ್ಲಿ ಅಳವಡಿಸಿಕೊಳ್ಳಬೇಕಾದಂತಹ ಉಸಿರಾಟದ ಕ್ರಮ

1. ಸುಮಾರು 4 ಸೆಕೆಂಡುಗಳ ಕಾಲ ಉಸಿರನ್ನು ಒಳಕ್ಕೆ ತೆಗೆದುಕೊಳ್ಳಿ. ಸುಮಾರು 6 ಸೆಕೆಂಡುಗಳ ಕಾಲ ಉಸಿರನ್ನು ಹೊರಕ್ಕೆ ಬಿಡಿ.
2. ಉಸಿರನ್ನು ಒಳಕ್ಕೆ ತೆಗೆದುಕೊಳ್ಳುತ್ತಾ ಪ್ರಾಣಶಕ್ತಿಯು ಬೆನ್ನುಗಂಬದ ಮೂಲಭಾಗದಿಂದ ಮೇಲ್ಭಾಗಕ್ಕೆ (ತಲೆಬುರುಡೆಯ ಹಿಂಬದಿ) ಊರ್ಧ್ವಮುಖವಾಗಿ ಚಲಿಸುತ್ತಿರುವಂತೆ ಭಾವಿಸಿ.
3. ಉಸಿರನ್ನು ಬಿಡುತ್ತಾ ಪ್ರಾಣಶಕ್ತಿಯು ಬೆನ್ನುಗಂಬದ ಮೇಲ್ಭಾಗದಿಂದ ಮೂಲಭಾಗಕ್ಕೆ ಅಧೋಮುಖವಾಗಿ ಚಲಿಸುತ್ತಿರುವಂತೆ ಭಾವಿಸಿ.
4. ಈ ಉಸಿರಾಟದ ಪ್ರಕ್ರಿಯೆಯಲ್ಲಿ ಬೆನ್ನುಗಂಬದ ಉದ್ದಗಲಗಳನ್ನು ತದೇಕ ಚಿತ್ತದಿಂದ ಗಮನಿಸುತ್ತಿರಬೇಕು.

ಭ್ರಮರಿ ಪ್ರಾಣಾಯಾಮ

ಭ್ರಮರಿ ಪ್ರಾಣಾಯಾಮವು ವಿಶಿಷ್ಟ ಶಬ್ದದೊಂದಿಗೆ ಉಸಿರನ್ನು ಬಿಡುವ ಕ್ರಮವಾಗಿದೆ.

ವಿಶೇಷತೆಗಳು:

1. ಭ್ರಮರ ಎಂದರೆ ಕಪ್ಪುಬಣ್ಣದ ದುಂಬಿ. ಅದು ಕಡಿಮೆ ಆವರ್ತನದ ಹಾಗೂ ಸ್ವರದ, ‘ಹಮ್’ ಶಬ್ದವನ್ನು ಮಾಡುತ್ತದೆ. ಅದೇ ರೀತಿಯ ಶಬ್ದವನ್ನು ರೇಚಕ ಕ್ರಿಯೆಯಲ್ಲಿ (ಉಸಿರನ್ನು ಬಿಡುವಾಗ) ಅಳವಡಿಸಿಕೊಳ್ಳುವುದು ಭ್ರಮರಿ ಪ್ರಾಣಾಯಾಮದ ಕ್ರಮವಾಗಿದೆ.
2. ಇದರಲ್ಲಿನ ಆವರ್ತನವು ಸುಮಾರು 120 ಹರ್ಟ್ಸ್‌ನಿಂದ 200 ಹರ್ಟ್ಸ್ ವರೆಗೆ ಇರುತ್ತದೆ.
3. ‘ಹಮ್’ ಶಬ್ದವನ್ನು ಉಚ್ಚರಿಸಿದಾಗ ದೇಹದಲ್ಲಿ ನೈಟ್ರಿಕ್ ಆಕ್ಸೈಡ್‌ನ ಪ್ರಮಾಣ ಹೆಚ್ಚುತ್ತದೆ. ರಕ್ತದಲ್ಲಿ ನೈಟ್ರಿಕ್ ಆಕ್ಸೈಡ್ ಒಳ್ಳೆಯ ಪ್ರಮಾಣದಲ್ಲಿ ಇದ್ದರೆ ದೇಹಕ್ಕೆ ವೈರಾಣುಗಳಿಂದ ಉತ್ತಮ ರಕ್ಷಣೆ ದೊರೆಯುತ್ತದೆ.
4. ‘ಹಮ್’ ಶಬ್ದೋಚ್ಚಾರಣೆಯ ತರಂಗಗಳು ಮೆದುಳಿನ ಜೀವಕೋಶಗಳಿಗೂ ಹಿತಕಾರಿ.

ವಿಧಾನ

1. ನೇರವಾಗಿ ಕುಳಿತುಕೊಳ್ಳಿ.
2. ಉಸಿರಾಟವನ್ನು ಗಮನಿಸಿ.
3. ಉಸಿರನ್ನು ತೆಗೆದುಕೊಳ್ಳುತ್ತಾ ಉದರದ ತಳಭಾಗ, ಮಧ್ಯಭಾಗ, ಮೇಲ್ಭಾಗ ಹಂತಹಂತವಾಗಿ ಹಿಗ್ಗಬೇಕು.
4. ಉಸಿರನ್ನು ಬಿಡುತ್ತಾ ಉದರದ ಮೇಲ್ಭಾಗ, ಮಧ್ಯಭಾಗ, ತಳಭಾಗ ಹಂತಹಂತವಾಗಿ ಸಂಕುಚನಗೊಳ್ಳಬೇಕು.
5. ಸುಮಾರು 4 ಸೆಕೆಂಡುಗಳ ಕಾಲ ಉಸಿರನ್ನು ಒಳಕ್ಕೆ ತೆಗೆದುಕೊಳ್ಳಿ. ಸುಮಾರು 6-8 ಸೆಕೆಂಡುಗಳ ಕಾಲ ಉಸಿರನ್ನು ಹೊರಕ್ಕೆ ಬಿಡಿ.
6. ನಿಧಾನವಾಗಿ ಉಸಿರನ್ನು ತೆಗೆದುಕೊಳ್ಳಿ; ಉಸಿರನ್ನು ಬಿಡುತ್ತಾ ಧ್ವನಿ ಪೆಟ್ಟಿಗೆಯಿಂದ ‘ಹಮ್’ ಶಬ್ದವನ್ನು ಆಂತರಿಕವಾಗಿ ಉಚ್ಚರಿಸಬೇಕು.
7. ಈ ಉಚ್ಚಾರಣೆಯ ಸಮಯದಲ್ಲಿ ನಾಲಿಗೆ ಮತ್ತು ತುಟಿಗಳು ವಿಶ್ರಾಂತ ಸ್ಥಿತಿಯಲ್ಲಿ ಇರಬೇಕು. ‘ಹಮ್’ ಉಚ್ಚಾರಣೆಯ ಆವರ್ತನ ಹಾಗೂ ಸ್ವರ ಏರಿಳಿತಗಳಿಲ್ಲದೆ ಏಕಪ್ರಕಾರವಾಗಿರಬೇಕು.
8. ಶಬ್ದೋಚ್ಚಾರಣೆಯು ಮೃದುವಾಗಿಯೂ ಮಧುರವಾಗಿಯೂ ಇರಬೇಕು.
9. ‘ಹಮ್’ ಶಬ್ದದ ತರಂಗಗಳನ್ನು ವಿಶೇಷವಾಗಿ ಮೆದುಳಿನ ಭಾಗದಲ್ಲಿ ಗಮನಿಸಿ.
10. 5-8 ನಿಮಿಷಗಳ ಕಾಲ ಈ ಉಸಿರಾಟವನ್ನು ಅಭ್ಯಾಸ ಮಾಡಿ. ನಂತರ ವಿರಮಿಸಿ.

ಉಪಯುಕ್ತತೆ

1. ಈ ಕ್ರಮಗಳಲ್ಲಿ ಬೆನ್ನುಗಂಬದ ಆದಿಯಾಗಿ ಇರುವ ಚಕ್ರಸ್ಥಾನಗಳು ಸಚೇತನಗೊಳ್ಳುವುದರಿಂದ ಒಳಸುರಿಕೆಯ ಗ್ರಂಥಿಗಳ ಸಪ್ರಮಾಣವಾಗಿ ಕ್ರಿಯಾಶೀಲವಾಗುವುದರಿಂದ ಮಾನಸಿಕ ಸಮಾಧಾನ ಸುಲಭ ಸಾಧ್ಯವಾಗುತ್ತದೆ.
2. ವಪೆಯ ಸಂಪೂರ್ಣ ಚಲನೆ ಹಾಗೂ ನಿಧಾನ ಮತ್ತು ಆಳ ಉಸಿರಾಟದ ಪರಿಣಾಮವಾಗಿ ಅಲೆಮಾರಿ ನರವು (vagus nerve) ಉತ್ತೇಜಿತಗೊಳ್ಳುತ್ತದೆ. ಅಲೆಮಾರಿ ನರವು ತಲೆಬುರುಡೆಯ ಹತ್ತನೆಯ ನರವಾಗಿದ್ದು, ಇದು ಹೃದಯ ಮತ್ತು ಜೀರ್ಣಾಂಗ ವ್ಯವಸ್ಥೆಯನ್ನು ನಿಯಂತ್ರಿಸುತ್ತದೆ ಹಾಗೂ ಅನುದ್ವೇಗಕರ ನರಮಂಡಲದ ಮೇಲೂ ನಿಯಂತ್ರಣವನ್ನು ಹೊಂದಿರುತ್ತದೆ. ಹಾಗಾಗಿ ದೇಹ ಮನಸ್ಸುಗಳೆರಡೂ ಆಳವಾದ ವಿಶ್ರಾಂತಿಯನ್ನು ಪಡೆಯುತ್ತವೆ.
3. ಪ್ರತಿನಿತ್ಯ ಬೆಳಗ್ಗೆ ಮತ್ತು ಸಂಜೆ ಈ ಕ್ರಮಗಳನ್ನು ಅಭ್ಯಾಸ ಮಾಡುವುದರಿಂದ ಉತ್ತಮ ನಿದ್ರೆ ಲಭ್ಯವಾಗಿ ಸ್ವಾಸ್ಥ್ಯಸಿದ್ಧಿಯಾಗುತ್ತದೆ. ❖

ಸಿಇಟಿ ದಿಕ್ಸೂಚಿ


Physics – Work, Power & Energy

1. Two particles of masses m_1 and m_2 have equal kinetic energies. The ratio of their momenta is
(1) $m_1 : m_2$ (2) $m_2 : m_1$
(3) $\sqrt{m_1} : \sqrt{m_2}$ (4) $m_1^2 : m_2^2$

2. A body is initially at rest. It undergoes one – dimensional motion with constant acceleration. The power delivered to it at time ‘t’ is proportional to
(1) $t^{1/2}$ (2) t
(3) $t^{3/2}$ (4) t^2

3. A body of mass 5 kg is thrown vertically up with a kinetic energy of 490 J. The height at which the kinetic energy of the body becomes half of the original value is (acceleration due to gravity) $= 9.8 ms^{-2}$)
(1) 5 m (2) 2.5 m
(3) 10 m (4) 12.5 m

4. From a fixed support, two small identical spheres are suspended by means of strings of length 1 m each. They are pulled aside as shown and then released. B is the mean position. Then the two spheres collide,



(1) at B after 0.25 second
(2) at B after 0.5 second
(3) on the right side of B after some time
(4) on the right side of I NH₃ ıen the strings are inclined at with B

5. A truck accelerates from speed v to 2v. Work done in during this is
(1) Three times as the work done in accelerating it from rest to v.
(2) Same as the work done in accelerating it from rest to v
(3) Four times as the work done in accelerating it from rest to v
(4) less than the work done in accelerating it from rest to v

6. A 12 kg bomb at rest explodes into two pieces of 4 kg and 8 kg. If the momentum of 4kg piece is 20 Ns, the kinetic energy of the 8 kg piece is -
(1) 25 J (2) 20 J
(3) 50 J (4) 40 J

7. During inelastic collision between two objects, which of the following quantity always remains conserved?
(1) Total linear momentum
(2) Total kinetic energy
(3) Speed of each body
(4) Total mechanical energy

8. A motor pump lifts 6 tonnes of water from a well of depth 25 m to the first floor of height 35m from the ground floor in 20 minutes. The power of the pump (in kW) is [g = 10 ms-2] [KCET-2017]
(1) 3 (2) 6
(3) 1.5 (4) 12

9. Two bodies of masses m_1 and m_2 are acted upon by a constant force F for a time t. They start from rest and acquire kinetic energies E1 and E2 respectively. Then is $\frac{E_1}{E_2}$ is
(1) $\frac{m_1}{m_2}$ (2) $\frac{m_2}{m_1}$
(3) 1 (4) $\frac{\sqrt{m_1 m_2}}{m_1+m_2}$

10. The kinetic energy of a body of mass 4 kg and momentum 6 Ns will be a.
(1) 2.5J (2) 3.5J
(3) 4.5J (4) 5.5J

Answers

1. Answer (3)
Solution:
$$k = \frac{p^2}{2m};\ p \times \sqrt{m}$$

2. Answer: (2)
$$\text{Sol: } \frac{dv}{dt} = k \Rightarrow v = k\,t$$
$$F = m\frac{dv}{dt} = mk$$
$$\Rightarrow P = F.V = mk.kt = mk^2t = P \propto t^1$$

3. Answer: (1)
Sol.: Given, $m = 5kg\ \&\ KE = 490\,J$
By the law of conservation of energy
$$\frac{1}{2}mu^2 = \frac{1}{2}mv^2 + mgh$$
$$490 = 245 + 5 \times 9.8 \times h$$
$$h = \frac{490 - 245}{5 \times 9.8} = 5m$$

4. Answer: (2)
Sol :Time taken for both spheres to meet at B
$$= \frac{1}{4} \times 2\pi\sqrt{\frac{\ell}{g}} = \frac{1}{4} \times 2\pi \times \frac{1}{\sqrt{10}} = 0.5\,s$$

5. Answer: (1)
Sol :Work done for increasing speed from
$$v \to 2v \quad = \frac{1}{2}m\left(4v^2 - v^2\right)$$
$$W_1 = \frac{3}{2}mv^2$$
Work done from rest → v
$$W_2 = \frac{1}{2}mv^2$$
$$W_1 = 3W_2$$

6. Answer (1)
Sol. By the law of conservation of linear momentum.
Initial momentum = final momentum
The initial momentum of the system is zero.
So, the final momentum of the system must also be zero.
Hence, the momentum of an 8kg piece must be equal, opposite to the momentum of a 4kg piece.8kg. piece, P = 20 NS
K.E. of 8kg piece, $K = P^2 / 2m = 25$ J

7. Answer: (1)
Hint: Conceptual

8. Answer: (1)
$$\text{Sol: Power } P = \frac{\text{work}}{\text{time}} = mg\frac{h}{t}$$
$$= 6 \times 10^3\,kg \times 10\frac{m}{s^2} \times \left(\frac{35 + 25m}{20 \times 60\,s}\right)$$
$$= \frac{6 \times 10^4 \times 60}{20 \times 60} W = 3 \times 10^3\ W = 3\ kW$$

9. Answer: (2)
$$\text{Sol:- Acceleration } a = \frac{F}{m}$$
$$\text{Final velocity } v = \frac{F}{m \times t}$$
$$v_1 = \frac{Ft}{m_1};\ v_2 = \frac{Ft}{m_2}$$
$$\frac{E_1}{E_2} = \frac{1}{2}m_1 v_1^2 \times \frac{2}{m_2 v_2^2} = \frac{m_2}{m_1}$$

10. Answer: (3)
Hint :Given m = 4kg, p = 6 Ns
$$K.E. = \frac{P^2}{2m} = \frac{6 \times 6}{2 \times 4} = \frac{0.36}{8}$$
$$K.E. = 4.5J$$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 30

396. ಭಾರತದಲ್ಲಿ ಮೊದಲನೇ ಸಾರ್ವತ್ರಿಕ ಚುನಾವಣೆ ನಡೆದದ್ದು ಯಾವಾಗ?
ಎ) 1948
ಬಿ) 1950
ಸಿ) 1951
ಡಿ) 1952

397. ಭಾರತದ ಸಂವಿಧಾನದಲ್ಲಿ ಎಷ್ಟು ಶೆಡ್ಯೂಲ್‌ಗಳಿವೆ?
ಎ) 9 ಶೆಡ್ಯೂಲ್‌ಗಳು
ಬಿ) 10 ಶೆಡ್ಯೂಲ್‌ಗಳು
ಸಿ) 11 ಶೆಡ್ಯೂಲ್‌ಗಳು
ಡಿ) 12 ಶೆಡ್ಯೂಲ್‌ಗಳು

398. 2021 ನೇ ಫ್ರೆಂಚ್ ಓಪನ್ ಟೆನಿಸ್ ಪುರುಷರ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದವರು ಯಾರು?
ಎ) ಸ್ಟೆಫಾನೊಸ್ ಸಿಟ್ಸಿಪಾಸ್
ಬಿ) ರೋಜರ್ ಫೆಡರರ್
ಸಿ) ರಫೇಲ್ ನಡಾಲ್
ಡಿ) ನೊವಾಕ್ ಡಿ. ಜೊಕೊವಿಚ್

399. + ಅಂದರೆ ÷, × ಅಂದರೆ -, ÷ ಅಂದರೆ +, - ಅಂದರೆ × ಹಾಗಾದರೆ 16 ÷ 8 × 6-2 ÷ 12 = ?
ಎ) 22
ಬಿ) 24
ಸಿ) 23
ಡಿ) 20

400. ‘ಆಗಾ ಖಾನ್ ಕಪ್’ ಯಾವ ಕ್ರೀಡೆಗೆ ಸಂಬಂಧಿಸಿದೆ?
ಎ) ಹಾಕಿ
ಬಿ) ಕ್ರಿಕೆಟ್
ಸಿ) ಬ್ಯಾಡ್ಮಿಂಟನ್
ಡಿ) ಗಾಲ್ಫ್

401. ‘ಸಾವಿರ ಹಾಡುಗಳ ಸರದಾರ’ ಎಂದು ಹೆಸರಾದವರು ಯಾರು?
ಎ) ಜಿ.ವಿ.ಅಯ್ಯರ್
ಬಿ) ಬಾಳಪ್ಪ ಹುಕ್ಕೇರಿ
ಸಿ) ಟಿ.ಪಿ.ಕೈಲಾಸಂ
ಡಿ) ಎಂ.ವೆಂಕಟ ಕೃಷ್ಣಯ್ಯ

402. ಪ್ರಸಿದ್ಧ ಗಿರಿಧಾಮ ‘ನಂದಿಬೆಟ್ಟ’ ಯಾವ ಸ್ಥಳದಲ್ಲಿದೆ?
ಎ) ಕೆಮ್ಮಣ್ಣುಗುಂಡಿ
ಬಿ) ಚಿಕ್ಕಬಳ್ಳಾಪುರ
ಸಿ) ಬೇಲೂರು
ಡಿ) ಕೊಡಗು

403. ಜಾನಪದ ವಸ್ತುಸಂಗ್ರಹಾಲಯ ಇರುವ ಸ್ಥಳ
ಎ) ಮೈಸೂರು
ಬಿ) ಜೈಪುರ (ರಾಜಸ್ಥಾನ)
ಸಿ) ಹೈದರಾಬಾದ್
ಡಿ) ಪಟಿಯಾಲಾ

404. ಈ ಕೆಳಗಿನವುಗಳಲ್ಲಿ ಯಾವುದನ್ನು ‘ಕಪ್ಪು ಗುಡಿಗಳ ಗೋಪುರ’ ಎಂದು ಕರೆಯುತ್ತಾರೆ?
ಎ) ಮೀನಾಕ್ಷಿ ದೇವಾಲಯ (ಮಧುರೈ)
ಬಿ) ತಿರುಪತಿ ದೇವಾಲಯ (ಆಂಧ್ರಪ್ರದೇಶ)
ಸಿ) ಸೂರ್ಯ ದೇವಾಲಯ (ಕೋನಾರ್ಕ್)
ಡಿ) ಅಕ್ಷರಧಾಮ ದೇವಾಲಯ (ಗುಜರಾತ್)

405. ಒಬ್ಬ ವ್ಯಾಪಾರಿಯು ಒಂದು ಕುರ್ಚಿಯನ್ನು ₹ 80ಕ್ಕೆ ಕೊಂಡುಕೊಂಡು ಅದನ್ನು ₹ 96ಕ್ಕೆ ಮಾರಿದರೆ ಅವನಿಗೆ ಲಭಿಸಿದ ಶೇ. ಲಾಭವೆಷ್ಟು?
ಎ) ಶೇ 16
ಬಿ) ಶೇ 20
ಸಿ) ಶೇ 25
ಡಿ) ಶೇ 15

406. ಈ ಅನುಕ್ರಮದಲ್ಲಿ ಮುಂದಿನ ಸಂಖ್ಯೆ ಯಾವುದು?
25, 16, 9, ?
ಎ) 4
ಬಿ) 5
ಸಿ) 2
ಡಿ) 3

407. ಕೇಂದ್ರ ಶಾಸನಸಭೆಯ ಎರಡು ಅಧಿವೇಶನಗಳ ನಡುವಿನ ಗರಿಷ್ಠ ಕಾಲಮಿತಿ ಎಷ್ಟು?
ಎ) 4 ತಿಂಗಳು
ಬಿ) 6 ತಿಂಗಳು
ಸಿ) 5 ತಿಂಗಳು
ಡಿ) 3 ತಿಂಗಳು

408. ಲೋಕಸಭೆಯ ಪ್ರಥಮ ಮಹಿಳಾ ಸ್ಪೀಕರ್ ಯಾರು?
ಎ) ಪ್ರತಿಭಾ ಪಾಟೀಲ್
ಬಿ) ಸರೋಜಿನಿ ನಾಯ್ಡು
ಸಿ) ಉರ್ಮಿಳಾ ಸಿಂಗ್
ಡಿ) ಮೀರಾ ಕುಮಾರಿ

409. ‘ಬಸವ ಪ್ರಶಸ್ತಿ’ ಕರ್ನಾಟಕ ಸರ್ಕಾರ ನೀಡುವ ----- ಪ್ರಶಸ್ತಿಯಾಗಿರುತ್ತದೆ.
ಎ) ಪ್ರಾದೇಶಿಕ ಮಟ್ಟದ
ಬಿ) ರಾಷ್ಟ್ರ ಮಟ್ಟದ
ಸಿ) ರಾಜ್ಯ ಮಟ್ಟದ
ಡಿ) ಅಂತರರಾಷ್ಟ್ರೀಯ ಮಟ್ಟದ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 29ರ ಉತ್ತರ: 391. ಬಿ, 392. ಬಿ, 393. ಸಿ, 394. ಎ, 395. ಎ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಯಾರಾದರೂ ನಿಮ್ಮನ್ನು ಟೀಕಿಸಿದಾಗ ಅಥವಾ ಒಪ್ಪದಿದ್ದಾಗ, ದ್ವೇಷದ ಸಣ್ಣ ಇರುವೆಯೊಂದು ನಿಮ್ಮ ಹೃದಯದಲ್ಲಿ ಹುಟ್ಟಿಕೊಳ್ಳುತ್ತದೆ. ಅದನ್ನು ನೀವು ಒಮ್ಮೆಗೇ ಹೊಸಕಿಹಾಕದಿದ್ದರೆ ಅದೊಂದು ಹಾವಾಗಿ ಅಥವಾ ಡ್ರ್ಯಾಗನ್ ಆಗಿ ಬೆಳೆಯಬಹುದು. -ರೂಮಿ

ನೇಪಥ್ಯಕ್ಕೆ ಸರಿದ ಯಡಿಯೂರಪ್ಪ ಹೊಸ ಹಾದಿಯತ್ತ ಕರ್ನಾಟಕ ಬಿಜೆಪಿ

ರಾಜ್ಯ ರಾಜಕಾರಣದಲ್ಲಿ ನಾಲ್ಕು ದಶಕಗಳಿಗೂ ಹೆಚ್ಚು ಅವಧಿಯಿಂದ ಸಕ್ರಿಯರಾಗಿರುವ ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇದರೊಂದಿಗೆ ರಾಜ್ಯ ರಾಜಕಾರಣದಲ್ಲಿ ಹೊಸದೊಂದು ಅಧ್ಯಾಯ ತೆರೆದುಕೊಳ್ಳಲಿದೆ. ತಮ್ಮ ಕಾಲೇಜು ದಿನಗಳಲ್ಲಿಯೇ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸದಸ್ಯರಾಗಿದ್ದರು. ಶಾಸನಸಭೆಯಲ್ಲಿ ಸ್ಥಾನ ಸಿಕ್ಕಲು ಯಡಿಯೂರಪ್ಪ 1983ರವರೆಗೆ ಕಾಯಬೇಕಾಯಿತು. ಅಲ್ಲಿಂದ ಮುಖ್ಯಮಂತ್ರಿ ಸ್ಥಾನದವರೆಗೆ ಅವರು ಏರಿದ್ದಾರೆ. 'ಸೈಕಲ್‌ನಲ್ಲಿ ಓಡಾಡಿ ಪಕ್ಷ ಕಟ್ಟಿದ್ದೇನೆ, ಕಾರಿನಲ್ಲಿ ಓಡಾಡಲು ಸಂಪನ್ಮೂಲ ಇರಲಿಲ್ಲ' ಎಂದು ಯಡಿಯೂರಪ್ಪ ಹಲವು ಬಾರಿ ಹೇಳಿದ್ದಾರೆ. ಅದರಲ್ಲಿ ಉತ್ಪ್ರೇಕ್ಷೆ ಏನಿಲ್ಲ. ಬಿ.ಬಿ.ಶಿವಪ್ಪ, ಎ.ಕೆ.ಸುಬ್ಬಯ್ಯ, ವಿ.ಎಸ್.ಆಚಾರ್ಯ ಮತ್ತು ಕೆಲವರಷ್ಟೇ ಆಗ ಬಿಜೆಪಿಯ ನಾಯಕರೂ ಆಗಿದ್ದರು ಕಾರ್ಯಕರ್ತರೂ ಆಗಿದ್ದರು. ಯಡಿಯೂರಪ್ಪನವರು ಕರ್ನಾಟಕದಲ್ಲಿ ಬಿಜೆಪಿಯನ್ನು ಶೂನ್ಯದಿಂದ ಕಟ್ಟಿದವರು. ಬಿಜೆಪಿಗೆ ದಕ್ಷಿಣ ಭಾರತದ ಹೆಬ್ಬಾಗಿಲಾಗಿ ಕರ್ನಾಟಕವನ್ನು ತೆರೆದು ಕೊಟ್ಟವರೂ ಅವರೇ. ಭ್ರಷ್ಟಾಚಾರದ ಆರೋಪ ಹೊತ್ತು ಜೈಲಿಗೆ ಹೋಗಿದ್ದ ಯಡಿಯೂರಪ್ಪ ಅವರನ್ನು ಪಕ್ಷವು ಕಡೆಗಣಿಸಿದಾಗ ಕೆರಳಿ, ಕರ್ನಾಟಕ ಜನತಾ ಪಕ್ಷ (ಕೆಜೆಪಿ) ಕಟ್ಟಿ, ವಿಧಾನಸಭೆಯಲ್ಲಿ ಬಿಜೆಪಿ 40 ಸ್ಥಾನಗಳಿಗೆ ಕುಸಿಯುವಂತೆ ಮಾಡಿದವರಲ್ಲಿ ಯಡಿಯೂರಪ್ಪ ಪ್ರಮುಖರು. ಆ ಮೂಲಕ, ಬಿಜೆಪಿಗೆ ತಾವು ಎಷ್ಟರಮಟ್ಟಿಗೆ ಅನಿವಾರ್ಯ ಎಂಬುದನ್ನು ವರಿಷ್ಠರಿಗೆ ಮನವರಿಕೆ ಮಾಡಿಕೊಟ್ಟಿದ್ದರು. ಆಗ ಅವರು ತೋರಿದ್ದ 'ಬಲ'ವೇ ಈಗ, ಅವರನ್ನು ಅಧಿಕಾರದಿಂದ ಕೆಳಕ್ಕೆ ಇಳಿಸಲು ಬಿಜೆಪಿ ಇಷ್ಟೊಂದು ತಿಣುಕಾಡಲು ಕಾರಣ ಎಂಬುದನ್ನು ಸಾರಾಸಗಟಾಗಿ ಅಲ್ಲಗಳೆಯುವುದಕ್ಕೆ ಆಗದು. ಹೋರಾಟದ ರಾಜಕಾರಣದ ಮೂಲಕ ಜನರ ನಡುವೆ ನಾಯಕನಾಗಿ ಬೆಳೆದವರು ಯಡಿಯೂರಪ್ಪ. ಆದರೆ, ಅಧಿಕಾರಕ್ಕೆ ಏರುವುದಕ್ಕಾಗಿ ಶಾಸಕರ ಪಕ್ಷಾಂತರದಂತಹ ಕಾರ್ಯತಂತ್ರವನ್ನು ಅವರು ಹೆಣೆದದ್ದು ಅಳಿಸಲಾಗದ ಕಪ್ಪುಚುಕ್ಕೆಯಾಗಿ ಉಳಿಯಲಿದೆ. 2008ರಲ್ಲಿ ಅಧಿಕಾರಕ್ಕೆ ಏರಲು 'ಆಪರೇಷನ್ ಕಮಲ' ಎಂಬ ಈ ಕಾರ್ಯತಂತ್ರದ ಮೊರೆ ಹೋದರು; ಎರಡು ವರ್ಷಗಳ ಹಿಂದೆ ಅವರು ಅಧಿಕಾರಕ್ಕೆ ಏರುವುದಕ್ಕೆ ನೆರವಾಗಿದ್ದು ಅದೇ ಕಾರ್ಯತಂತ್ರ. ವ್ಯಾಪಕ ಟೀಕೆಗೆ ಒಳಗಾದ ಕಾರ್ಯ-ತಂತ್ರವನ್ನು ಬಿಜೆಪಿ ಈಗ ಎಲ್ಲೆಡೆಯೂ ಬಳಸುತ್ತಿದೆ. ಬಜೆಟ್ ಮೂಲಕವೇ ಮಠಗಳಿಗೆ ಅನುದಾನ ಒದಗಿಸುವ ಪರಿಪಾಟಕ್ಕೆ ನಾಂದಿ ಹಾಡಿದ್ದು ಕೂಡ ಅವರೇ. ಲಿಂಗಾಯತ ಸಮುದಾಯದ ಅತ್ಯಂತ ದೊಡ್ಡ ನಾಯಕ ಅವರು ಎಂಬುದರಲ್ಲಿ ಎರಡು ಮಾತಿಲ್ಲ. ಬಿಜೆಪಿಯ ಬೇರೆ ಕೆಲವು ಮುಖಂಡರಿಗೆ ಹೋಲಿಸಿದರೆ ಯಡಿಯೂರಪ್ಪ ಉದಾರವಾದಿಯಾಗಿ ಕಾಣಿಸುತ್ತಾರೆ. ರೈತಪರ ಹೋರಾಟಗಳನ್ನು ಸಂಘಟಿಸಿದ ಹೆಗ್ಗಳಿಕೆ ಅವರ ಬೆನ್ನಿಗಿದೆ.



ಕರ್ನಾಟಕದ ಬಿಜೆಪಿ ನೇತೃತ್ವದ ಸರ್ಕಾರದ ಸ್ಥಿರತೆ ಅಥವಾ ಅಸ್ಥಿರತೆಯು ಯಡಿಯೂರಪ್ಪ ಅವರ ಮನಃಸ್ಥಿತಿಯನ್ನು ಅವಲಂಬಿಸಿರುವ ಸಾಧ್ಯತೆ ದಟ್ಟವಾಗಿದೆ

ಮೇಲ್ನೋಟಕ್ಕೆ ನೋಡುವಾಗ, ಎಲ್ಲವೂ ಯಡಿಯೂರಪ್ಪ ಅವರ ಪರವಾಗಿ ಇದ್ದಂತೆಯೇ ಕಾಣಿಸುತ್ತಿತ್ತು. ಸರ್ಕಾರವು ಸುಲಲಿತವಾಗಿ ನಡೆದುಕೊಂಡು ಹೋಗುತ್ತಿತ್ತು, ಸಂಖ್ಯಾಬಲ ಅವರಿಗೆ ಅನುಕೂಲಕರವಾಗಿ ಇತ್ತು, ಅವರ ಕಾರ್ಯವೈಖರಿಯನ್ನು ವರಿಷ್ಠರು ಹೊಗಳಿದ್ದರು, ವಿರೋಧ ಪಕ್ಷಗಳು ಕೂಡ ಅವರ ಬಗ್ಗೆ ಮೃದು ಧೋರಣೆ ತಳೆದಿದ್ದವು. ಆದರೆ, ಪ್ರಧಾನಿ ನರೇಂದ್ರ ಮೋದಿ ಮತ್ತು ಯಡಿಯೂರಪ್ಪ ನಡುವಣ ಸಂಬಂಧ ಅಷ್ಟಕ್ಕಷ್ಟೇ ಎಂಬಂತೆ ಮೊದಲಿನಿಂದಲೂ ಇತ್ತು. 2011ರಲ್ಲಿ ಯಡಿಯೂರಪ್ಪ ಅವರು ಅಧಿಕಾರ ಬಿಡಬೇಕಾಗಿ ಬಂದ ಸ್ಥಿತಿಗೂ ಈಗಿನ ಸ್ಥಿತಿಗೂ ಹೆಚ್ಚಿನ ವ್ಯತ್ಯಾಸವೇನೂ ಕಾಣಿಸುತ್ತಿಲ್ಲ. ಭ್ರಷ್ಟಾಚಾರ ಆರೋಪ ಮತ್ತು ಸ್ವಜನಪಕ್ಷಪಾತವು ಆಗ ಅವರು ಅಧಿಕಾರದಿಂದ ಕೆಳಗೆ ಇಳಿಯಲು ಕಾರಣವಾಗಿದ್ದವು. ಮಗ ಬಿ.ವೈ.ವಿಜಯೇಂದ್ರ ಮತ್ತು ಕುಟುಂಬದ ಸದಸ್ಯರು ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಮತ್ತು ಭಾರಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂದು ಬಿಜೆಪಿಯ ಹಿರಿಯ ಮುಖಂಡ ಬಸನಗೌಡ ಪಾಟೀಲ ಯತ್ನಾಳ ಅಂಥವರೇ ಈಗ ಆರೋಪ ಮಾಡಿದ್ದಾರೆ. ಆಳ್ವಿಕೆಯ ಶಿಷ್ಟಾಚಾರಗಳನ್ನು ಮುಖ್ಯಮಂತ್ರಿ ಪಾಲಿಸುತ್ತಿಲ್ಲ; ಅಭಿವೃದ್ಧಿ ಕೆಲಸಗಳಿಗಾಗಿ ಅನುದಾನ ಬಿಡುಗಡೆಯು ಬೇಕಾಬಿಟ್ಟಿ ನಡೆಯುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ರಾಜ್ಯಪಾಲರಿಗೆ ದೂರು ನೀಡುವವರೆಗೆ ಪರಿಸ್ಥಿತಿ ಹದಗೆಟ್ಟಿತ್ತು.

ಮುಖ್ಯಮಂತ್ರಿಯಾಗಿದ್ದ ಅವಧಿಯು ಯಡಿಯೂರಪ್ಪ ಅವರಿಗೆ ಹೂವಿನ ಹಾಸಿಗೆಯೇನೂ ಆಗಿರಲಿಲ್ಲ. 2008ರಿಂದ 2011ರ ನಡುವಣ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಅವರನ್ನು 'ಗಣಿ ಮಾಫಿಯಾ' ಇನ್ನಿಲ್ಲದಂತೆ ಕಾಡಿತ್ತು. ಮುಖ್ಯಮಂತ್ರಿ ಹುದ್ದೆಗೆ ಏರಲು ಬೇಕಾಗಿದ್ದ 'ಸಂಪನ್ಮೂಲ' ಒದಗಿಸಿದ್ದ ಗುಂಪೇ ಅವರು ಕೆಳಕ್ಕೆ ಇಳಿಯುವುದಕ್ಕೂ ಕಾರಣ ಆಗಿತ್ತು. ಈ ಬಾರಿಯೂ ಅದೇ ಪರಿಸ್ಥಿತಿಯನ್ನು ಯಡಿಯೂರಪ್ಪ ಎದುರಿಸಿದ್ದಾರೆ. ಪಕ್ಷದ ಹಿರಿಯ ಮುಖಂಡರೇ ಮುಖ್ಯಮಂತ್ರಿ ವಿರುದ್ಧ ದಿನಕ್ಕೊಂದು ಗಂಭೀರ ಆರೋಪ ಮಾಡುತ್ತಿದ್ದರೆ ವರಿಷ್ಠರು ಯಡಿಯೂರಪ್ಪ ನೆರವಿಗೆ ಬರಲಿಲ್ಲ. ವರಿಷ್ಠರ ಒತ್ತಾಸೆಯಂತೆಯೇ ಇವೆಲ್ಲ ನಡೆಯುತ್ತಿವೆ ಎಂದು ಭಾಸವಾಗಲು ಇದು ಕೂಡ ಒಂದು ಕಾರಣ. ಯಡಿಯೂರಪ್ಪ ಅವರು ಸೋಮವಾರ ಮಾಡಿದ 'ವಿದಾಯ ಭಾಷಣ' ಕೂಡ ವರಿಷ್ಠರ ಬಗ್ಗೆ ಇದ್ದ ಅಸಮಾಧಾನವನ್ನು ಧ್ವನಿಸಿದೆ. ಯಡಿಯೂರಪ್ಪ ಅವರ ಈ ಅವಧಿಯ ಬಹುಪಾಲು ಸಮಯವು ಕೋವಿಡ್-19 ಸಾಂಕ್ರಾಮಿಕ ನಿರ್ವಹಣೆಗೇ ವ್ಯಯವಾಗಿದೆ. ಲಾಕ್‌ಡೌನ್‌ನಿಂದಾಗಿ ವರಮಾನಕ್ಕೆ ಬಿದ್ದ ಏಟು ಅವರ ಕೈಕಟ್ಟಿ ಹಾಕಿದ್ದು ಕೂಡ ಹೌದು. ಅದೇನೇ ಇರಲಿ, ಹೃದಯವಂತ ರಾಜಕಾರಣಿ ಎಂಬ ಹೆಸರಿಗೆ ಹತ್ತಿರವಾಗಿರುವಂತೆ ಅವರು ನಡೆದುಕೊಂಡಿದ್ದಾರೆ. ತಮ್ಮ ಪ್ರತಿಸ್ಪರ್ಧಿಗಳನ್ನೂ ಸೇರಿಸಿ ಯಾರೊಬ್ಬರ ಬಗ್ಗೆಯೂ ಅವರಲ್ಲಿ ಸೇಡಿನ ಭಾವನೆ ಕಾಣಿಸಿಲ್ಲ. ಸುಮ್ಮನೆ ವಿರಮಿಸುವ ಜಾಯಮಾನ ಯಡಿಯೂರಪ್ಪ ಅವರದ್ದಲ್ಲ. ಪಕ್ಷಕ್ಕಾಗಿ ಇನ್ನೂ ಹಲವು ವರ್ಷ ಕೆಲಸ ಮಾಡುವ ಶಕ್ತಿ ಇದೆ ಎಂದೂ ಅವರು ಹೇಳಿದ್ದಾರೆ. ಹಾಗಾಗಿ, ಕರ್ನಾಟಕದ ಬಿಜೆಪಿ ನೇತೃತ್ವದ ಸರ್ಕಾರದ ಸ್ಥಿರತೆ ಅಥವಾ ಅಸ್ಥಿರತೆಯು ಯಡಿಯೂರಪ್ಪ ಅವರ ಮನಃಸ್ಥಿತಿಯನ್ನು ಅವಲಂಬಿಸಿರುವ ಸಾಧ್ಯತೆ ದಟ್ಟವಾಗಿದೆ.

ದಿನದ ಟ್ವೀಟ್



ಹಳಿ ತಪ್ಪಿದ ಚರ್ಚೆ?

ಕರ್ನಾಟಕದ ದುಃಸ್ಥಿತಿ ಹೇಗಿದೆ ನೋಡಿ. ನಮ್ಮ ಚರ್ಚೆಗಳು, ಯಾವ ಜಾತಿಯವರನ್ನು ದೆಹಲಿಯ ಹೈಕಮಾಂಡ್ ಮುಖ್ಯಮಂತ್ರಿಯನ್ನಾಗಿ ಮಾಡುತ್ತದೆ ಎನ್ನುವುದರ ಸುತ್ತ ಇವೆ. ಆದ್ರೆ ಕರ್ನಾಟಕದ ಮುಖ್ಯಮಂತ್ರಿಯನ್ನು ಕರ್ನಾಟಕಕ್ಕೆ ಸಂಬಂಧವಿಲ್ಲದ ದೆಹಲಿಯ ಹೈಕಮಾಂಡ್ ಯಾಕೆ ನಿರ್ಧಾರ ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆಯಾಗಬೇಕಿತ್ತಲ್ಲವೇ?

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

ಕಿಡಿನುಡಿ

ಬಿಜೆಪಿ ಹೈಕಮಾಂಡ್ ತಪ್ಪು ನಿರ್ಧಾರ ತೆಗೆದುಕೊಂಡಿದೆ. ಯಡಿಯೂರಪ್ಪ ಅವರನ್ನು ಬ್ಲ್ಯಾಕ್‌ಮೇಲ್ ಮಾಡಲಾಗಿದೆ. ಉಳಿದ ಅವಧಿಗೆ ಅವರನ್ನೇ ಮುಖ್ಯಮಂತ್ರಿಯಾಗಿ ಮುಂದುವರಿಸದಿದ್ದರೆ ಅವರ ಕಣ್ಣೀರಲ್ಲಿ ಬಿಜೆಪಿ ತೇಲಿ ಹೋಗಲಿದೆ. ಮಠಾಧೀಶರು ಚರ್ಚಿಸಿ ನಿರ್ಧಾರಕ್ಕೆ ಬಂದಿದ್ದು, ಅವರ ಕಣ್ಣೀರನ್ನು ಸವಾಲಾಗಿ ಸ್ವೀಕರಿಸಿದ್ದೇವೆ. ಅದು ಇಡೀ ಕರುನಾಡಿನ ಕಣ್ಣೀರು. ಮುಂದಿನ ದಿನಗಳಲ್ಲಿ ನಾವು ಬಿಜೆಪಿಗೆ ಕಣ್ಣೀರು ಹಾಕಿಸುತ್ತೇವೆ.



ದಿಂಗಾಲೇಶ್ವರ ಸ್ವಾಮೀಜಿ, ಬಾಲೆಹೊಸೂರು ಮಠ

25 ವರ್ಷಗಳ ಹಿಂದೆ

ಶನಿವಾರ, 27-7-1996

• 'ಕನ್ನಡ ಚಲನಚಿತ್ರ ಅಕಾಡೆಮಿ ರಚನೆ'

ಬೆಂಗಳೂರು, ಜುಲೈ 26– ಕನ್ನಡ ಚಲನ ಚಿತ್ರೋದ್ಯಮದ ಸಮಗ್ರ ಬೆಳವಣಿಗೆಗಾಗಿ ರಾಜ್ಯ ಸರ್ಕಾರ 'ಕನ್ನಡ ಚಲನಚಿತ್ರ ಅಕಾಡೆಮಿ' ರಚಿಸುವುದೆಂದು ಕಾನೂನು ಸಚಿವ ಎಂ.ಸಿ. ನಾಣಯ್ಯ ಇಂದು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ಕನ್ನಡ ಚಲನಚಿತ್ರಗಳಿಗೆ ಸಬ್ಸಿಡಿ ಕೊಡುವುದು 615 ಲಕ್ಷ ರೂಪಾಯಿಗಳು ಬಾಕಿ ಇದ್ದು, ಈ ವಾರ 1 ಕೋಟಿ, 3 ತಿಂಗಳಲ್ಲಿ ಮತ್ತೊಂದು ಕೋಟಿ ಬಿಡುಗಡೆ ಮಾಡಲಾಗುವುದು. ಕನ್ನಡ ಚಲನಚಿತ್ರ ರಂಗದ ಅಭಿವೃದ್ಧಿ ಬಗ್ಗೆ ಸರ್ಕಾರವೇ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಅಲ್ಲದೆ ಇದು ಸರ್ಕಾರದ ಜವಾಬ್ದಾರಿಯೂ ಅಲ್ಲ, ಆದ್ಯತೆಯ ವಿಷಯವೂ ಅಲ್ಲ. ಆದ್ದರಿಂದ ಈ ಉದ್ಯಮದಲ್ಲಿ ಇರುವವರು ಚಿತ್ರೋದ್ಯಮದ ಪೂರಕ ಸೌಲಭ್ಯ ಹೆಚ್ಚಿಸುವ ಕಡೆಗೆ ಗಮನ ಕೊಡಬೇಕು ಎಂದರು.

'ಇನ್ನು ಮೇಲೆ ತಯಾರಾದ ಚಿತ್ರಗಳಿಗೆಲ್ಲಾ ಸಬ್ಸಿಡಿ ಕೊಡುವುದಿಲ್ಲ. ಗುಣಮಟ್ಟ ಆಧರಿಸಿ ಕೊಡಲಾಗುವುದು' ಎಂದು ಸ್ಪಷ್ಟಪಡಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 27-7-1971

• ಚಂದ್ರಗ್ರಹದತ್ತ ಐದನೇ ಬಾರಿಗೆ ಮಾನವಯಾತ್ರೆ: ಅಪೋಲೊ– 15 ಕಕ್ಷೆಗೆ

ಹ್ಯೂಸ್ಟನ್, ಜುಲೈ 26– ಚಂದ್ರಗ್ರಹಕ್ಕೆ ತನ್ನ ನಾಲ್ಕು ದಿನಗಳ ಯಾನ ಮಾಡುವುದರ ಸಿದ್ಧತೆಯಾಗಿ ಅಮೆರಿಕದ ಅಂತರಿಕ್ಷ ನೌಕೆ 'ಅಪೋಲೊ–15' ಇಂದು ಭೂಕಕ್ಷೆಯನ್ನು ಸೇರಿತು.

10 ಲಕ್ಷ ಮಂದಿ ವೀಕ್ಷಣೆ: ಅಂತರಿಕ್ಷ ನೌಕೆ ಅಪೋಲೊ–15 ಅನ್ನು ಹೊತ್ತಿರುವ ಮೂರು ಹಂತದ ರಾಕೆಟ್ ಅನ್ನು ಪ್ರಯೋಗ ಪೀಠದಿಂದ ಹಾರಿಸಿದ್ದನ್ನು ನೋಡಲು ರಸ್ತೆಗಳಲ್ಲಿ ಹಾಗೂ ಸಮುದ್ರ ತೀರಗಳಲ್ಲಿ 10 ಲಕ್ಷಕ್ಕೂ ಹೆಚ್ಚು ಮಂದಿ ಕಿಕ್ಕಿರಿದು ನಿಂತಿದ್ದರು.

ಬದಲಾವಣೆಯೊಂದಿಗೆ ಬಿಜೆಪಿ ನಾಯಕತ್ವ ಹೇಗೆ ನಿರಂತರತೆ ಕಾಯ್ದುಕೊಳ್ಳಬಹುದು ಎಂಬುದು ಆಸಕ್ತಿದಾಯಕ

ನಾಯಕತ್ವ ಬದಲಾವಣೆ ಸೂಚಿಸುವುದೇನು?



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಅಂತೂ ಕಡೆಗೆ, ನಾಯಕತ್ವ ಬದಲಾವಣೆಯನ್ನು ಕರ್ನಾಟಕ ಕಾಣುತ್ತಿದೆ. ಕರ್ನಾಟಕದಲ್ಲಿ ಹೊಸ ಮುಖ್ಯಮಂತ್ರಿಯೊಬ್ಬರು ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂಬುದು ನಮಗೆ ಗೊತ್ತು. ಆದರೆ ಈಗಲೂ ಆ ಮುಖ್ಯಮಂತ್ರಿ ಯಾರೆಂಬುದು ನಮಗೆ ಖಚಿತವಿಲ್ಲ! ಹೀಗಾಗಿ, ಈ ಸಂಕ್ರಮಣ ಕಾಲಘಟ್ಟದ ಮಧ್ಯದಲ್ಲಿದ್ದೇವೆ. ನಿರ್ಗಮನದ ಬಗ್ಗೆ ಖಚಿತತೆ ಇದೆ. ಆದರೆ ಹೊಸಬರ ಆಗಮನದ ಬಗ್ಗೆ ಅನಿಶ್ಚಯವಿದೆ!

ಬಿ.ಎಸ್. ಯಡಿಯೂರಪ್ಪ ಅವರು ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗಿ ಈಗ ಅಧಿಕಾರದ ಗದ್ದುಗೆಯಿಂದ ಕೆಳಗಿಳಿಯುತ್ತಿರುವ ಈ ಸಂದರ್ಭದಲ್ಲಿ ಹಲವು ವಿಚಾರಗಳು ಮುನ್ನೆಲೆಗೆ ಬರುತ್ತವೆ. ಅವರು ಮುಖ್ಯಮಂತ್ರಿಯಾಗಿದ್ದ ಈ ನಾಲ್ಕೂ ಅವಧಿಗಳು ಏರಿಳಿತಗಳಿಂದ ಕೂಡಿದ್ದವು. ಅದರಲ್ಲೂ ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾದ ಸಂದರ್ಭವು ವಿಶೇಷ ಘಟನೆಗಳಿಂದ ಕೂಡಿತ್ತು. ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳ ಆಯ್ದ ಶಾಸಕರ ಗುಂಪೊಂದರ ಬಂಡಾಯದಿಂದಾಗಿ ಕುಮಾರಸ್ವಾಮಿ ನೇತೃತ್ವದ ಸರ್ಕಾರ ಕುಸಿದು ಯಡಿಯೂರಪ್ಪನವರು ಮುಖ್ಯಮಂತ್ರಿಯಾದರು.

ಅಧಿಕಾರದ ಗದ್ದುಗೆ ಏರಿದಾಗ ಯಡಿಯೂರಪ್ಪ ಅವರ ವಯಸ್ಸು, ಸಾರ್ವಜನಿಕ ಅಧಿಕಾರ ಸ್ಥಾನಗಳನ್ನು ಹೊಂದಲು ಅವರ ಪಕ್ಷವು ನಿಗದಿ ಮಾಡಿದ್ದಂತಹ ವಯಸ್ಸನ್ನು ಮೀರಿತ್ತು. ಪಕ್ಷದಲ್ಲಿನ ಹಳೆಯ ಕಾಲದ ನಿಷ್ಠರು ಹಾಗೂ ಹೊಸದಾಗಿ ಸೇರ್ಪಡೆಯಾದವರ ನಡುವೆ ಅವರದು ಕಠಿಣ ಸಮತೋಲನದ ನಡಿಗೆಯಾಗಿತ್ತು. ಈ ಹಿಂದಿನಂತೆ, ಸರ್ಕಾರವನ್ನು ನಡೆಸುವಲ್ಲಿ ಅವರದೇ ಮಾರ್ಗ ಯಡಿಯೂರಪ್ಪ ಅವರಿಗೆ ಇದ್ದಂತಿರಲಿಲ್ಲ. ಅವರ ಜೊತೆಗೆ ಇದ್ದ ಉಪಮುಖ್ಯಮಂತ್ರಿಗಳ ದಂಡು, ಯಡಿಯೂರಪ್ಪ ಅವರದೇ ಆಯ್ಕೆ ಎಂದೇನಾಗಿರಲಿಲ್ಲ. ಪಕ್ಷದ ನಾಯಕತ್ವದ ನಿರ್ದೇಶನಗಳ ಆಧಾರದಲ್ಲಿ ಸಚಿವ ಖಾತೆಗಳನ್ನು ಅವರು ಹಂಚಿದ್ದರು. ಹಲವು ಹಂತಗಳಲ್ಲಿ, ಅವರು ಪಕ್ಷದ ಕೇಂದ್ರ ನಾಯಕತ್ವದ ನಿರ್ದೇಶನಗಳಿಗೆ ಮಣಿದು ಅವುಗಳನ್ನು ಅನುಷ್ಠಾನಕ್ಕೆ ತರಬೇಕಾಗುತ್ತಿತ್ತು. ಈ ಅವಧಿಯಲ್ಲಿ, ಈ ಹಿಂದೆ ಅವರ ಟ್ರೇಡ್ ಮಾರ್ಕ್ ಎನಿಸಿದ್ದ ಎಂದಿನ ಭಾವೋದ್ರೇಕ, ಹುರುಪು ಹಾಗೂ ಉತ್ಸಾಹಗಳಿಲ್ಲದೆ ಸರ್ಕಾರವನ್ನು ಅವರು ಮುನ್ನಡೆಸು-ತ್ತಿದ್ದದ್ದು ಕಂಡುಬಂದಿತ್ತು. ಇನ್ನೇನು ಅಧಿಕಾರದಿಂದ ನಿರ್ಗಮಿಸುವುದು ಅವಶ್ಯಕವಾಗುತ್ತದೆ ಎಂಬುದು ಮುಖ್ಯಮಂತ್ರಿಯವರಿಗೆ ಗೊತ್ತಿದೆಯೇನೋ ಎಂಬಂತೆ ಭಾಸವಾಗುವಂತಿತ್ತು.

ಆದರೆ, ಈಗಿನ ಈ ಬದಲಾವಣೆ ತನ್ನದೇ ವಿಶಿಷ್ಟ ಅಂಶಗಳನ್ನು ಒಳಗೊಂಡಿದೆ. ಈ ಹಿಂದೆ ಬಿಜೆಪಿಯಲ್ಲಿ ಕಂಡುಬರುತ್ತಿದ್ದಂತಹ ರೀತಿಯ ಬದಲಾವಣೆ ಅಲ್ಲ ಇದು. ಇದು, ಪಕ್ಷದ ಕೇಂದ್ರೀಯ ನಾಯಕತ್ವದ ಸ್ಪಷ್ಟ ನಿರ್ದೇಶನದಲ್ಲಿ ಆಗುತ್ತಿರುವಂತಹ ಅಧಿಕಾರ ಹಸ್ತಾಂತರ. ಹೀಗಿದ್ದೂ, ಈ ಅಧಿಕಾರ ಹಸ್ತಾಂತರದಲ್ಲೂ ನಿರ್ದಿಷ್ಟವಾಗಿ ಕರ್ನಾಟಕದ ವಿಶಿಷ್ಟ ಗುಣವಿದೆ. ವಿಂಧ್ಯದ ದಕ್ಷಿಣದಲ್ಲಿ ಬಿಜೆಪಿಗಿರುವ ಏಕೈಕ ಕೋಟೆ ಎಂದರೆ ಕರ್ನಾಟಕ. ಈ ಹಿಂದೆ, ಯಡಿಯೂರಪ್ಪ ಅವರನ್ನು ನಯವಾಗಿ ಮುಖ್ಯಮಂತ್ರಿ ಸ್ಥಾನದಿಂದ ಹೊರಗಿಡಲಾಗಿತ್ತು ಹಾಗೂ ಇದು 2012ರಲ್ಲಿ ಪಕ್ಷ ಒಡೆಯಲು ಕಾರಣವಾಗಿತ್ತು. ಆ 2012, ಈಗಿನ 2021 ಅಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕು.

ಕರ್ನಾಟಕದಲ್ಲಿ ಬಿಜೆಪಿಯ ಹುಟ್ಟು ಹಾಗೂ ಬೆಳ-ವಣಿಗೆಯಲ್ಲಿ ಯಡಿಯೂರಪ್ಪ ಅವರದು ಪ್ರಮುಖ ಪಾತ್ರ. ಅವರು, ಲಿಂಗಾಯತ ಸಮುದಾಯದ ಪ್ರಭಾವಿ ನಾಯಕರೂ ಹೌದು. ಈ ಎಲ್ಲಾ ಅಂಶಗಳು, ಪಕ್ಷಕ್ಕೆ ಮತ್ತೊಂದು ರೀತಿಯಲ್ಲಿ ಯಾವುದೇ ಹಾನಿ ಆಗದಂತೆ ಈ ಅಧಿಕಾರ ಹಸ್ತಾಂತರ ಪ್ರಕ್ರಿಯೆಯನ್ನು ಅಳೆದೂ ಸುರಿದು ಮಾಡಬೇಕಾದುದರ ಅಗತ್ಯಕ್ಕೆ ಕಾರಣವಾಗಿವೆ. ಹೀಗಾಗಿ, ಸುದೀರ್ಘ ಕಾಲದ ಕಾರ್ಯತಂತ್ರ ಹಾಗೂ ಅತ್ಯಂತ ಕಠಿಣ ಸಂಧಾನ ಪ್ರಕ್ರಿಯೆಗಳ ಸಂಕಟಗಳನ್ನೂ ಇದು ಒಳಗೊಂಡಿದೆ. ಅಂತಿಮವಾದ ಅಧಿಕಾರ ಹಸ್ತಾಂತರದ ಕಡೆಯ ಹೆಜ್ಜೆಗಳನ್ನು ದಾಟಲಾಗಿದೆಯೇ ಎಂಬುದು ಇನ್ನೂ ಖಚಿತವಿಲ್ಲ. ಮುಂದಿನ ಕೆಲ ದಿನಗಳು ಇದಕ್ಕೆ ಸೂಚಕವಾಗಲಿವೆ.

ಕಳೆದ ಕೆಲವು ದಿನಗಳಿಂದ ಯಡಿಯೂರಪ್ಪ ಅವರ ಮಾತುಗಳು ಹಾಗೂ ತಮ್ಮ ಸರ್ಕಾರವು ಎರಡು ವರ್ಷ ಪೂರೈಸಿದ ಸಂದರ್ಭದಲ್ಲಿ ತಮ್ಮ 'ವಿದಾಯ ಭಾಷಣ'ದಲ್ಲಿ ಅವರು ಆಡಿದ ಮಾತುಗಳು ಅವರ ನಿಲುವಿಗೆ ಸಾಕಷ್ಟು ಸೂಚನೆಗಳನ್ನು ಒದಗಿಸಿವೆ. ಪಕ್ಷದ ಹೈಕಮಾಂಡ್ ನಿರ್ದೇಶಿಸಿದಾಗ ತಾವು ಅಧಿಕಾರದಿಂದ ಕೆಳಗಿಳಿಯುವುದಾಗಿ ಅವರು ಸ್ಪಷ್ಟಪಡಿಸಿದ್ದರು. ರಾಜ್ಯದ ಹೊರಗೆ ಯಾವುದೇ ಆಲಂಕಾರಿಕ ಹುದ್ದೆಯನ್ನು ಒಪ್ಪಿ-ಕೊಳ್ಳುವುದಕ್ಕೂ ಅವರು ಸಿದ್ಧರಿಲ್ಲವೆಂಬುದು ಸ್ಪಷ್ಟ. ಪಕ್ಷಕ್ಕಾಗಿ ದುಡಿಯಲು ಹಾಗೂ ಮುಂದಿನ ಚುನಾವಣೆಗಳಲ್ಲಿ ಪಕ್ಷದ ಗೆಲುವಿಗೆ ಶ್ರಮಿಸುವುದಕ್ಕೆ ತಾವು ಬದ್ಧ ಎಂದು ಅವರು ಹೇಳಿದ್ದಾರೆ. ಪಕ್ಷದ ಹೈಕಮಾಂಡ್ ಕುರಿತಾಗಿ ತಮ್ಮ ವಿಶ್ವಾಸವನ್ನೂ ಅವರು ಪುನರುಚ್ಚರಿಸಿ-ದ್ದಾರೆ. ಅವರು ಅಧಿಕಾರ ತ್ಯಾಗ ಮಾತ್ರ ಮಾಡುತ್ತಿದ್ದಾರೆ, ಸಕ್ರಿಯ ರಾಜಕಾರಣದಿಂದ ದೂರವಾಗುತ್ತಿಲ್ಲ ಎಂಬುದು ಸ್ಪಷ್ಟ.



ಕರ್ನಾಟಕ ರಾಜಕಾರಣದಲ್ಲಿ ಜಾತಿಯ ಅಂಶದ ಬಗ್ಗೆ ಸಾಕಷ್ಟು ಮಾತುಗಳು ಬಂದಿವೆ. 1990ರ ದಶಕದಿಂದ ಹಲವು ಕಾರಣಗಳಿಗಾಗಿ ಲಿಂಗಾಯತ ಮತಗಳು ಬಿಜೆಪಿಯತ್ತ ಚಲಿಸಿದ್ದವು ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ರಾಮಕೃಷ್ಣ ಹೆಗಡೆ ಅವರ 'ಲೋಕಶಕ್ತಿ' ಜೊತೆಗಿನ ಮೈತ್ರಿಯು, ಈ ಸಮುದಾಯದ ವಿಶ್ವಾಸವನ್ನು ಗಳಿಸಿಕೊಳ್ಳುವಲ್ಲಿ ಅದರಲ್ಲೂ ಉತ್ತರ ಕರ್ನಾಟಕದ ಭಾಗದಲ್ಲಿ ಮಹತ್ವದ ಪಾತ್ರ ವಹಿಸಿತು. ನಾಯಕತ್ವದ ವಿಚಾರವು ಮಹತ್ವದ ಅಂಶವಾಗಿದ್ದರೂ, ಬೆಂಬಲ ಗಳಿಸಿಕೊಳ್ಳುವಲ್ಲಿ ಬಿಜೆಪಿಯ ಮೂಲ ಸಿದ್ಧಾಂತಗಳ ಪರಿಣಾಮವನ್ನೂ ಗಮನಕ್ಕೆ ತೆಗೆದುಕೊಳ್ಳದೇ ಇರುವುದು ಸಾಧ್ಯವಿಲ್ಲ. ಹೀಗಾಗಿ, ಲಿಂಗಾಯತ ಸಮುದಾಯದ ಪ್ರಮುಖ ನಾಯಕರೊಬ್ಬರು ಅಧಿಕಾರದಿಂದ ನಿರ್ಗಮಿ-ಸುತ್ತಿದ್ದರೂ, ಇದರಿಂದ ಸಮುದಾಯವು ಬಿಜೆಪಿಯಿಂದ ಸಹಜವಾಗಿ ದೂರವಾಗುತ್ತದೆ ಎಂದೇನೂ ಇಲ್ಲ. ಲಿಂಗಾಯತ ಸಮುದಾಯದ ಬೆಂಬಲವು ಬರೀ ನಾಯಕತ್ವದ ಅಂಶವನ್ನಷ್ಟೇ ಆಧರಿಸಿಲ್ಲ.

ಯಡಿಯೂರಪ್ಪ ಅವರ ಉತ್ತರಾಧಿಕಾರಿಯ ಬಗ್ಗೆ ಬಿಜೆಪಿ ಕೈಗೊಳ್ಳುವ ನಿರ್ಧಾರದ ಬಗ್ಗೆ ಉಸಿರು ಬಿಗಿಹಿಡಿದು ಕಾಯುತ್ತಿರುವಾಗಲೇ ಉತ್ತರಾಧಿಕಾರಿಯ ಬಗ್ಗೆ ಕೆಲವು ಅಂಶಗಳು ನಿಚ್ಚಳವಾಗುತ್ತಿವೆ. ಈ ಉತ್ತರಾಧಿಕಾರಿಯು, ಪಕ್ಷದ ಹೈಕಮಾಂಡ್ ಸ್ವತಃ ಜತನದಿಂದ ಮಾಡಿದ ಆಯ್ಕೆಯಾಗಿರುತ್ತದೆ. ಇಂತಹ ಪ್ರಕಟಣೆಗಳನ್ನು ಮಾಡುವಾಗ ಒಂದಿಷ್ಟು ಅಚ್ಚರಿಗಳನ್ನು ಹೊರಹಾಕುವಲ್ಲಿಯೂ ಬಿಜೆಪಿ ನಾಯಕತ್ವ ಹೆಸರುವಾಸಿ. ಕರ್ನಾಟಕದ ಹೊಸ ಮುಖ್ಯಮಂತ್ರಿ ಯಾರೇ ಆಗಿರಲಿ ಅವರು ಪಕ್ಷದ ಹೈಕಮಾಂಡ್‌ನ ಸದ್ಭಾವನೆ ಹಾಗೂ ವಿಶ್ವಾಸವನ್ನು ಹೊಂದಿದವರಾಗಿರುತ್ತಾರೆ. ಹಿಂದಿನದರಿಂದ ಕಳಚಿ-ಕೊಳ್ಳುವುದಕ್ಕಾಗಿ ನಾಯಕತ್ವ ಬದಲಾವಣೆಯನ್ನು ಒಂದು ಅವಕಾಶವನ್ನಾಗಿ ಬಿಜೆಪಿ ಯಾವಾಗಲೂ ಬಳಕೆ ಮಾಡಿಕೊಂಡಿದೆ. ಕರ್ನಾಟಕದಲ್ಲೂ ಅದನ್ನು ಪ್ರಯತ್ನಿಸಲಾಗುತ್ತದೆಯೇ ಎಂಬ ಬಗ್ಗೆ ಖಾತರಿ ಇಲ್ಲ. ಕಳೆದ ದಶಕದಲ್ಲಿ ಪಕ್ಷಕ್ಕೆ ಸೇರ್ಪಡೆಯಾದ ಪ್ರಮುಖರ ದಂಡೇ ಬಿಜೆಪಿ ಶಾಸಕಾಂಗ ಪಕ್ಷದಲ್ಲಿ ಇರುವುದರಿಂದ, ಹಿಂದಿನದರಿಂದ ಕಳಚಿಕೊಳ್ಳುವ ಪ್ರಕ್ರಿಯೆ ಎಂದರೆ ನಿರೀಕ್ಷಿತವಲ್ಲದ ಬಿಕ್ಕಟ್ಟುಗಳಿಗೆ ದಾರಿಯಾಗದೇ ಇರುವುದು ಸಾಧ್ಯವಿಲ್ಲ.

ಬದಲಾವಣೆಯೊಂದಿಗೆ ನಿರಂತರತೆಯನ್ನು ಬಿಜೆಪಿ ನಾಯಕತ್ವ ಹೇಗೆ ಕಾಯ್ದುಕೊಳ್ಳುತ್ತದೆ ಎಂಬುದು ಆಸಕ್ತಿದಾಯಕ ಸಂಗತಿಯಾಗಲಿದೆ. ನಿರ್ಗಮಿಸುತ್ತಿ-ರುವ ಮುಖ್ಯಮಂತ್ರಿ ನಿಮ್ಮ ಸುತ್ತಲೇ ಇರುತ್ತಾರೆ ಹಾಗೂ ರಾಜಕೀಯವಾಗಿ ಸಕ್ರಿಯರಾಗಿರುತ್ತಾರೆ ಎಂಬುದನ್ನು ಈ ನಿರಂತರತೆಯು ಗಮನದಲ್ಲಿ ಇರಿಸಿಕೊಳ್ಳಬೇಕಾಗುತ್ತದೆ. ಹಾಗೆಯೇ ಹೊಸ ಮಾರ್ಗವನ್ನು ಸೃಷ್ಟಿಸಬೇಕೆನ್ನುವ ನಾಯಕತ್ವದ ಹಂಬಲವನ್ನು ಗಮನಿಸಿದಲ್ಲಿ ಬದಲಾವಣೆಯೂ ಇರಲಿದೆ. ಉದಯವಾಗಲಿರುವ ವೈರುಧ್ಯಗಳ ಜೊತೆಗೆ ಹೊಂದಿಕೊಳ್ಳುವುದು ದೊಡ್ಡ ಸವಾಲಾಗಲಿದೆ. ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳೂ ಈ ಬೆಳವಣಿಗೆಗಳನ್ನು ಹತ್ತಿರದಿಂದಲೇ ಗಮನಿಸುತ್ತಿರು-ತ್ತವೆ. ಬರಲಿರುವ ದಿನಗಳಲ್ಲಿ ರಾಜ್ಯದ ರಾಜಕೀಯವು ಆಸಕ್ತಿದಾಯಕವಾಗಲಿದೆ.

ಚುರುಮುರಿ



ಗುರಿಯ ಬೆಂಬತ್ತಿ...

• ಕೆ.ವಿ.ರಾಜಲಕ್ಷ್ಮಿ

'ಒಲಿಂಪಿಕ್ಸ್ ಆರಂಭದ ದಿನವೇ ಬೆಳ್ಳಿ ಪದಕದ ಓಂಕಾರ', ಪುಟ್ಟಿ ಕುಣಿದಾಡುತ್ತಿದ್ದಳು.

'ಅಲ್ವೇ ಮತ್ತೆ? ಅಡುಗೆಮನೆ ರುಬ್ಬುಗುಂಡು ಆಡಿಸೋಕ್ಕೂ ಸರಿ, ಆಟದಮನೇಲಿ ಆಡೋಕ್ಕೂ ಸೈ, ಹೆಣ್ಮಕ್ಳೇ ಸ್ಟ್ರಾಂಗು' ಶ್ ಶ್ ಅಂತ ಸೊಳ್ಳೆ ಬ್ಯಾಟಿನಲ್ಲಿ ಸೊಳ್ಳೆಯನ್ನು ಗುರಿಯಾಗಿಸಿ ಬೀಸುತ್ತಿದ್ದ ಅತ್ತೆಯ ಸಪೋರ್ಟು.

ಫಕ್ಕನೆ ಹೊಳೆಯಿತು 'ರಿಯೊದಲ್ಲಿ ಗಳಿಸಿದ ಬೆಳ್ಳಿ ಈ ಬಾರಿ ಚಿನ್ನವಾದರೆ ಚಂದ' ನಾನೆಂದೆ ನಮ್ಮ ಹೆಮ್ಮೆಯ ಸಿಂಧುವನ್ನು ನೆನೆದು.

ಸಾಧಾರಣವಾಗಿ ವಾಕ್ ಟೈಮ್‌ಗೆ ಬರುವ ಕಂಠಿ ಸ್ವಲ್ಪ ಬೇಗನೇ ಬಂದ- ಅಂದರೆ ಏನೋ ವಿಷಯ ಇದೆ.

'ಇವತ್ತು ಇದ್ದದ್ದು ನಾಳೆಗಿಲ್ಲ, ಎಲ್ಲಾ ಅವನ ಮಾಯೆ' ಎಂದು ಸೂರು ನೋಡಿದ.

'ನಿಜ, ಇವತ್ತಿನ ಕೊರೊನಾ ಭಯ ನಾಳೆ ಇಲ್ಲ, ಜಾಗರೂಕತೆ ಇದ್ದರೆ ಸಾಕು. ಲಸಿಕೇನೂ ಒಂದಕ್ಕೆ ಮೂರು ಬಂದಾಯ್ತು, ಯಾವುದಾದರೂ ಹಾಕ್ಕೊಬೋದು, ಮುಖ್ಯವಾಗಿ ಭರವಸೆ ಇರಬೇಕು' ಅತ್ತೆಯ ಅನುಭವದ ಮಾತು.

ಕಂಠಿ ರಿಯಾಕ್ಟ್ ಮಾಡಲಿಲ್ಲ.

'ಪೊಸಿಷನ್ನೂ ಅಷ್ಟೇ, ಇವತ್ತಿರುತ್ತೆ ನಾಳೆ ಇರೋಲ್ಲ, ಯಾರಾದರೂ ಇರಲಿ ಆಡಳಿತ ಚೆನ್ನಾಗಿರಬೇಕು ಅಷ್ಟೇ' ರಾಜಕೀಯ ಕುರ್ಚಿಯಾಟದತ್ತ ಗಮನ ಸೆಳೆದೆ.

'ಅದಲ್ಲ, ಈ ಬಾರಿ ಹೆಚ್ಚುವರಿ ತುಟ್ಟಿಭತ್ಯ ಸೇರಿ ಸಂಬಳ ಬರುತ್ತೆ ಅಂತ ಖುಷಿಯಾಗಿದ್ದೆ, ಆದರೆ ಅದಕ್ಕೂ ಬಂತು ಕೊಕ್ಕೆ'.

ಕೆಟ್ಟ ಹಿಗ್ಗು- ಒಂದೇ ಕ್ಷಣ ತೋರಿಸಿಕೊಳ್ಳದೆ 'ಯಾಕೆ? ಹೀಗೆ ಕೊಟ್ಟು ಹಾಗೆ ಫಂಡ್ ಗಿಂಡ್ ಅಂತ ವಾಪಸ್ ತೊಗೋತಿದ್ದಾರಾ?' ಎಂದೆ.

'ಅಯ್ಯೋ ಅಂತದ್ದೇನಿಲ್ಲ, ನಮ್ಮ ಒಲಿಂಪಿಕ್ಸ್ ವಿಜೇತೆ ಮೀರಾ ಕಿವಿಯೋಲೆ ಟ್ರೆಂಡ್ ಆಗ್ತಿದೆ, ತನಗೂ ಬೇಕು ಅಂತ ಶ್ರೀಮತಿಯ ಹಟ. 'ಹೊಸ ಮಾದರಿ, ಎರಡು ಮಾಡಿಸಿಕೊಂಡರೆ ಡಿಸ್ಕೌಂಟ್ ಕೊಡ್ತೀನಿ ಅಂದ್ರು ನಮ್ಮ ಜ್ಯೂವೆಲ್ಲರ್' ಕಂಠಿಯ ಹೇಳಿಕೆ ಮುಗಿಯುವಷ್ಟರಲ್ಲೇ 'ಅದಕ್ಕೇನಂತೆ, ನಮ್ಮ ಕಡೆಯಿಂದ ಇನ್ನೊಂದು ಆರ್ಡರ್ ಮಾಡಿದರೆ ಆಯ್ತು. ಇನ್ನೇನು ಶ್ರಾವಣ ಮಾಸ ಬಂತು, ಹಬ್ಬಕ್ಕೆ ಹಾಕ್ಕೊಳ್ಳೋಕೆ ಆಗುತ್ತೆ, ಅಲ್ವೇ?' ನನ್ನವಳ ನಯವಾದ ಆದೇಶ.

ಕಂಠಿಯ ಗುರಿ ಮುಟ್ಟಿತ್ತು.

ಸಂಗತ

ಜೋಕೆ... ಬೌದ್ಧಿಕ ಜಾಲಕ್ಕೆ ಬಿದ್ದೀರಿ!

ಕಳಪೆ ಗುಣಮಟ್ಟದ ಪುಸ್ತಕಗಳು ಸ್ವಚಿಂತನೆಗೆ ಹಾನಿಕಾರಕ

• ಡಾ. ಜ್ಯೋತಿ

ಪುಸ್ತಕ ಓದಿದಷ್ಟೂ ನಮ್ಮ ಜ್ಞಾನ ವೃದ್ಧಿಸುತ್ತದೆ ಎನ್ನುವುದು ಸಾಮಾನ್ಯ ಗ್ರಹಿಕೆ. ಅದರಂತೆಯೇ, ಪುಸ್ತಕಗಳ ಬೇಟೆ ಮತ್ತು ಸಂಗ್ರಹ ಕೂಡ ಹೆಚ್ಚಿನ ಬುದ್ಧಿಜೀವಿಗಳ ನೆಚ್ಚಿನ ಹವ್ಯಾಸ. ಒಬ್ಬ ವಿದ್ಯಾವಂತನ ಪುಸ್ತಕ ಸಂಗ್ರಹದ ಹುಚ್ಚು, ಅವನ ಜ್ಞಾನ ಸಂಪತ್ತಿಗಿರುವ ನಂಟು ಹಾಗೂ ಸಾಮಾನ್ಯ ಓದುವ ಪ್ರಕ್ರಿಯೆಯ ಕುರಿತಾಗಿ 19ನೇ ಶತಮಾನದ ಜರ್ಮನ್ ತತ್ವಶಾಸ್ತ್ರಜ್ಞ ಆರ್ಥರ್ ಸ್ಕೋಪೆನ್‌ಹಾವರ್ ಅವರ ನಿಲುವುಗಳಲ್ಲಿ ಸ್ವಾರಸ್ಯಕರ ಅಂಶಗಳು ನಮಗೆ ಕಾಣಸಿಗುತ್ತವೆ.


ಓದುವ ಕಾಯಕದ ಕುರಿತ ತಮ್ಮ ಅನಿಸಿಕೆಗಳನ್ನು ಸ್ಕೋಪೆನ್‌ಹಾವರ್ ಆರು ಅಂಶಗಳ ಮೂಲಕ ವಿವರಿಸುತ್ತಾರೆ. ಅವುಗಳೆಂದರೆ: ಅತಿಯಾದ ಓದು ಒಂದು ಅರ್ಥಹೀನ ಕ್ರಿಯೆ, ಓದಿನ ಜೊತೆಯಾಗಿ ನಿಖರ ಸ್ವಚಿಂತನೆ ಕೂಡ ಅಗತ್ಯ, ಓದಿಗೆ ಅತ್ಯುತ್ಕೃಷ್ಟ ಪುಸ್ತಕಗಳನ್ನಷ್ಟೇ ಆರಿಸಿಕೊಳ್ಳುವುದು ಮುಖ್ಯ, ಪೂರಕ ಪಠ್ಯಗಳ ಬದಲಾಗಿ ಮೂಲ ಪುಸ್ತಕಗಳನ್ನು ಓದುವುದು ನಿಜವಾದ ಓದು, ಶ್ರೇಷ್ಠ ಕೃತಿಗಳ ಮರುಓದು ಸ್ವಚಿಂತನೆಗೆ ಪ್ರೇರಕ ಹಾಗೂ ಕಳಪೆ ಗುಣಮಟ್ಟದ 'ಜನಪ್ರಿಯ' ಪುಸ್ತಕಗಳು ನಮ್ಮ ಆಲೋಚನೆಗಳಿಗೆ ಹಾನಿಕಾರಕ.

ಸ್ಕೋಪೆನ್‌ಹಾವರ್ ಪ್ರಕಾರ, ಅತಿಯಾದ ಓದು ನಮ್ಮ ಸ್ವಚಿಂತನ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತದೆ. ಯಾಕೆಂದರೆ, ಇನ್ನೊಬ್ಬರ ಕೃತಿಗಳನ್ನು ಓದುವಾಗ ನಮ್ಮ ಮನಸ್ಸು ಆ ಕೃತಿಕಾರನ ಯೋಚನಾಲಹರಿಯ ಹಾದಿಯಲ್ಲಿಯೇ ಸಾಗುತ್ತದೆ. ಅಲ್ಲಿ, ಚಿಂತನೆಯನ್ನು ನಮಗಾಗಿ ಮೊದಲೇ ಸಿದ್ಧಪಡಿಸಲಾಗಿರುತ್ತದೆ. ಅತಿಯಾಗಿ ಇನ್ನೊಬ್ಬರ ಗ್ರಂಥಗಳಲ್ಲಿ ಸಮಯ ಕಳೆಯುವವನು, ಸ್ವಚಿಂತನ ಸಾಮರ್ಥ್ಯವನ್ನು ಕ್ರಮೇಣವಾಗಿ ಕಳೆದುಕೊಳ್ಳುತ್ತಾನೆ ಹಾಗೂ ಅನ್ಯರ ಹೇಳಿಕೆಗಳನ್ನು ಉರು ಹೊಡೆಯುವುದನ್ನೇ ತನ್ನ ಅಸ್ಮಿತೆಯನ್ನಾಗಿಸಿಕೊಳ್ಳುತ್ತಾನೆ. ಆದುದರಿಂದ, ಓದಿನೊಂದಿಗೆ ಸಮಾನಾಂತರವಾದ ಸ್ವಚಿಂತನೆಯೂ ಮುಖ್ಯ.

ಒಂದು ಪುಸ್ತಕದಲ್ಲಿ ಪ್ರಕಟವಾಗಿರುವ ಆಲೋಚನೆ, ಮರಳಿನ ಮೇಲೆ ಮೂಡಿದ ಹೆಜ್ಜೆ ಗುರುತುಗಳಿಗೆ ಸಮಾನ. ಅಂದರೆ, ಕವಿ ಕಂಡದ್ದನ್ನು ಓದುಗ ಕೂಡ ಕಾಣಲು ಅವನ ದೃಷ್ಟಿಕೋನದ ಅಗತ್ಯವೂ ಇದೆ. ಆದ್ದರಿಂದ, ಲೇಖಕನ ಯೋಚನೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಅದನ್ನು ನಾವು ಸ್ವತಃ ಸಂಶ್ಲೇಷಿಸಿ ಜೀರ್ಣಿಸಿಕೊಳ್ಳಬೇಕಾಗುತ್ತದೆ.

ಸ್ಕೋಪೆನ್‌ಹಾವರ್ ಹೇಳುವಂತೆ, ಮಾರುಕಟ್ಟೆಯಲ್ಲಿ ಲಭ್ಯವಿರುವ ಪುಸ್ತಕಗಳಲ್ಲಿ ಹೆಚ್ಚಿನವುಗಳನ್ನು ಹಣ, ಪ್ರಸಿದ್ಧಿ, ಪ್ರಶಸ್ತಿ ಮತ್ತು ಗಮನ ಸೆಳೆಯುವ ಉದ್ದೇಶದಿಂದಷ್ಟೇ ಬರೆಯಲಾಗಿದೆ. ಆದ್ದರಿಂದ ಪುಸ್ತಕಗಳನ್ನು ಖರೀದಿಸುವಾಗ ಮತ್ತು ಓದುವಾಗ ಸೂಕ್ತ ಆಯ್ಕೆ ಬಹಳ ಮುಖ್ಯ. ಮೌಲಿಕವಾದ ಸಮಯ ಹಾಗೂ ಅನಿಶ್ಚಿತ ಜೀವನವನ್ನು ಕಳಪೆ ಪುಸ್ತಕಗಳನ್ನು ಓದುವುದರಲ್ಲಿಯೇ ಕಳೆಯಬಾರದು.

ಪ್ರಸಕ್ತ, ಪುಸ್ತಕ ವ್ಯಾಪಾರ ಕೂಡ ಒಂದು ರಾಜಕಾರಣವೇ. ಅದನ್ನು ಲೇಖಕ, ಪ್ರಕಾಶಕ ಮತ್ತು ವಿಮರ್ಶಕ ಎಲ್ಲ ಸೇರಿ ಪ್ಯಾಕೇಜ್ ಮಾಡಿ ಮಾರುಕಟ್ಟೆಗೆ ಬಿಟ್ಟಿರುತ್ತಾರೆ. ಹಾಗಾಗಿ, ಓದುಗನು ಪುಸ್ತಕಗಳನ್ನು ಆಯ್ಕೆ ಮಾಡಿಕೊಳ್ಳುವಾಗ, ಈ ಬೌದ್ಧಿಕ ಜಾಲಕ್ಕೆ ಸಿಕ್ಕಿಹಾಕಿಕೊಳ್ಳದಂತೆ ಎಚ್ಚರ ವಹಿಸುವುದು ಮುಖ್ಯ. ಹಾಗೆಯೇ, ಯಾವುದೇ ವಿಷಯವನ್ನು ಓದುವಾಗ, ಮೂಲಕೃತಿಯನ್ನು ಓದುವುದು ಬಹಳ ಮುಖ್ಯ. ಆದರೆ, ನಾವು ಸಾಮಾನ್ಯವಾಗಿ ಆ ಕೃತಿಯ ಕುರಿತಾದ ಅನ್ಯರ ಪ್ರತಿಕ್ರಿಯೆಗಳ ಮೂಲಕ ಪ್ರವೇಶಿಸುತ್ತೇವೆ. ಇದು ಪೂರ್ವಗ್ರಹಪ್ರೇರಿತ ಓದಾಗುತ್ತದೆ.



ಅದೇ ರೀತಿ, ಶ್ರೇಷ್ಠ ಪ್ರಾಚೀನ ಕೃತಿಗಳ ಮರುಓದು ಕೂಡ ಅಗತ್ಯ. ಅವುಗಳ ಮೇಲೆ ಒಮ್ಮೆ ಕಣ್ಣಾಡಿಸಿದರೆ ಸಾಕಾಗುವುದಿಲ್ಲ. ಬದಲಾಗಿ, ಅವುಗಳನ್ನು ಏಕಾಗ್ರತೆ ಮತ್ತು ಕಾಳಜಿಯಿಂದ ಪುನರಾವರ್ತನೆ ಮಾಡಿದಷ್ಟೂ ಹೊಸ ಹೊಳಹುಗಳು, ವ್ಯಾಖ್ಯಾನಗಳು ನಮಗೆ ಸಿಗುತ್ತವೆ.

ಕಳಪೆ ಗುಣಮಟ್ಟದ ಪುಸ್ತಕಗಳು ಬೌದ್ಧಿಕ ವಿಕಾಸಕ್ಕೆ ಹಾನಿಕಾರಕ. 'ಜನಪ್ರಿಯ'ವೆಂಬ ಕಾರಣಕ್ಕಷ್ಟೇ ಪುಸ್ತಕವನ್ನು ಓದಿದರೆ, ನಾವು ಕೂಡ ಸಾಮಾನ್ಯರಂತೆ ಚಿಂತಿಸಲಾರಂಭಿಸುತ್ತೇವೆ. ಈ ಮೂಲಕ ವಿಭಿನ್ನ ಚಿಂತನಾ ಮಾರ್ಗವನ್ನು ಕಳೆದುಕೊಂಡು ಬಿಡುತ್ತೇವೆ. ಸಾಮಾನ್ಯವಾಗಿ, ಇಂತಹ ಕೃತಿಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚು.

ಇಲ್ಲಿ ಸ್ಕೋಪೆನ್‌ಹಾವರ್ ಅವರ ಮುಖ್ಯ ಆಪಾದನೆಯೆಂದರೆ, ಇಂದಿನ ಜನರು ವರ್ತಮಾನ ಕಾಲಘಟ್ಟದಲ್ಲಿ ಪ್ರಕಟವಾಗುತ್ತಿರುವ ಪುಸ್ತಕಗಳತ್ತ ಮಾತ್ರ ಧ್ಯಾನ ಹರಿಸುತ್ತಿದ್ದಾರೆ. ಅದು ಕೂಡ ತಮ್ಮ ವ್ಯವಹಾರ ಜ್ಞಾನ ಮತ್ತು ವಿದ್ವತ್ತನ್ನು ಪ್ರದರ್ಶಿಸಲು ಮಾತ್ರವೇ ವಿನಾ ತಮ್ಮ ಬುದ್ಧಿವಂತಿಕೆಯನ್ನು ಉದ್ದೀ-ಪನಗೊಳಿಸಲು ಅಲ್ಲ. ಅಂದರೆ, ಓದಿನ ನಂಟು ಕೇವಲ ಹಣ ಮತ್ತು ಹೆಸರು ಗಳಿಸುವುದಕ್ಕಷ್ಟೇ ಸೀಮಿತವಾಗಿದೆ. ಈ ಬಾಹ್ಯ ತೋರಿಕೆಗಳ ನಡುವೆ, ಸ್ಕೋಪೆನ್‌ಹಾವರ್ ನಮಗೆ ಪ್ರಾಚೀನ ಶ್ರೇಷ್ಠ ಕೃತಿಗಳ ನಿಧಾನಗತಿಯ ಮರುಓದಿನ ಅಗತ್ಯವನ್ನು ಒತ್ತಿ ಹೇಳುತ್ತಾರೆ.

ಕೊನೆಯದಾಗಿ, ಓದುವ ಹವ್ಯಾಸ ಆಧುನಿಕ ಜಗತ್ತಿನ ಒತ್ತಡಗಳಿಂದ ನಮ್ಮನ್ನು ಪಾರು ಮಾಡಲು ಸಹಾಯಕ. ಆದರೆ, ಇಂದಿನ ತೋರಿಕೆಯ ಜಗತ್ತಿನಲ್ಲಿ, ಪುಸ್ತಕ ಸಂಗ್ರಹ ಕೂಡ ಒಂದು ಸಾಮಾಜಿಕ ಪ್ರತಿಷ್ಠೆಯ ಸಂಕೇತವಾಗಿಯಷ್ಟೇ ಉಳಿದಿದೆ. ಹಾಗಾಗದಂತೆ, ಯಾವುದೇ ಪುಸ್ತಕವನ್ನು ಖರೀದಿಸುವಾಗ, ಅದನ್ನು ಓದಲು ಬೇಕಾಗುವ ಸಮಯದ ಲಭ್ಯತೆಯನ್ನು ಕೂಡ ಪರಿಗಣಿಸುವುದು ಅಷ್ಟೇ ಮಹತ್ವದ ಅಂಶ. ಯಾಕೆಂದರೆ, ಕೇವಲ ಪುಸ್ತಕ ಖರೀದಿಯಿಂದ ಅದರಲ್ಲಿರುವ ಜ್ಞಾನ ನಮ್ಮ ಸ್ವಾಧೀನವಾಗುವುದಿಲ್ಲ.

ವಾಚಕರ ವಾಣಿ

ಹೊಸ ರಾಜಕೀಯ ಸಂಸ್ಕೃತಿಗೆ ಯತ್ನಿಸಿದರೇ?

ಬಿ.ಎಸ್. ಯಡಿಯೂರಪ್ಪ ರಾಜೀನಾಮೆ ನೀಡಿದ್ದಾರೆ ಎಂಬ ಸುದ್ದಿ ತಿಳಿದಾಗ, ಹಿಂದೆ ಆರೋಪಗಳ ಹಿನ್ನೆಲೆಯಲ್ಲಿ ಹೈಕಮಾಂಡ್ ಕೇಳಿದಾಗಲೂ 'ಒಳ್ಳೆಯ ದಿನ'ದವರೆಗೆ ಕಾಲ ತಳ್ಳಿದ್ದುದು, ಸಂಖ್ಯಾಬಲ ಇಲ್ಲದಾಗಲೂ ಆರು ದಿನದ ಮುಖ್ಯಮಂತ್ರಿ ಆಗಿದ್ದುದು ಎಲ್ಲ ನೆನಪಾಯಿತು. ಮುಂದಿನ ಮುಖ್ಯಮಂತ್ರಿ ಯಾರು ಎನ್ನುವುದಕ್ಕಿಂತ ಯಡಿಯೂ-ರಪ್ಪನವರು ತಮ್ಮ ನಾಲ್ಕು ದಶಕಗಳ ರಾಜಕಾರಣದಲ್ಲಿ ಹೊಸ ರಾಜಕೀಯ ಸಂಸ್ಕೃತಿಯನ್ನು ತರಲು ಯತ್ನಿಸಿದರೇ ಎಂಬ ಪ್ರಶ್ನೆ ಹೆಚ್ಚು ಮುಖ್ಯ, ಪ್ರಸ್ತುತ.

ಅಕಾಡೆಮಿ (ಚಲನಚಿತ್ರವೂ ಸೇರಿದಂತೆ), ನಿಗಮ, ಮಂಡಳಿಗಳ ಕೆಲವು ನೇಮಕಗಳು ಅನರ್ಹರಿಗೆ ಮಣೆ ಹಾಕಿದಂತಿದ್ದವು. ಅಧಿಕಾರಿಗಳ ವರ್ಗಾವರ್ಗಿಯಲ್ಲೂ ಆಸಕ್ತ ಹಿತಗಳ ಕೈವಾಡ ಇತ್ತು. ಅವರ ಸೆಕ್ರೆಟೇರಿಯಟ್‌ಗೆ ಕಳುಹಿಸಿದ ದೂರುಗಳಿಗೆ ಸ್ವೀಕೃತಿ ಕೂಡ ಸಿಗುತ್ತಿರಲಿಲ್ಲ.

ಒಂದೇ ಮೆಚ್ಚುಗೆಯ ಅಂಶ- ಈ ವಯಸ್ಸಿನಲ್ಲೂ ಸಾಕಷ್ಟು ಚಟುವಟಿಕೆಯಿಂದಿದ್ದಾರೆ. ಸಕ್ರಿಯ ರಾಜಕಾರಣದಲ್ಲಿದ್ದೇ ರಾಜ್ಯಕ್ಕೆ ಸೇವೆ ಸಲ್ಲಿಸಬೇಕೆ- ಅವರಿಗೆ ಬಿಟ್ಟ ವಿಷಯ. ಒಟ್ಟಿನಲ್ಲಿ ಅವರ ಅಧಿಕಾರ ಪರ್ವವಂತೂ ಅಂತ್ಯಗೊಂಡಿದೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಪಾಕ್ ಜೊತೆ ಪೈಪೋಟಿಗೆ ಇಳಿಯೋಣ!

ಬರಲಿದೆ ಮರಗಳ ಸುನಾಮಿ! (ಸಂಗತ, ಜುಲೈ 26). ಇದೇನು ಅನಾಹುತ ತರುವ ಸುನಾಮಿಯಲ್ಲ! ನೆರೆಯ ಪಾಕಿಸ್ತಾನವು ಪರಿಸರ ದಿನಾಚರಣೆಯ ಈ ಸಾಲಿನ ಆತಿಥೇಯ ದೇಶವಾಗಿದೆ. ಜೀವಪರಿಸರ ಪುನರ್‌ಸ್ಥಾಪನೆ ಅನುಸಾರ ಆ ದೇಶವು ಮುಂದಿನ ಐದು ವರ್ಷಗಳಲ್ಲಿ ತನ್ನ ನೆಲದಲ್ಲಿ ಸಾವಿರ ಕೋಟಿ ಸಸಿ ನೆಟ್ಟು ಮರಗಳ ಸುನಾಮಿಯನ್ನೇ ಸೃಷ್ಟಿಸಲಿದೆ.

ಭಾರತ– ಪಾಕಿಸ್ತಾನದ ಮಧ್ಯೆ ಬರಿಯ ಕಲಹ, ಸಂಘರ್ಷಗಳನ್ನೇ ಕೇಳುತ್ತಿದ್ದ ನಮಗೆ ಈ ಸುದ್ದಿ ನಿಜಕ್ಕೂ ಸಂತಸ ಮೂಡಿಸಿತು. ನಮ್ಮ ದೇಶವೂ ಈ ವಿಷಯದಲ್ಲಿ ಪಾಕಿಸ್ತಾನದ ಜೊತೆ ಪೈಪೋಟಿ ನಡೆಸಲಿ! ನಾವೂ ಅವರಿಗಿಂತ ಹೆಚ್ಚು ಮರಗಳನ್ನು ಬೆಳೆಸಿ ಬೀಗೋಣ. ಯಾರೇ ಮರಗಳನ್ನು ಬೆಳೆಸಿದ್ದು ಹೆಚ್ಚು ಕಡಿಮೆ ಎಂದು ಹೇಳಿದರೂ ಖಂಡಿತ ಯಾರಿಗೂ ನಷ್ಟವಿಲ್ಲ ತಾನೇ?! ನೆರೆ ದೇಶದೊಡನೆ ಇಂತಹ ಆರೋಗ್ಯಕರ ಪೈಪೋಟಿ ನಡೆಯಲಿ, ಇಬ್ಬರಿಗೂ ಕ್ಷೇಮ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ತಲೆದಂಡ ಅನಿರೀಕ್ಷಿತವಲ್ಲ

ಹಲವು ದಿನಗಳಿಂದ ರಾಜ್ಯ ರಾಜಕಾರಣದಲ್ಲಿ ಹೆಚ್ಚು ಚರ್ಚೆಗೆ ಗ್ರಾಸವಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರ ಪದತ್ಯಾಗದ ವಿಚಾರ, ಕೊನೆಗೆ ಸೋಮವಾರ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದರ ಮೂಲಕ ಅಂತ್ಯಗೊಂಡಿದೆ. ಹೋರಾಟದ ಹಿನ್ನೆಲೆಯಿಂದ ಬಂದ ಯಡಿಯೂರಪ್ಪ ತಮ್ಮ ಪದತ್ಯಾಗದ ಮೂಲಕ ರಾಜಕಾರಣದ ಮುಸ್ಸಂಜೆಯಲ್ಲಿ ಮಹತ್ವದ ತಿರುವಿಗೆ ಕಾರಣರಾಗಿದ್ದಾರೆ.

ರಾಜ್ಯ ಬಿಜೆಪಿಯಲ್ಲಿ ಎರಡರಷ್ಟಿದ್ದ ಶಾಸಕರ ಸಂಖ್ಯೆಯನ್ನು ಬಹುಮತದ ಸರ್ಕಾರದತ್ತ ತಂದಿದ್ದು ಅವರ ಹೆಗ್ಗಳಿಕೆ. ಹಲವು ವರ್ಷಗಳ ಕಾಲ ವಿರೋಧ ಪಕ್ಷದ ನಾಯಕರಾಗಿ ಹೆಚ್ಚು ಗುರುತಿಸಿಕೊಂಡಿದ್ದ ಅವರದು ರಾಜ್ಯ ರಾಜಕಾರಣ ಕಂಡ ಅಪರೂಪದ ವ್ಯಕ್ತಿತ್ವ. ಹೈಕಮಾಂಡ್ ನಿರ್ದೇಶನದಂತೆ ಮುಖ್ಯಮಂತ್ರಿ ಸ್ಥಾನ ತ್ಯಜಿಸಿರುವ ಯಡಿಯೂರಪ್ಪ ಅವರು ಅದಕ್ಕೂ ಮುನ್ನ ಭಾವುಕರಾಗಿ ಕಣ್ಣೀರು ಹಾಕಿರುವುದು, ಪದತ್ಯಾಗ ಅವರಿಗೆ ಇಷ್ಟವಿರಲಿಲ್ಲ ಎಂಬುದನ್ನು ತೋರಿಸುತ್ತದೆ. ಆದರೆ, ಬಿಜೆಪಿಯ ತತ್ವ-ಸಿದ್ಧಾಂತದ ಅನ್ವಯ 75 ವರ್ಷ ಮೇಲ್ಪಟ್ಟವರು ರಾಜಕೀಯ ನಿವೃತ್ತಿ ಪಡೆದುಕೊಳ್ಳಬೇಕೆಂಬುದರ ಆಧಾರದ ಮೇಲೆ ಅವರ ತಲೆದಂಡವಾಗುತ್ತಿರುವುದು ಅನಿರೀಕ್ಷಿತವೇನಲ್ಲ.

ರಾಜ್ಯ ರಾಜಕೀಯದಲ್ಲಿ ಗಣನೀಯ ಪ್ರಭಾವ ಹೊಂದಿರುವ ಲಿಂಗಾಯತ ಸಮುದಾಯದಿಂದ ಬಂದ ಯಡಿಯೂರಪ್ಪ ಅವರು, ತಮ್ಮದೇ ಆದ ವರ್ಚಸ್ಸನ್ನು ಗಳಿಸಿಕೊಂಡವರು. ಅವರ ಸ್ಥಾನವನ್ನು ತುಂಬುವ ಮತ್ತೊಬ್ಬ ರಾಜಕಾರಣಿ ರಾಜ್ಯ ಬಿಜೆಪಿಯಲ್ಲಿ ಇದ್ದಾರೆಯೇ ಎಂಬ ಪ್ರಶ್ನೆ ಸಹಜವಾಗಿ ಎಲ್ಲರನ್ನೂ ಕಾಡುತ್ತದೆ.

ಶ್ರೀಧರ್ ಡಿ. ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

ಮೀರಾಬಾಯಿ– ಮಿಠಾಯಿ

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ
ಗೆದ್ದು ದೇಶದ ವಿಜಯ ಪತಾಕೆ
ಹಾರಿಸಿದ್ದಾರೆ ಚಾನು ಮೀರಾಬಾಯಿ,
ಕೋವಿಡ್ ಸಾವು ನೋವು ಕೇಳಿ ಬೇಸತ್ತಿದ್ದ
ದೇಶವಾಸಿಗಳಿಗೆ ಈ ವಿಜಯೋತ್ಸವದ ಸುದ್ದಿ ಕೇಳಿ
ಆಗಿದೆ ಸಂತಸ, ತಿಂದಷ್ಟೇ ಸಿಹಿ ಮಿಠಾಯಿ!

ಸರ್ದಾರ್ ಎಂ. ತನಾಝ್, ಅರಸೀಕೆರೆ

ಮೇಲುಸಂಪಾದನೆಗೆ ಕಡಿವಾಣ ಹಾಕಬೇಕೆಂದರೆ...

ಸರ್ಕಾರಿ ಕೆಲಸವೆಂದರೆ ಮೇಲುಸಂಪಾದನೆಗೆ ಸರಳವಾದ ಮಾರ್ಗ ಎಂಬ ಮನೋಭಾವ ಸಮಾಜದಲ್ಲಿದೆ ಎಂದು ರಾಜಕುಮಾರ ಕುಲಕರ್ಣಿ ಬರೆದಿದ್ದಾರೆ (ಸಂಗತ, ಜುಲೈ 24). ಕೆಲವು ಇಲಾಖೆಗಳಲ್ಲಿ ಕಾರ್ಯ ನಿರ್ವಹಿ-ಸುತ್ತಿದ್ದಾರೆ ಎಂಬುದು ತಿಳಿದ ತಕ್ಷಣ ಜನ 'ಓಹ್ ಇವರು ಸುಮ್ನೆ ಇದ್ದರೂ ದುಡ್ಡು ಬರ್ತಾ ಇರತ್ತೆ, ಖರ್ಚಿಗಂತೂ ಮೋಸವಿಲ್ಲ, ಬರುವ ಸಂಬಳವನ್ನು ಬೇರೆ ಕಡೆ ಹೂಡಿಕೆ ಮಾಡಬಹುದು' ಎನ್ನುವ ಸುಲಭ ತೀರ್ಮಾನಕ್ಕೆ ಬಂದುಬಿಡುತ್ತಾರೆ. ಆ ನೌಕರ 'ಇಲ್ಲ ಇಲ್ಲ, ನಾನು ಆ ರೀತಿ ಏನೂ ತಗೊಳ್ಳಲ್ಲ, ಸಂಬಳದಲ್ಲೇ ನಮ್ಮ ಜೀವನ' ಅಂದರೂ, 'ಹೇ ಯಾರೂ ಸಾಚಾ ಅಲ್ಲ. ಬಂದದ್ದನ್ನು ಬೇಡ ಅನ್ನದೆ, ಬರೋವಾಗ ಸಿಕ್ಕಷ್ಟು ಗಳಿಸಿ ಆರಾಮಾಗಿರಿ' ಅನ್ನುವ ಉತ್ತರ ಬರುತ್ತದೆ.

ಬರುವ ವೇತನದಲ್ಲೇ ನ್ಯಾಯಯುತವಾಗಿ ಜೀವನ ಸಾಗಿಸುತ್ತಿರುವ ಅದೆಷ್ಟೋ ನೌಕರರು ಇದ್ದಾರೆ. ಅವರ ಸೇವೆಯನ್ನು ಸರ್ಕಾರ ಗುರುತಿಸಬೇಕು. ಅಂಥವರ ದಕ್ಷತೆಗೆ ಸೂಕ್ತ ಮನ್ನಣೆ ನೀಡಿದರೆ ಲಂಚದ ಹಾವಳಿಗೆ ಕಡಿವಾಣ ಹಾಕಬಹುದೇನೋ.

ಮಧು ಎನ್.ಬಿ., ನಾರನಹಳ್ಳಿ, ದೊಡ್ಡಬಳ್ಳಾಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.


ಅಂಬರೀಷ್ ಜತೆ ಜಯಂತಿ


ನಗರದ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಸೋಮವಾರ ಹಿರಿಯ ನಟಿ ಜಯಂತಿ ರವರ ಪಾರ್ಥಿವ ಶರೀರಕ್ಕೆ ಜಯಮಾಲಾ, ಸುಧಾರಾಣಿ, ಶೃತಿ ಮತ್ತು ನಟ ಸೃಜನ್ ಲೋಕೇಶ್ ಅಂತಿಮ ನಮನ ಸಲ್ಲಿಸಿದರು. ಜಯಂತಿ ಅವರ ಮಗ ಕೃಷ್ಣಕುಮಾರ್ ಇದ್ದರು

–ಪ್ರಜಾವಾಣಿ ಚಿತ್ರ


ಡಾ.ರಾಜ್ ಜತೆ ಒಂದು ಸಂಭ್ರಮದ ಗಳಿಗೆ...

ಸೌಂದರ್ಯ 'ಶಾರದೆ'ಯ ಮೇಳ

• ರಘುನಾಥ ಚ.ಹ.

ಜಯಂತಿ! ಮೂರಕ್ಷರಗಳ ಈ ಹೆಸರಿನೊಂದಿಗೆ ಮೂರು ಮುಖಗಳನ್ನು ನೆನಪಿಸಿಕೊಳ್ಳಬೇಕು: ಅಪಾರ ಆತ್ಮವಿಶ್ವಾಸ ಹಾಗೂ ಸ್ವಾಭಿಮಾನ. ಎಂಥ ಪಾತ್ರವನ್ನಾದರೂ ನಿಭಾಯಿಸಬಲ್ಲ ಪ್ರತಿಭೆ. ಸಿದ್ಧ ಮಾದರಿಗಳಿಗೆ ಭಿನ್ನವಾದ ದಾರಿಯಲ್ಲಿ ನಡೆಯುವ ದಿಟ್ಟತನ.

ಕನ್ನಡ ಚಿತ್ರರಂಗದಲ್ಲಿ 'ಅಣ್ಣಾವ್ರು' ಎಂದೇ ಪ್ರಸಿದ್ಧರಾದ ರಾಜ್‌ಕುಮಾರ್ ಅವರನ್ನು 'ರಾಜ್' ಎಂದು ಬಹಿರಂಗವಾಗಿ ಕರೆಯುತ್ತಿದ್ದ, ಆಲಿಂಗಿಸಿಕೊಂಡು ಮುತ್ತು ಕೊಡುತ್ತಿದ್ದ ಏಕೈಕ ನಾಯಕಿ ಜಯಂತಿ. ರಾಜ್ ಮಾತ್ರವಲ್ಲ, ಜಯಂತಿ ಅವರ ಬಾಯಿಯಲ್ಲಿ ಪುಟ್ಟಣ್ಣ ಕಣಗಾಲ್ 'ಪುಟ್ಟು' ಆಗಿದ್ದರು. ಅಂಬರೀಶ್ ಹಾಗೂ ವಿಷ್ಣುವರ್ಧನ್, 'ಅಂಬಿ' ಮತ್ತು 'ವಿಷ್ಣು' ಆಗಿ ಮೊಟಕಾಗಿದ್ದರು. ಹೀಗೆ ತಾರಾ ವರ್ಚಸ್ಸಿನ ಕಲಾವಿದ, ನಿರ್ದೇಶಕರನ್ನು ಹೆಸರು ಹಿಡಿದು ಕರೆಯುತ್ತಿದ್ದುದು ಆ ತಾರೆಗಳೊಂದಿಗೆ ಜಯಂತಿ ಸಾಧಿಸಿದ್ದ ಸ್ನೇಹ–ಪ್ರೇಮಗಳ ಸಲಿಗೆಯಷ್ಟೇ ಆಗಿರಲಿಲ್ಲ; ತಾನು ಯಾರಿಗಿಂತ ಕಡಿಮೆಯಲ್ಲ ಎನ್ನುವ ಕಲಾವಿದೆಯ ಆತ್ಮವಿಶ್ವಾಸವೂ ಅವರ ಮಾತುಗಳಲ್ಲಿ ಪ್ರಕಟಗೊಳ್ಳುತ್ತಿತ್ತು.

ಲಂಕೇಶ್ ಪತ್ರಿಕೆಯಲ್ಲೊಮ್ಮೆ 'ಅಬ್ಬಬ್ಬಾ! ಜಯಂತಿ ಎಷ್ಟು ಭಾರ' ಎನ್ನುವ ಬರಹ ಪ್ರಕಟವಾಗಿತ್ತು. ಆ ಬರಹಕ್ಕೆ ಜಯಂತಿ ಪ್ರತಿಕ್ರಿಯೆ: 'ನನ್ನ ಭಾರ ಗೊತ್ತಾಗಲಿಕ್ಕೆ ಲಂಕೇಶ್ ನನ್ನನ್ನು ಯಾವಾಗ ಎತ್ತಿಕೊಂಡಿದ್ದರು? ಅಬ್ಬಬ್ಬಾ! ಜಯಂತಿ ಎಷ್ಟು ದಪ್ಪ ಎಂದು ಬರೆಯಬೇಕಿತ್ತಲ್ಲವೇ?'. ಅಷ್ಟಕ್ಕವರು ಸುಮ್ಮನಾಗಲಿಲ್ಲ. ತಮ್ಮ ಗೆಳತಿಯೂ ಆಗಿದ್ದ ಲಂಕೇಶ್ ಪುತ್ರಿ ಗೌರಿ ಅವರಿಗೆ ಫೋನ್ ಮಾಡಿ, 'ಬೇಕಿದ್ದರೆ ನಿಮ್ಮ ತಂದೆ ಒಮ್ಮೆ ನನ್ನನ್ನು ಲಿಫ್ಟ್ ಮಾಡಿ ನೋಡಲಿ' ಎಂದು ತಮಾಷೆ ಮಾಡಿದ್ದರು. ಅದು ಜಯಂತಿ ವ್ಯಕ್ತಿತ್ವ.

ಜಯಂತಿ ಸಿನಿಮಾಗಳಲ್ಲಿ ಬಣ್ಣ ಹಚ್ಚಿಕೊಳ್ಳುವ ವೇಳೆಗೆ ಕನ್ನಡ ಸಿನಿಮಾಗಳಲ್ಲಿ 'ಆದರ್ಶ ಗೃಹಿಣಿ' ಹಾಗೂ 'ವಾತ್ಸಲ್ಯಮಯಿ ಅಮ್ಮ'ನ ಮಾದರಿಯೊಂದು ಚಾಲ್ತಿಯಲ್ಲಿತ್ತು. ರಾಜಮ್ಮ ಮತ್ತು ಪಂಢರಿಬಾಯಿ ಅವರಂಥ ಕಲಾವಿದೆಯರ ಮೂಲಕ ರೂಪುಗೊಂಡಿದ್ದ ಜನಪ್ರಿಯ ಮಾದರಿಯ ಭಾಗವಾಗಿದ್ದುಕೊಂಡೂ, ಅದನ್ನು ಒಡೆಯಲಿಕ್ಕೆ ಪ್ರಯತ್ನಿಸಿದ್ದು ಜಯಂತಿ ಅವರ ವಿಶಿಷ್ಟ ಸಾಧನೆ. ಹೆಣ್ಣಿನ ಭಾವಲೋಕದ ಭಿನ್ನ ಮುಖಗಳನ್ನು ಅನಾವರಣಗೊಳಿಸುವಂಥ ಪಾತ್ರಗಳಲ್ಲಿ ಅವರು ಅಭಿನಯಿಸಿದರು. ಅವರ ಸಮಕಾಲೀನರಾದ ಕಲ್ಪನಾ, ಆರತಿ, ಭಾರತಿ ಹಾಗೂ ಲೀಲಾವತಿ ಕೂಡ ಬಾಹ್ಯ ಸೌಂದರ್ಯದ ಜೊತೆಗೆ ಅಂತರಂಗದ ತುಮುಲಗಳನ್ನು ವ್ಯಕ್ತಗೊಳಿಸುವ ಪಾತ್ರಗಳಿಗೆ ಜೀವ ತುಂಬಿದವರೇ. ಆದರೆ, ಜಯಂತಿ ಹಾಗೂ ಕಲ್ಪನಾ ಅವರಿಗೆ ದೊರೆತಷ್ಟು ವೈವಿಧ್ಯದ ಪಾತ್ರಗಳು ಉಳಿದವರಿಗೆ ದೊರೆಯಲಿಲ್ಲ.


1995ರಲ್ಲಿ ಅಂದಿನ ಮುಖ್ಯಮಂತ್ರಿ ಎಚ್‌.ಡಿ. ದೇವೇಗೌಡ ಅವರಿಂದ ರಾಜ್ಯೋತ್ಸವ ಪ್ರಶಸ್ತಿ ಪಡೆದಾಗ

ಜಯಂತಿ ಅವರಿಗೊಲಿದ ಪ್ರಶಸ್ತಿಗಳು

- 1965ರ– ಮಿಸ್ ಲೀಲಾವತಿ ರಾಷ್ಟ್ರಪ್ರಶಸ್ತಿ

ರಾಜ್ಯ ಪ್ರಶಸ್ತಿಗಳು

- 1969 – ಎರಡು ಮುಖ
- 1976 – ಮನಸ್ಸಿನಂತೆ ಮಾಂಗಲ್ಯ
- 1981 – ಧರ್ಮ ದಾರಿ ತಪ್ಪಿತು
- 1985 – ಮಸಣದ ಹೂವು
- 1986 – ಆನಂದ್

ಸಾಧನೆ–ಸವಾಲಿನ ದಾರಿ

ಸಾಂಪ್ರದಾಯಿಕ ವಿವಾಹ ವ್ಯವಸ್ಥೆಗೆ ಬೆನ್ನುಮಾಡಿ, ವಿವಾಹಪೂರ್ವ ಸಂಬಂಧವನ್ನು ಒಪ್ಪಿಕೊಳ್ಳುವ ಹೆಣ್ಣಿನ 'ಮಿಸ್ ಲೀಲಾವತಿ', ವಿವಾಹೇತರ ಸಂಬಂಧಕ್ಕೆ ಹಾತೊರೆವ 'ಎಡಕಲ್ಲು ಗುಡ್ಡದ ಮೇಲೆ', ಹುಚ್ಚಿಯ ಪಾತ್ರದ 'ಬಾಳು ಬೆಳಗಿತು', ಅಹಂಕಾರಿ ರಾಜಕುಮಾರಿಯಾಗಿ 'ಬಹದ್ದೂರ್ ಗಂಡು', ಸೀಳು ವ್ಯಕ್ತಿತ್ವದ ಹೆಣ್ಣಿನ ಪಾತ್ರದ 'ಎರಡು ಮುಖ' (ಕನ್ನಡದ ಮೊದಲ ಮನೋವೈಜ್ಞಾನಿಕ ಚಿತ್ರ) – ಇಂಥ ವಿಭಿನ್ನ ಪಾತ್ರಗಳನ್ನು ನಟಿಸಿದ ಅಗ್ಗಳಿಕೆ ಜಯಂತಿ ಅವರದು. ಆ ಕಾರಣದಿಂದಲೇ ಅವರು 'ಅಭಿನಯ ಶಾರದೆ'. ಜಯಂತಿ ಅವರಿಗಿಂಥ ಉತ್ತಮ ಕಲಾವಿದೆಯರನ್ನು ಕನ್ನಡ ಸಿನಿಮಾ ಕಂಡಿದೆ. ಆದರೆ ಪಾತ್ರವೈವಿಧ್ಯ, ಯಶಸ್ಸು ಮತ್ತು ದಿಟ್ಟತನದ ಮಾದರಿಯಾಗಿ ಜಯಂತಿ ಅವರಂಥ ಮತ್ತೊಬ್ಬ ನಟಿ ಕನ್ನಡ ಸಿನಿಮಾ ಪರಂಪರೆಯಲ್ಲಿಲ್ಲ.

ನಟಿಯಾಗಿ ಜನಪ್ರಿಯತೆ ಗಳಿಸಿದರೂ ಪ್ರಯೋಗಶೀಲತೆಗೂ ಅವರದು ತೆರೆದ ಮನಸ್ಸಾಗಿತ್ತು. ಈ ತೆರೆದ ಮನಸ್ಸು ಹಾಗೂ ದಿಟ್ಟತನದ ಭಾಗವಾಗಿಯೇ ಅವರು ನಟಿಸಿದ ರತಿ ವರ್ಚಸ್ಸಿನ ಪಾತ್ರಗಳನ್ನು ಗುರ್ತಿಸಬಹುದು. 'ಮಿಸ್ ಲೀಲಾವತಿ' ಚಿತ್ರದಲ್ಲಿ ಸ್ವಿಮ್ ಸೂಟ್ ಧರಿಸಿದ್ದು ಆ ಕಾಲಕ್ಕೆ ಅನೇಕರ ಹುಬ್ಬೇರಿಸಿತ್ತು. 'ಬೆಟ್ಟದ ಹುಲಿ', 'ಜೇಡರ ಬಲೆ' ಚಿತ್ರಗಳಲ್ಲಿನ ಅವರ ಪಾತ್ರಗಳು ಆ ಕಾಲಕ್ಕೆ ಚಿತ್ರರಸಿಕರ ಮೈಮನಗಳನ್ನು ಬೆಚ್ಚಗಾಗಿಸಿದ್ದವು. ಆ ವೇಳೆಗಾಗಲೇ ಹರಿಣಿಯಂಥ ('ಜಗನ್ಮೋಹಿನಿ') ನಟಿಯರು ಸಿನಿಮಾಗಳಲ್ಲಿ ಮೈಮಾಟ ತೋರುವ ಪರಂಪರೆಗೆ ನಾಂದಿ ಹಾಡಿದ್ದರೂ, ಅದನ್ನು ಹೆಚ್ಚು ಪರಿಣಾಮಕಾರಿಯಾಗಿ ನಿಭಾಯಿಸಿದ್ದು ಜಯಂತಿ. 'ಚೂರಿ ಚಿಕ್ಕಣ್ಣ', 'ಭಲೇ ಬಸವ', 'ಊರಿಗೆ ಉಪಕಾರಿ', 'ರೌಡಿ ರಂಗಣ್ಣ' ರೀತಿಯ ಚಿತ್ರಗಳಲ್ಲಿ ತುಂಟ ಹೆಣ್ಣಾಗಿ, 'ಕಸ್ತೂರಿ ನಿವಾಸ', 'ಚಕ್ರತೀರ್ಥ', 'ಮನಸ್ಸಿದ್ದರೆ ಮಾರ್ಗ' ಚಿತ್ರಗಳಲ್ಲಿ ಗಂಭೀರ ಪಾತ್ರಗಳಲ್ಲಿ ನಟಿಸಿದ ಅವರು ಒಂದೇ ಬಗೆಯ ಇಮೇಜ್‌ಗೆ ಕಟ್ಟುಬೀಳಲಿಲ್ಲ. 'ನಾಗರಹಾವು' ಚಿತ್ರದ ಓಬವ್ವನ ಪುಟ್ಟ ಪಾತ್ರದಲ್ಲಿ ಕೂಡ ಅವರು ತಮ್ಮ ಛಾಪು ಮೂಡಿಸಿದ್ದರು.

ನೃತ್ಯದಿಂದ ನಟನೆಗೆ

ಜಯಂತಿ (ಜನವರಿ 6, 1945 – ಜುಲೈ 26, 2021) ಅವರ ತವರು ಬಳ್ಳಾರಿ. ಕಮಲಾಕುಮಾರಿ ಎನ್ನುವುದು ಅವರ ಹುಟ್ಟುಹೆಸರು. ಬಾಲ್ಯದಲ್ಲವರಿಗೆ ಸಿನಿಮಾ ಬಗ್ಗೆ ವಿಶೇಷ ಆಸಕ್ತಿ, ಆಕರ್ಷಣೆಯೇನೂ ಇರಲಿಲ್ಲ. 'ಎರಡು ಜಡೆ ಕಮಲಾಕುಮಾರಿ' ಎಂದು ಗೆಳತಿಯರ ನಡುವೆ ಹೆಸರಾಗಿದ್ದ ಹುಡುಗಿ, ಶಾಲಾ ವಾರ್ಷಿಕೋತ್ಸವದಲ್ಲೊಮ್ಮೆ ಮಾಡಿದ ನೃತ್ಯ ಬದುಕಿನ ಚಲನೆಯನ್ನೇ ಬದಲಾಯಿಸಿತು. ಆ ಮೆಚ್ಚುಗೆಯೇ ಮುಂದೆಯೂ ನೃತ್ಯದೊಂದಿಗೆ ನಂಟು ಇರಿಸಿಕೊಳ್ಳಲು ಕಾರಣವಾಯಿತು. ಮಗಳ ಕಣ್ಣಲ್ಲಿ ಅಮ್ಮನಿಗೆ ಪ್ರಸಿದ್ಧ ನೃತ್ಯಗಾತಿಯೊಬ್ಬಳು ಕಾಣಿಸಿದಳು. ಕಮಲಾಳ ನೃತ್ಯ ಅಭ್ಯಾಸಕ್ಕೆ ಅನುಕೂಲವಾಗಲೆಂದು ಕುಟುಂಬ ಮದರಾಸಿಗೆ ಬಂದು ನೆಲೆಸಿತು. ಅಮ್ಮನಿಂದ ನಿತ್ಯ ಸಕ್ಕರೆ ತುಪ್ಪ ಸವಿಯುತ್ತಿದ್ದ ಬಾಲಕಿಯ ಮೈ ನೃತ್ಯದ ಲಾಲಿತ್ಯಕ್ಕೆ ಒಗ್ಗಿಕೊಳ್ಳುವುದು ಸುಲಭವೇನಾಗಿರಲಿಲ್ಲ. ಗೆಳತಿಯರ ತಮಾಷೆಯ ನಡುವೆಯೇ ಅಭ್ಯಾಸ ಮುಂದುವರೆಯಿತು.

ಕಮಲಾಕುಮಾರಿ ನೃತ್ಯ ಕಲಿಯುತ್ತಿದ್ದ ಶಾಲೆಯ ಗುರು ಚಂದ್ರಕಲಾ ಎನ್ನುವವರು ಸಿನಿಮಾಗಳಲ್ಲಿನ ನೃತ್ಯ ಸನ್ನಿವೇಶಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಗುರುಗಳ ಜೊತೆಯಲ್ಲಿ ಶಿಷ್ಯೆಯರೂ ಆಗಾಗ ಸಿನಿಮಾ ಚಿತ್ರೀಕರಣ ನಡೆಯುತ್ತಿದ್ದ ಸ್ಟುಡಿಯೊಗಳಿಗೆ ಹೋಗುತ್ತಿದ್ದರು. ಹೀಗೊಮ್ಮೆ 'ಗೋಲ್ಡನ್ ಸ್ಟುಡಿಯೊ'ಗೆ ಹೋದಾಗ ಕಮಲಾಕುಮಾರಿ ನಿರ್ದೇಶಕ ವೈ.ಆರ್. ಸ್ವಾಮಿ ಅವರ ಕಣ್ಣಿಗೆ ಬಿದ್ದರು. 'ಜೇನುಗೂಡು' ಸಿನಿಮಾದ ತಯಾರಿಯಲ್ಲಿದ್ದ ಅವರು, ನಟನೆಯ ಆಹ್ವಾನ ನೀಡಿದರು. ಮನೆಯಲ್ಲಿ ಬಡಪೆಟ್ಟಿಗೆ ಒಪ್ಪಿಗೆ ದೊರೆಯಲಿಲ್ಲ. ಸಿನಿಮಾ ಹಾಗೂ ಸಿನಿಮಾ ಜನ ಎಂದರೆ ಸಮಾಜದಲ್ಲಿ ಒಳ್ಳೆಯ ಅಭಿಪ್ರಾಯ ಇಲ್ಲದ ದಿನಗಳವು. 'ಕೆಟ್ಟದು, ಒಳ್ಳೆಯದು ಎಲ್ಲ ಜಾಗದಲ್ಲೂ ಇರುತ್ತೆ. ನಾವು ಒಳ್ಳೆಯವರಾಗಿದ್ದರೆ ಎಲ್ಲರೂ ಒಳ್ಳೆಯವರಾಗಿರುತ್ತಾರೆ. ನಿಮ್ಮ ಮಗಳನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನದು' ಎಂದು ಸ್ವಾಮಿ ಭರವಸೆ ನೀಡಿದರು; ಕಮಲಾಕುಮಾರಿಯ ತಾಯಿ ಸಂತಾನಲಕ್ಷ್ಮಿ ಒಪ್ಪಿಕೊಂಡರು. ಹೀಗೆ ಒಲಿದುಬಂದಿದ್ದು 'ಜೇನುಗೂಡು' (1963). ನಂತರದ ನಟನೆಯ ಪಯಣದಲ್ಲಿ ಸಿಹಿಯ ಪಾಲೇ ಹೆಚ್ಚು.

'ಜೇನುಗೂಡು' ನಂತರ 'ಚಂದವಳ್ಳಿಯ ತೋಟ' ಚಿತ್ರದಲ್ಲಿ ಅಭಿನಯಿಸುವಾಗ, ಕಮಲಾಕುಮಾರಿ ಹೆಸರು ಉದ್ದವಾಯಿತು ಹಾಗೂ ಕಮಲಾ ಹೆಸರಿನ ನಟಿಯರು ಯಾರೂ ಕಲಾವಿದರಾಗಿ ಏಳಿಗೆ ಕಾಣದ್ದರಿಂದ ಜಯಂತಿ ಎಂದು ಹೊಸ ನಾಮಕರಣವಾಯಿತು. ಹೆಸರಿನಲ್ಲಿನ ವಿಜಯ ವೃತ್ತಿಯಲ್ಲೂ ಕೈಹಿಡಿಯಿತು. ಕನ್ನಡದೊಂದಿಗೆ ತೆಲುಗು, ತಮಿಳು, ಮಲಯಾಳ, ಹಿಂದಿ ಸೇರಿದಂತೆ ಸುಮಾರು 500 ಚಿತ್ರಗಳಲ್ಲಿ ಅವರು ನಟಿಸಿದ್ದಾರೆ. ರಾಜ್‌ಕುಮಾರ್, ಎನ್‌.ಟಿ. ರಾಮರಾವ್, ಜೆಮಿನಿ ಗಣೇಶನ್ ಸೇರಿದಂತೆ ದಕ್ಷಿಣ ಭಾರತದ ಅನೇಕ ಜನಪ್ರಿಯ ನಟರಿಗೆ ಜೋಡಿಯಾಗಿ ಕಾಣಿಸಿಕೊಂಡಿದ್ದಾರೆ. ರಾಜ್‌ಕುಮಾರ್‌ಗೆ ಜೋಡಿಯಾಗಿ ಹೆಚ್ಚು ಚಿತ್ರಗಳಲ್ಲಿ ನಟಿಸಿದ ನಾಯಕಿ ಎನ್ನುವ ಖ್ಯಾತಿಯೂ ಅವರದೇ.


ಶೈಲಶ್ರೀ, ಚಿಂದೋಡಿ ಲೀಲಾ, ಜಯಮಾಲಾ ಅವರೊಂದಿಗೆ ಜಯಂತಿ







ಸಂಘರ್ಷದ ಬದುಕು

ಸಿನಿಮಾದಲ್ಲಿ ಯಶಸ್ಸು ಗಳಿಸಿದರೂ, ಜಯಂತಿ ಅವರ ಖಾಸಗಿ ಜೀವನದಲ್ಲಿ ಜೇನು ಹೆಚ್ಚೇನೂ ಇರಲಿಲ್ಲ. ಸಂಬಂಧ ಕವಲೊಡೆದುದರಿಂದಾಗಿ, ಕಮಲಾಕುಮಾರಿ ಅಮ್ಮನ ಕಣ್ಣಳತೆಯಲ್ಲಿ ಬೆಳೆಯಬೇಕಾಯಿತು. ಸಖ್ಯ ಸಾಂಗತ್ಯಗಳಿಗೆ ಹೆಚ್ಚು ಆಯುಸ್ಸಿರಲಿಲ್ಲ. ಬಹುಶಃ, ಬದುಕಿನ ಬಿಕ್ಕಟ್ಟುಗಳೆಲ್ಲ ಜಯಂತಿ ಅವರ ವ್ಯಕ್ತಿತ್ವವನ್ನು ಮತ್ತಷ್ಟು ಗಟ್ಟಿಗೊಳಿಸಿರಬೇಕು. ಮುಖದಲ್ಲಿ ಬೆಳದಿಂಗಳು, ತುಟಿಗಳಲ್ಲಿ ಮುಗುಳುನಗು, ಜೇನಿನ ಮಾಧುರ್ಯದ ಧ್ವನಿಯ ಒಡತಿ ತನ್ನ ಅಂತರಂಗವನ್ನು ತೆರೆದುಕೊಂಡಿದ್ದು ಕಡಿಮೆಯೇ.

ಜಯಂತಿ ಅವರ ಪ್ರಯೋಗಶೀಲತೆಯ ಭಾಗವಾಗಿ ಅವರ ನಿರ್ಮಾಣ, ನಿರ್ದೇಶನದ ಚಿತ್ರಗಳನ್ನು ನೋಡಬಹುದು. ಅವರು ನಿರ್ಮಿಸಿ, ನಿರ್ದೇಶಿಸಿದ ಮೊದಲ ಚಿತ್ರ 'ವಿಜಯ್' (1987). 'ಏನ್ ಸ್ವಾಮಿ ಅಳಿಯಂದ್ರೆ' (1989) ನಿರ್ದೇಶನದ ಮತ್ತೊಂದು ಸಿನಿಮಾ. ಎರಡೂ ಸಿನಿಮಾಗಳು ಗಣನೀಯ ಯಶಸ್ಸು ಗಳಿಸದೆಹೋದ ಕಾರಣದಿಂದಾಗಿ ಅವರು ನಟಿಯಾಗಿಯಷ್ಟೇ ಉಳಿದುಕೊಂಡರು.

'ಎಡಕಲ್ಲು ಗುಡ್ಡದ ಮೇಲೆ', 'ಮಸಣದ ಹೂವು', 'ಮನಸ್ಸಿನಂತೆ ಮಾಂಗಲ್ಯ', 'ಧರ್ಮ ದಾರಿ ತಪ್ಪಿತು' ಚಿತ್ರಗಳಲ್ಲಿನ ನಟನೆಗಾಗಿ 'ಅತ್ಯುತ್ತಮ ನಟಿ', 'ಆನಂದ್' ಹಾಗೂ 'ಟುವ್ವಿ ಟುವ್ವಿ ಟುವ್ವಿ' ಸಿನಿಮಾಗಳಲ್ಲಿ ಪಾತ್ರಪೋಷಣೆಗಾಗಿ 'ಅತ್ಯುತ್ತಮ ಪೋಷಕನಟಿ ರಾಜ್ಯಪ್ರಶಸ್ತಿಗಳು ಅವರಿಗೆ ಸಂದಿವೆ. ಚಿತ್ರರಂಗದಲ್ಲಿನ ಜೀವಮಾನ ಸಾಧನೆಗಾಗಿ 'ರಾಜ್‌ಕುಮಾರ್ ಪ್ರಶಸ್ತಿ' ಗೌರವ ಅವರಿಗೆ ಸಂದಿತ್ತು. ತಾರಾ ವರ್ಚಸ್ಸಿನ ಬಹುತೇಕ ನಾಯಕ ನಟರಿಗಿಂತಲೂ ಹೆಚ್ಚಿನ ಕೊಡುಗೆಯನ್ನು ಕನ್ನಡ ಚಿತ್ರರಂಗಕ್ಕೆ ನೀಡಿರುವ ಅವರು ಇನ್ನೂ ಹೆಚ್ಚಿನ ಗೌರವಕ್ಕೆ, ರಾಷ್ಟ್ರಮಟ್ಟದ ಗೌರವಗಳಿಗೆ ಅರ್ಹರಾಗಿದ್ದರು.

ಇಳಿವಯಸ್ಸಿನಲ್ಲೂ ಅವರ ನಟನೆಯ ಮೋಹ ತೀರಿರಲಿಲ್ಲ. ನಾಗಾಭರಣ ನಿರ್ದೇಶನದ 'ವಿಮೋಚನೆ' (1997) ನಟಿಯಾಗಿ ಅವರಿಗೆ ಮುಪ್ಪಿಲ್ಲ ಎನ್ನುವುದಕ್ಕೆ ಉದಾಹರಣೆಯಂತಿತ್ತು. ಎರಡು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ಸೋಮವಾರ ಮುಂಜಾನೆ ನಿದ್ದೆಯಲ್ಲಿಯೇ ಕೊನೆಯುಸಿರೆಳೆದಿದ್ದಾರೆ. ಬಹುಶಃ, ಅವರು ನಿದ್ದೆಯ ಸ್ವಪ್ನಲೋಕದಲ್ಲಿ ಕಂಡ ಯಾವುದೋ ಪಾತ್ರದ ಬೆನ್ನತ್ತಿ ಹೋಗಿರಬಹುದು.

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ ಜುಲೈ 27, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪುಷ್ಯ ಚತುರ್ಥೀ ಗಂ. 55-1 (ರಾ. 4-11) ಮಂಗಳವಾರ ನಿತ್ಯ ನಕ್ಷತ್ರ ಶತಭಿಷ ಗಂ. 16-11 (ಹ. 12-39) ಶೋಭನ ನಾಮ ಯೋಗ ಗಂ. 45-37 ಬವ ಕರಣ ಗಂ. 25-21 ವಿಷ ಗಂ. 32-35 ಅಮೃತ ಶೇಷ ಗಂ. 2-9 ಅಮೃತ ಗಂ. 57-12 ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-07 ಸೂರ್ಯಾಸ್ತ: 6-45 ಅದೃಷ್ಟ ಸಂಖ್ಯೆ 1 7

ಮೇಷ: ಹೊಸ ಪುಸ್ತಕ ಅಥವಾ ಗ್ರಂಥ ಸಂಪಾದನೆಯಾಗಲಿದೆ. ವಿವಾಹದ ವಿಷಯದಲ್ಲಿ ನೇರ ಮಾತುಕತೆಯಿಂದಾಗಿ ಯಶಸ್ವಿಯಾಗುವಿರಿ. ಸಜ್ಜನರೊಂದಿಗಿನ ಮಾತುಕತೆಯಿಂದಾಗಿ ಉಲ್ಲಾಸ. ವಿದ್ಯಾರ್ಥಿಗಳಿಗೆ ಶುಭ.

ವೃಷಭ: ಚಿತ್ರ ಕಲಾವಿದರು, ಕವಿಗಳಿಗೆ ಮನ್ನಣೆ ದೊರಕಲಿವೆ. ರಾಜಕಾರಣಿಗಳ ಮಾತಿಗೆ ಮರುಳಾಗುವ ಸಾಧ್ಯತೆ. ಹಿತ ಶತ್ರುಗಳ ಭರವಸೆಗಳ ಬಗ್ಗೆ ಎಚ್ಚರಿಕೆ ಅಗತ್ಯ. ಮನೆಯಲ್ಲಿ ಸಂತಸದ ವಾತಾವರಣ ಮೂಡಲಿದೆ.

ಮಿಥುನ: ರಂಗಕಲಾವಿದರಿಗೆ ಹೊಸ ಅವಕಾಶಗಳು. ಮಾತುಗಳಿಗೆ ಮನ್ನಣೆ ಹೊಂದುವಿರಿ. ಸಹೋದ್ಯೋಗಿಗಳ ಉತ್ತಮ ಸಹಕಾರದಿಂದಾಗಿ ಕಾರ್ಯಬಾಹುಳ್ಯದ ನಡುವೆಯೂ ನೆಮ್ಮದಿ. ಉದ್ವೇಗಗೊಳ್ಳದಿರಿ.

ಕರ್ಕಾಟಕ: ಆಡಳಿತಾತ್ಮಕ ಹುದ್ದೆಯಲ್ಲಿರುವವರಿಗೆ ಗೌರವಾದರಗಳು ಲಭಿಸಲಿದೆ ಬರಹಗಾರರಿಗೆ ಕವಿಗಳಿಗೆ, ಕಲಾವಿದರುಗಳಿಗೆ ಉತ್ತಮ ಅವಕಾಶ ದೊರೆಯುವುದರೊಂದಿಗೆ ಪ್ರಶಸ್ತಿ ಫಲಕಗಳಿಗೆ ಭಾಜನರಾಗುವ ಸಾಧ್ಯತೆ.

ಸಿಂಹ: ಲೆಕ್ಕಪರಿಶೋಧನಾ ಕೆಲಸದಲ್ಲಿರುವವರಿಗೆ ಬಿಡುವಿಲ್ಲದ ಕೆಲಸ. ಸಂಪಾದನೆಯಲ್ಲಿ ಏರುಮುಖವನ್ನು ಕಾಣುವಿರಿ. ವಾದವಿವಾದಗಳು ಬಗೆಹರಿದು ನಿರಾಳತೆ ನೆಲೆಸುವುದು.

ಕನ್ಯಾ: ರಾಜಕೀಯ ಭವಿಷ್ಯದ ಬಗ್ಗೆ ಪ್ರಭಾವಿ ರಾಜಕಾರಣಿಗಳೊಂದಿಗೆ ಚರ್ಚೆಯಲ್ಲಿ ಭಾಗವಹಿಸಿ ಮಹತ್ತರ ನಿರ್ಣಯವೊಂದನ್ನು ಕೈಗೊಳ್ಳುವ ಸಾಧ್ಯತೆ. ವಸ್ತ್ರಾಭರಣ ಖರೀದಿ ಮಾಡಲು ಸುಸಮಯವಾಗಿರುವುದು.

ತುಲಾ: ಕಲಾವಿದರು, ನಟರು, ಸಂಗೀತಗಾರರಿಗೆ ಉತ್ತಮ ದಿನವಾಗಿದ್ದು ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯಾಗಲಿದೆ. ವಾಹನ ಖರೀದಿ ಅಥವಾ ವಿಕ್ರಿಯಲ್ಲಿ ಎಚ್ಚರಿಕೆ ವಹಿಸುವುದು ಉತ್ತಮ.

ವೃಶ್ಚಿಕ: ಆದಾಯ–ಖರ್ಚುಗಳನ್ನು ಸಮತೋಲನದಲ್ಲಿ ಇರಿಸಿಕೊಳ್ಳುವಿರಿ. ಮಿತವಾದ ಆಹಾರ ಸೇವನೆಯಿಂದ ಆರೋಗ್ಯದಲ್ಲಿ ಸುಧಾರಣೆ ಕಂಡುಕೊಳ್ಳಬಹುದು. ವಿಶೇಷ ವ್ಯಕ್ತಿಗಳ ಆಗಮನ ಸಾಧ್ಯತೆ ಕಂಡುಬರುವುದು.

ಧನು: ಕಟ್ಟಡ, ವಸ್ತ್ರ ವಿನ್ಯಾಸಕಾರರಿಗೆ ಬೇಡಿಕೆಯೊಂದಿಗೆ ಉದ್ಯೋಗಾವಕಾಶವು ವಿಪುಲವಾಗಿದೆ. ಉದ್ಯೋಗದಲ್ಲಿರುವವರಿಗೆ ಸ್ಥಾನ ಬದಲಾವಣೆ ಅಥವಾ ಬಡ್ತಿಯಿಂದಾಗಿ ಉತ್ತಮ ಆದಾಯ ಲಭಿಸಲಿದೆ. ಉತ್ತಮ ಆರೋಗ್ಯ.

ಮಕರ: ಅರಣ್ಯ ಇಲಾಖಾ ಸಿಬ್ಬಂದಿಗಳಿಗೆ ಮನ್ನಣೆ ಸಿಗುವುದು. ಸತ್ಕಾರ ಸಮಾರಂಭಗಳಲ್ಲಿ ಭಾಗಿ. ವಾಹನ ಮತ್ತು ಯಂತ್ರಗಳ ಬಿಡಿಭಾಗಗಳ ವ್ಯಾಪಾರದಿಂದಾಗಿ ವಿಶೇಷ ಲಾಭ ಹೊಂದುವಿರಿ.

ಕುಂಭ: ಸಂಶೋಧನಾ ಕಾರ್ಯಗಳಲ್ಲಿ ತೊಡಗಿದವರಿಗೆ ಹೊಸ ಸಂಶೋಧನೆಗೆ ಆರ್ಥಿಕ ಸಹಕಾರ ದೊರೆತು ಕೆಲಸಗಳು ನಿರ್ವಿಘ್ನವಾಗಿ ನಡೆಯಲಿದೆ. ಆರಕ್ಷಕ/ರಕ್ಷಣಾ ಇಲಾಖೆಗಳಲ್ಲಿರುವವರಿಗೆ ಬಿಡುವಿಲ್ಲದ ಕೆಲಸ.

ಮೀನ: ಸಹಕಾರ ಸಂಘ ಮುಂತಾದ ಸಾರ್ವಜನಿಕ ಕ್ಷೇತ್ರಗಳಲ್ಲಿ ಉತ್ತಮ ಹುದ್ದೆಯನ್ನು ಹೊಂದುವ ಅವಕಾಶ ದೊರೆಯಲಿದೆ. ಬಂಧುಗಳ ಆಗಮನದಿಂದಾಗಿ ಮನೆಯಲ್ಲಿ ಹಬ್ಬದ ವಾತಾವರಣ ನೆಲೆಸಲಿದೆ.

ನಿಮ್ಮ ಜನ್ಮದಿನ 27-ಜುಲೈ ಇಂದು ಅತ್ಯಂತ ಶುಭದಾಯಕವಾಗಿದ್ದು, ವಿದೇಶಿ ವ್ಯವಹಾರ ಮಾಡುವ ಸಲುವಾಗಿ ಪಾಲುದಾರರನ್ನಾಗಿ ಸೇರಿಸಿಕೊಳ್ಳಲು ಸೂಕ್ತ ವ್ಯಕ್ತಿಯ ಹುಡುಕಾಟ ನಡೆಸಲಿದ್ದೀರಿ. ಚಿನ್ನ ಬೆಳ್ಳಿ ವ್ಯವಹಾರಸ್ಥರಿಗೆ ಸಂಪಾದನೆ ಹೆಚ್ಚುವುದು. ನಿಮ್ಮ ಕಾರ್ಯ ದಕ್ಷತೆಯಿಂದಾಗಿ ಹೆಚ್ಚಿನ ಸ್ಥಾನಮಾನ ಸಿಗಲಿದೆ.

ಬೆರಗಿನ ಬೆಳಕು
ಗುರುರಾಜ ಕರಜಗಿ

ಮಕ್ಕಳ ದಾನ

ಮುದುಕ ಹತ್ತಿರ ಬಂದಾಗ ವೆಸ್ಸಂತರ ಬೋಧಿಸತ್ವ, ವಿನಯದಿಂದ ಮೇಲೆದ್ದು ಅವನನ್ನು ಆದರಿಸಿದ, ಸ್ವಾಗತಿಸಿದ. ತನ್ನ ಮಗ ಜಾಲಿಕುಮಾರನಿಗೆ ಹೇಳಿದ, 'ಮಗೂ, ಜಾಲಿ, ನಮ್ಮ ಕುಟೀರಕ್ಕೆ ಬ್ರಾಹ್ಮಣರೊಬ್ಬರು ಬರುತ್ತಿದ್ದಾರೆ. ಅವರನ್ನು ಸ್ವಾಗತಿಸು, ಅವರ ವಸ್ತುಗಳನ್ನು ಎತ್ತಿಕೊಂಡು ಬಾ'. ಜಾಲಿಕುಮಾರ, 'ಅಪ್ಪಾ, ಆ ವಯಸ್ಸಾದ ಬ್ರಾಹ್ಮಣರು ನನಗೆ ಯಾಚಕರಂತೆ ಕಾಣುತ್ತಾರೆ. ಅವರಿಗೆ ಏನೋ ಅಪೇಕ್ಷೆ ಇರಬೇಕು' ಎಂದು ಅತಿಥಿಯನ್ನು ಸ್ವಾಗತಿಸಲು ಮುಂದಾದ. ಬ್ರಾಹ್ಮಣನ ಹತ್ತಿರ ಹೋಗಿ, ಅವನಿಗೆ ನಮಸ್ಕಾರ ಮಾಡಿ, ಆತ ಹೊತ್ತುಕೊಂಡಿದ್ದ ಸಾಮಾನುಗಳನ್ನು ಎತ್ತಿಕೊಳ್ಳಲು ಹೋದ. ಈ ಬಾಲಕನನ್ನು ನೋಡುತ್ತಲೇ, ಈತ ವೆಸ್ಸಂತರನ ಮಗ ಜಾಲಿಕುಮಾರನಿರಬೇಕು ಎಂದು ಬ್ರಾಹ್ಮಣ ತಿಳಿದ. ಮುಂದೆ ದಾಸನಾಗುವ ಹುಡುಗನ ಹತ್ತಿರ ಈಗಿನಿಂದಲೇ ಕಠಿಣವಾಗಿರಬೇಕು ಎಂದುಕೊಂಡು, 'ಹೇ, ದೂರ ಇರು. ನನ್ನನ್ನು ಮುಟ್ಟಬೇಡ ಮೂರ್ಖಾ' ಎಂದು ಅಬ್ಬರಿಸಿದ. ಹುಡುಗ ಗಾಬರಿಯಾಗಿ, ಯಾಕೋ ಅತಿಥಿ ಕಠೋರವಾಗಿದ್ದಾನೆ ಎಂದು ದೂರ ಸರಿದ. ಬ್ರಾಹ್ಮಣನನ್ನು ಸೂಕ್ಷ್ಮವಾಗಿ ಗಮನಿಸಿದ ಬಾಲಕನಿಗೆ, ಅವನ ದೇಹದಲ್ಲಿ ಹದಿನೆಂಟು ದೋಷಗಳು ಕಂಡವು. ಈತನೊಬ್ಬ ಅಪಾಯಕಾರಿ ಮನುಷ್ಯ ಎಂಬುದು ಖಾತ್ರಿಯಾಯಿತು. ವೆಸ್ಸಂತರ ಮಾತ್ರ ತನ್ನ ಎಂದಿನ ಸಮಸ್ಥಿತಿಯಲ್ಲಿ, ಮುಗುಳುನಗೆ ನಗುತ್ತ, ಬ್ರಾಹ್ಮಣನನ್ನು ಆದರಿಸಿ, ಕುಶಲವನ್ನು ಕೇಳಿದ. ಅವನಿಗೆ ಕಾಲು ತೊಳೆಯಲು ನೀರು ಕೊಟ್ಟು, ಅವನ ಮುಂದೆ ಒಳ್ಳೆಯ ಹಣ್ಣುಗಳನ್ನಿಟ್ಟು ಸ್ವೀಕರಿಸುವಂತೆ ಬೇಡಿದ.

ಮತ್ತೆ ಹೇಳಿದ, 'ನಾವು ಈ ಕಾಡಿಗೆ ಬಂದು ಏಳು ತಿಂಗಳಾದವು. ಇದುವರೆಗೂ ಮತ್ತೊಬ್ಬ ಮನುಷ್ಯನ ಮುಖ ಕಂಡಿಲ್ಲ. ಬಿಲ್ವದಂಡ, ಅಗ್ನಿಹೋಮದ ವಸ್ತುಗಳು, ಕಮಂಡಲು ಹಿಡಿದ ಬ್ರಾಹ್ಮಣನ ದರ್ಶನವಾದದ್ದು ಇದೇ ಮೊದಲು'. ಮನಸ್ಸಿನಲ್ಲಿಯೇ, 'ಈ ಬ್ರಾಹ್ಮಣ ಭಯಂಕರವಾದ ಕಾಡಿಗೆ ವ್ಯರ್ಥವಾಗಿ ಬಂದಿರುವುದು ಸಾಧ್ಯವಿಲ್ಲ. ಆದ್ದರಿಂದ ನಾನೇ ಅವನ ಅಪೇಕ್ಷೆಯನ್ನು ಬೇಗನೇ ಕೇಳಿಬಿಡುತ್ತೇನೆ' ಎಂದುಕೊಂಡ. ನಂತರ, 'ಹೇ ಬ್ರಾಹ್ಮಣ, ನೀನು ಯಾವ ಉದ್ದೇಶದಿಂದ ಈ ಭಯಂಕರವಾದ ಕಾಡಿಗೆ ಬಂದಿದ್ದೀ? ನಿನ್ನ ಮನಸ್ಸಿನಲ್ಲಿ ಯಾವ ಅಪೇಕ್ಷೆ ಇದೆಯೋ, ಅದನ್ನು ಸ್ಪಷ್ಟವಾಗಿ ಹೇಳಿಬಿಡು' ಎಂದ. ಬ್ರಾಹ್ಮಣ ಸಂತೋಷದಿಂದ ಹೇಳಿದ, 'ಹೇ ಮಹಾತ್ಮ, ತುಂಬಿದ ನದಿ ಎಂದಿಗೂ ಸೊರಗುವುದಿಲ್ಲ. ಅದು ಎಂದಿಗೂ ನೀಡುವುದರಲ್ಲೇ ಸಂತೋಷಪಡುವಂಥದ್ದು. ನೀನೂ ಹಾಗೆಯೇ. ನಾನು ಇಲ್ಲಿಗೆ ಬಂದದ್ದೇ ನಿನ್ನನ್ನು ಯಾಚಿಸಲು. ನನ್ನ ಹೆಂಡತಿಗೆ ದಾಸರು ಬೇಕಾಗಿದ್ದಾರೆ. ನಿನ್ನ ಮಕ್ಕಳನ್ನು ನನಗೆ ದಾಸರನ್ನಾಗಿ ಕೊಡು'. ಇದನ್ನು ಕೇಳಿ ವೆಸ್ಸಂತರ ಬೋಧಿಸತ್ವನ ಮುಖದಲ್ಲಿ ಯಾವ ಬದಲಾವಣೆಯೂ ಕಾಣಲಿಲ್ಲ. 'ನಾನು ದುಃಖಪಡುವುದಿಲ್ಲ. ದಾನ ಕೊಡುವುದು ನನ್ನ ಕರ್ತವ್ಯ. ಇನ್ನು ಮೇಲೆ ನೀನು ಈ ಮಕ್ಕಳ ಒಡೆಯ. ಇವರನ್ನು ಕರೆದುಕೊಂಡು ಹೋಗು. ನನ್ನ ಪತ್ನಿ ಮಾದ್ರಿದೇವಿ ಹೂವು, ಹಣ್ಣು ತರಲು ಹೊರಗೆ ಹೋಗಿದ್ದಾಳೆ. ಸಂಜೆಗೆ ಮರಳಿ ಬರುತ್ತಾಳೆ. ನೀನು ಇಂದು ರಾತ್ರಿ ತಂಗಿದ್ದು, ಬೆಳಿಗ್ಗೆ ಮಕ್ಕಳನ್ನು ಕರೆದುಕೊಂಡು ಹೋಗಬಹುದು. ಆಕೆ ಮಕ್ಕಳಿಗೆ ಕೊನೆಯ ಬಾರಿ ಸ್ನಾನಮಾಡಿಸಿ, ಮಾಲೆ ತೊಡಿಸಿ, ಅಲಂಕರಿಸಿ ಕಳುಹಿಸುತ್ತಾಳೆ' ಎಂದು ವಿನಂತಿಸಿಕೊಂಡ. ❖


ಪದಬಂಧ 4670 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮನುಷ್ಯ ಲೋಕವಿದು (2)
3.ವಿಜ್ಞಾನಿಯೊಡನೆ ಬಲ್ಲವನಿದ್ದಾನೆ (2)
5.ಅದೇ ತಾನೆ ತೆಗೆದ ಬೆಣ್ಣೆ (5)
6.ಗಡಕ್ಕನೆ ಬಂದೆರಗಿದ ಗಂಡು ಕೋತಿ (3)
7.ಉತ್ತರದವರ ಸ್ನಾನ (3)
8.ಅಳಿಯತನಕ್ಕೆ ವಹಿಸಿಕೊಂಡಿರುವ ಮಧ್ಯಸ್ತಿಕೆ (5)
9.ನಿಧಾನವಾಗಿ ರೂಢಿಸಿಕೊಂಡ ರೀತಿ (3)
10.ಈತ ದೇವರನ್ನೇ ನಂಬದವನು (3)
13.ಪಾಕಕ್ಕೆ ಸಿಕ್ಕಿರುವ ಉಡುಗೊರೆ (5)
14.ನೆನಪಲ್ಲೇ ಇರುವ ಕಾರಣ! (2)
15.ಮಚ್ಚೆ ಉಳ್ಳವ ಹಿಡಿದಿರುವ ಕಡಿಗತ್ತಿ (2)

ಮೇಲಿಂದ ಕೆಳಕ್ಕೆ

1. ಮಲಗಿದ್ದವನಿಗೆ ಬಂದಿರುವುದು ಅಪಸ್ಮಾರವೇ? (4)
2.ಜಾಗದಲ್ಲಿ ನಿಂತಾಗ ಕಾಣಿಸಿದ ನವಿಲಿನ ಕುಣಿತ (3)
4.ಸ್ವಲ್ಪವೂ ಪ್ರಯೋಜನಕ್ಕೆ ಬಾರದುದು (4)
5.ದನದ ಬಳಿ ಕಾಣುತ್ತಿರುವುದು ಅಶ್ವದ ಮೊಗ (5)
7.ಈ ಲೀಡರ್,ಪಕ್ಕಾ ಕನ್ನಡಿಗ (5)
9.ಜ್ಞಾಪಕದಿಂದ ಮಾಡಿಕೊಡಿರುವ ಮನವಿ (4)
11.ಅಕ್ಕಿ ತೊಳೆದ ನೀರು (4)
12.ಋಷಿ ಹೀಗೆ ಬಂದಿದೆ (3)



4669ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಿತಾಪ 3.ಕೂಚಂಭಟ್ಟ 4.ಮಾರ್ಮಿಕ 5.ಅವಗುಣ 7.ಷರಬತ್ತು 9.ಮತದಾನ 10.ತರಗತಿ 12.ವಕ್ತಾರ 14.ಚಾತುರ್ಮಾಸ 15.ಮಧುಚಂದ್ರ

ಮೇಲಿಂದ ಕೆಳಕ್ಕೆ: 1.ಪದ್ಯ 2.ಪರಿಮಾಣ 3.ಕೂಲಂಕಷ 6.ವರಾತ 8.ಬಳಗ 10.ನವಮಾಸ 11.ತರತಮ 13.ಮಂದ್ರ

ಸುಡೊಕು 5056

	1				5	4		9
4		7	6				5	
	6			4	8	1		
	2				7			6
5		1		6			2	
			5					7
	3	9				6		
6			8		4		3	1
		4		3		2		5


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5055 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,851
ಇಂದಿನ ಅಂತ್ಯ	15,820
▼	31
ದಿನದ ಗರಿಷ್ಠ	15,834

ವಿನಿಮಯ ದರ

$ ಡಾಲರ್	74.42
£ ಪೌಂಡ್	102.64
€ ಯುರೊ	87.78
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹500

ಉದುರುತ್ತಿರುವ ಕಾಫಿ ಕಾಯಿ, ಕಾಫಿ ಬೆಳೆಗಾರರು ಕಂಗಾಲು

ತೇವಾಂಶ ಹೆಚ್ಚಳ: ಕಾಫಿ ಫಸಲು ನಷ್ಟದ ಭೀತಿ

• ಆದಿತ್ಯ ಕೆ.ಎ.

ಮಡಿಕೇರಿ: ಕೊಡಗಿನಲ್ಲಿ ಕಳೆದ ವಾರ ಸುರಿದ ನಿರಂತರ ಮಳೆಯಿಂದ ತೇವಾಂಶ ಹೆಚ್ಚಿದ್ದು ಕಾಫಿ ಕಾಯಿಗಳು ಹಣ್ಣಾಗುವ ಮೊದಲೇ ಉದುರುತ್ತಿವೆ. ಈ ವರ್ಷವೂ ಕಾಫಿ ಬೆಳೆಗಾರರು ನಷ್ಟದ ಭೀತಿಯಲ್ಲಿದ್ದಾರೆ.

ಕಳೆದ ವರ್ಷ ಅರೇಬಿಕಾ, ರೋಬಸ್ಟಾ ಕಾಫಿ ಧಾರಣೆ ಏರಿಕೆಯಾಗಿ ಅಲ್ಪ ಸ್ವಲ್ಪ ಆದಾಯ ಲಭಿಸಿತ್ತು. ಆದರೆ, ಈ ವರ್ಷ ಸುರಿಯುತ್ತಿರುವ ವಿಪರೀತ ಮಳೆಯಿಂದ, ಕಾಫಿ ಕೊಯ್ಲು ವೇಳೆಗೆ ಫಸಲೇ ಇಲ್ಲವಾಗುವ ಆತಂಕ ಮೂಡಿದೆ. ಭಾಗಮಂಡಲ, ಚೇರಂಬಾಣೆ, ಬಕ್ಕ, ಕೊಳಕೇರಿ, ಶ್ರೀಮಂಗಲ, ಶಾಂತಳ್ಳಿ, ಗರ್ವಾಲೆ, ಸೂರ್ಲಬ್ಬಿ, ಪೊನ್ನಂಪೇಟೆ, ಮಾದಾಪುರ ಭಾಗದಲ್ಲಿ ವಾಡಿಕೆಗೂ ಹೆಚ್ಚು ಮಳೆಯಾಗಿದೆ. ಕಾವೇರಿ, ಲಕ್ಷ್ಮಣತೀರ್ಥ ನದಿಯ ತಟದ ತೋಟಗಳಲ್ಲಿ ನೀರು ಸಂಗ್ರಹಗೊಂಡಿದ್ದು, ಗಿಡಗಳು ಕೊಳೆಯುವ ಸನ್ನಿವೇಶವೂ ಎದುರಾಗಲಿದೆ. ಮುಂದೆಯೂ ಮಳೆ ಬಂದರೆ ಕಾಳು ಮೆಣಸಿನ ಬಳ್ಳಿಗಳೂ ಕೊಳೆರೋಗಕ್ಕೆ ತುತ್ತಾಗಲಿವೆ' ಎಂದು ಚೇರಂಬಾಣೆಯ ಮನು ಸೋಮಯ್ಯ ವಿಷಾದಿಸಿದರು.

> ಮಳೆಯಿಂದ ಆಗಿರುವ ಬೆಳೆ ನಷ್ಟದ ಕುರಿತು ಅಂದಾಜಿಸಲು ಕಾಫಿ ತೋಟಗಳಲ್ಲಿ ಸಮೀಕ್ಷೆ ನಡೆಸಲಾಗುವುದು–
> **ಗೋಪಾಲನಾಯ್ಕ,** ಹಿರಿಯ ಸಂಪರ್ಕಾಧಿಕಾರಿ, ಕಾಫಿ ಮಂಡಳಿ

‘ಬಿಳಿಕಾಂಡ ರೋಗ, ಕಾಡಾನೆ ಹಾವಳಿ ನಡುವೆಯೂ ಕೊಡಗಿನಲ್ಲಿ ಕಾಫಿ ಬೆಳೆಯುವುದು ಸವಾಲು. ಈ ನಡುವೆ ನಾಲ್ಕು ವರ್ಷಗಳಿಂದ ಮಳೆ ಕಾಡುತ್ತಿದೆ. ನವೆಂಬರ್, ಡಿಸೆಂಬರ್‌ಗೆ ಕಾಫಿ ಕೊಯ್ಲಿ ಬರುತ್ತದೆ. ಇದೇ ಪರಿಸ್ಥಿತಿ ಮುಂದುವರಿದರೆ ಅಲ್ಲಿಯ ತನಕ ಫಸಲನ್ನು ಕಾಪಾಡಿಕೊಳ್ಳುವುದು ಕಷ್ಟ' ಎಂದು ನೋವು ತೋಡಿಕೊಂಡರು.

‘ಹಿಂದೆಲ್ಲಾ ಮೂರು ತಿಂಗಳು ನಿಧಾನವಾಗಿ ಮಳೆ ಸುರಿಯುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಒಮ್ಮೆಲೇ ಮಳೆ ಸುರಿದು, ಜಲಪ್ರಳಯವೇ ಸೃಷ್ಟಿಯಾಗುತ್ತಿದೆ. ಒಂದು ತಿಂಗಳು ಸುರಿಯಬೇಕಿದ್ದ ಮಳೆಯು ಕೇವಲ ಐದೇ ದಿನ ಸುರಿದು, ಕಣ್ಣೀರು ಉಳಿಸಿ ಹೋಗುತ್ತಿದೆ. ಬಿರುಗಾಳಿಗೆ ತೋಟದಲ್ಲಿ ಸಾವಿರಾರು ಮರಗಳು ಬಿದ್ದಿವೆ. ಸಿಲ್ವರ್ ಮರ ಹಾಗೂ ಕಾಡು ಜಾತಿಯ ಮರಗಳನ್ನು ಮಾರಾಟ ಮಾಡಿ ಮನೆ ನಿರ್ಮಾಣ, ಮದುವೆ ಕಾರ್ಯವನ್ನು ರೈತರು ನಡೆಸುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಮುಂಗಾರು ಮಳೆ, ಬೆಳೆಗಾರರ ಬದುಕಿನ ಚಿತ್ರಣವನ್ನೇ ಬದಲಾಯಿಸಿದೆ' ಎಂದು ಸೋಮವಾರಪೇಟೆಯ ಕೃಷಿಕ ಮನೋಜ್ ಹೇಳುತ್ತಾರೆ.



ಕೊಡಗು ಜಿಲ್ಲೆಯ ನಾಪೋಕ್ಲು ಭಾಗದ ತೋಟದಲ್ಲಿ ಕಾಫಿ ಕಾಯಿಗಳು ಉದುರಿವೆ

‘ಜಿಲ್ಲೆಯಲ್ಲಿ ಸುರಿದ ಮಳೆಯಿಂದ ಇದುವರೆಗೆ 47 ಮನೆಗಳು ಕುಸಿದಿದೆ. 6 ಜಾನುವಾರು ಸಾವನ್ನಪ್ಪಿವೆ. ವೃದ್ಧರೊಬ್ಬರು ಹೊಳೆಯಲ್ಲಿ ಕೊಚ್ಚಿಕೊಂಡು ಹೋಗಿ ಮೃತಪಟ್ಟಿದ್ದಾರೆ' ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ರಾಜು ಮೊಗವೀರ ತಿಳಿಸಿದ್ದಾರೆ. ‘ಮಳೆಯಿಂದ ಅಲ್ಲಲ್ಲಿ ರಸ್ತೆಗಳೂ ಹಾಳಾಗಿವೆ. ಬೆಳೆ ಹಾನಿ ಸಮೀಕ್ಷೆ ನಡೆಯುತ್ತಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ವಿಜಯ್ ಮಲ್ಯ ದಿವಾಳಿ': ಬ್ರಿಟನ್ ನ್ಯಾಯಾಲಯ

ಲಂಡನ್ (ಪಿಟಿಐ): ಉದ್ಯಮಿ ವಿಜಯ್ ಮಲ್ಯ ಅವರು ದಿವಾಳಿಯಾಗಿದ್ದಾರೆ ಎಂದು ಬ್ರಿಟನ್ನಿನ ನ್ಯಾಯಾಲಯವೊಂದು ಸೋಮವಾರ ಘೋಷಿಸಿದೆ.



ವಿಜಯ್ ಮಲ್ಯ

ಇದು, ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ನೇತೃತ್ವದ ಬ್ಯಾಂಕ್‌ಗಳ ಒಕ್ಕೂಟವು ತನಗೆ ಮಲ್ಯ ಅವರಿಂದ ಬರಬೇಕಿರುವ ಬಾಕಿ ಮೊತ್ತವನ್ನು ವಸೂಲು ಮಾಡಲು ವಿಶ್ವದಾದ್ಯಂತ ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ವಿಚಾರದಲ್ಲಿ ಮುಂದಡಿ ಇರಿಸಲು ನೆರವಾಗಲಿದೆ.

ಮಲ್ಯ ಅವರು ಬ್ರಿಟನ್ನಿನಲ್ಲಿ ಇದ್ದಾರೆ.

‘ಮಲ್ಯ ಅವರು ಸಾಲವನ್ನು ಅರ್ಜಿದಾರರಿಗೆ (ಬ್ಯಾಂಕ್‌ಗಳ ಒಕ್ಕೂಟ) ಪೂರ್ತಿಯಾಗಿ, ನಿಗದಿತ ಅವಧಿಯೊಳಗೆ ಹಿಂದಿರುಗಿಸುತ್ತಾರೆ ಎಂದು ಹೇಳಲು ಸಾಕಷ್ಟು ಆಧಾರಗಳಿಲ್ಲ' ಎಂದು ನ್ಯಾಯಾಧೀಶರು ಆದೇಶದಲ್ಲಿ ಹೇಳಿದ್ದಾರೆ.

‘ದಿವಾಳಿ' ಎಂದು ಘೋಷಿಸಿದ ಆದೇಶವನ್ನು ಪ್ರಶ್ನಿಸಲು ಅವಕಾಶ ಕೊಡಬೇಕು ಎಂಬ ಅರ್ಜಿಯನ್ನು ಮಲ್ಯ ಸಲ್ಲಿಸಿದರು. ಆದರೆ, ಮೇಲ್ಮನವಿಯು ಯಶಸ್ಸು ಕಾಣುವ ಸಾಧ್ಯತೆ ಇಲ್ಲ ಎಂದು ನ್ಯಾಯಾಧೀಶರು ಈ ಅರ್ಜಿಯನ್ನು ತಿರಸ್ಕರಿಸಿದರು.

‘ಗಣಿ ಉದ್ಯಮದಲ್ಲಿ ಭಾರತಕ್ಕೆ ಪ್ರಮುಖ ಸ್ಥಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಟ್ರೇಲಿಯಾ, ಚೀನಾ, ಭಾರತ ಮತ್ತು ಬ್ರೆಜಿಲ್ ದೇಶಗಳು ವಿಶ್ವದ ಗಣಿ ಉದ್ಯಮದಲ್ಲಿ ಮುಂಚೂಣಿ ಸ್ಥಾನ ಹೊಂದಿವೆ ಎಂದು ಎನ್‌ಎಂಡಿಸಿ ಲಿಮಿಟೆಡ್‌ನ ಉತ್ಪಾದನಾ ವಿಭಾಗದ ನಿರ್ದೇಶಕ ಪಿ.ಕೆ. ಸತ್ಪತಿ ಹೇಳಿದ್ದಾರೆ.



ಪಿ.ಕೆ. ಸತ್ಪತಿ

ಮಧ್ಯಪ್ರದೇಶದ ಸತನಾದಲ್ಲಿನ ಎಕೆಎಸ್ ವಿಶ್ವವಿದ್ಯಾಲಯದ ಗಣಿ ಎಂಜಿನಿಯರಿಂಗ್ ವಿಭಾಗ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ಕರ್ನಾಟಕ, ಒಡಿಶಾ, ಛತ್ತೀಸಗಡ ಮತ್ತು ಜಾರ್ಖಂಡ್ ರಾಜ್ಯಗಳು ಭಾರತದಲ್ಲಿ ಗಣಿ ಉದ್ಯಮದಲ್ಲಿ ಪ್ರಮುಖ ಸ್ಥಾನ ಹೊಂದಿವೆ' ಎಂದು ಹೇಳಿದ್ದಾಗಿ ಎನ್‌ಎಂಡಿಸಿ ಪ್ರಕಟಣೆ ತಿಳಿಸಿದೆ.

‘ಖನಿಜಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಯ ಜವಾಬ್ದಾರಿ ಕೂಡ ಗಣಿ ಉದ್ಯಮದ ಮೇಲಿದೆ' ಎಂದು ಹೇಳಿದ್ದಾರೆ.

ಷೇರುಗಳ ವರ್ಗೀಕರಣ ಹೇಗಾಗುತ್ತದೆ ಗೊತ್ತೇ?

ಷೇರು ಮಾತು
ಶರತ್ ಎಂ.ಎಸ್.



ದಿನಸಿ ಅಂಗಡಿಗಳ ಪೈಕಿ ಸಣ್ಣ ಕಿರಾಣಿ ಅಂಗಡಿ, ಮಧ್ಯಮ ಪ್ರಮಾಣದ ಡಿಪಾರ್ಟ್‌ಮೆಂಟಲ್ ಸ್ಟೋರ್, ಎಲ್ಲ ವಸ್ತುಗಳು ಒಂದೆಡೆ ಸಿಗುವ ದೊಡ್ಡ ಸೂಪರ್ ಮಾರ್ಕೆಟ್ ಎಂಬ ಮೂರು ವರ್ಗೀಕರಣವನ್ನು ನಾವು ನೋಡಬಹುದು. ಷೇರು ಮಾರುಕಟ್ಟೆಯಲ್ಲೂ ಹೀಗೆ ಸಣ್ಣ, ಮಧ್ಯಮ, ದೊಡ್ಡ ಮಟ್ಟದ ಕಂಪನಿಗಳನ್ನು ಕಾಣಬಹುದು. ಅವುಗಳ ವರ್ಗೀಕರಣ ಹೇಗಾಗುತ್ತದೆ ಎನ್ನುವುದನ್ನು ತಿಳಿಯೋಣ.

ಷೇರು ಮಾರುಕಟ್ಟೆಯಲ್ಲಿ ಲಾರ್ಜ್, ಮಿಡ್ ಮತ್ತು ಸ್ಮಾಲ್ ಕ್ಯಾಪ್ ಷೇರುಗಳ ಬಗ್ಗೆ ಸಾಮಾನ್ಯವಾಗಿ ನೀವು ಕೇಳಿಯೇ ಇರುತ್ತೀರಿ. ಗರಿಷ್ಠ ಮಾರುಕಟ್ಟೆ ಮೌಲ್ಯ ಹೊಂದಿರುವ ಮೊದಲ ನೂರು ಅಗ್ರಮಾನ್ಯ ಕಂಪನಿಗಳು ಲಾರ್ಜ್ ಕ್ಯಾಪ್. ನಂತರದ 150 ಕಂಪನಿಗಳು ಮಿಡ್ ಕ್ಯಾಪ್. ಇನ್ನುಳಿದವು ಸ್ಮಾಲ್ ಕ್ಯಾಪ್ ಕಂಪನಿಗಳು ಎಂದು ಕರೆಸಿಕೊಳ್ಳುತ್ತವೆ. ಸರಳವಾಗಿ ಹೇಳುವುದಾದರೆ ಮಾರುಕಟ್ಟೆಯಲ್ಲಿ ದೊಡ್ಡ ಪ್ರಮಾಣದ ಕಂಪನಿ ಲಾರ್ಜ್ ಕ್ಯಾಪ್, ಮಧ್ಯಮ ಪ್ರಮಾಣದ ಕಂಪನಿ ಮಿಡ್ ಕ್ಯಾಪ್ ಮತ್ತು ಸಣ್ಣ ಪ್ರಮಾಣದ ಕಂಪನಿಯನ್ನು ಸ್ಮಾಲ್ ಕ್ಯಾಪ್ ಎನ್ನಬಹುದು.

ವರ್ಗೀಕರಣ: ಷೇರು ಮಾರುಕಟ್ಟೆಯಲ್ಲಿ ಕಂಪನಿಗಳ ಮೌಲ್ಯ ಒಂದೇ ರೀತಿ ಇರುವುದಿಲ್ಲ. ಇಂದು ಹೆಚ್ಚು ಮೌಲ್ಯ ಹೊಂದಿರುವ ಕಂಪನಿ ನಾಳೆ ಕುಸಿಯಬಹುದು, ಕಡಿಮೆ ಮೌಲ್ಯ ಹೊಂದಿರುವ ಕಂಪನಿ ಏರಿಕೆ ಕಾಣಬಹುದು. ಆದರೆ ಪ್ರತಿ ಬಾರಿ ಕಂಪನಿಯ ಮೌಲ್ಯ ಏರಿಳಿತ ಕಂಡಂತೆಲ್ಲ ಷೇರುಗಳನ್ನು ಲಾರ್ಜ್, ಮಿಡ್ ಮತ್ತು ಸ್ಮಾಲ್ ಕ್ಯಾಪ್ ಎಂದು ವರ್ಗೀಕರಿಸುವುದಿಲ್ಲ. ಪ್ರತಿ ಆರು ತಿಂಗಳಿಗೊಮ್ಮೆ ಮಾತ್ರ ಷೇರುಗಳ ವರ್ಗೀಕರಣ ಪ್ರಕ್ರಿಯೆ ನಡೆಯುತ್ತದೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಮುಂಬೈ ಷೇರುಪೇಟೆ (ಬಿಎಸ್‌ಇ), ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ) ಮತ್ತು ಮೆಟ್ರೊಪಾಲಿಟನ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ (ಎಂಎಸ್‌ಇಐ) ಸಹಯೋಗದಲ್ಲಿ ಭಾರತೀಯ ಮ್ಯೂಚುವಲ್ ಫಂಡ್‌ಗಳ ಒಕ್ಕೂಟವು (ಎಎಂಎಫ್‌ಐ) ಕಂಪನಿಗಳ ರ‍್ಯಾಂಕಿಂಗ್ ಪಟ್ಟಿ ಪ್ರಕಟಿಸುತ್ತದೆ.

ಕಂಪನಿಗಳ ಆರು ತಿಂಗಳ ಸರಾಸರಿ ಮೌಲ್ಯವನ್ನು ಗಣನೆಗೆ ತೆಗೆದುಕೊಂಡು ಈ ವರ್ಗೀಕರಣ ಮಾಡಲಾಗುತ್ತದೆ. ಪ್ರತಿ ವರ್ಷದ ಜೂನ್ 30 ಮತ್ತು ಡಿಸೆಂಬರ್ 31ರಂದು ರ‍್ಯಾಂಕಿಂಗ್ ಪಟ್ಟಿ ಪ್ರಕಟವಾಗುತ್ತದೆ. ಉದಾಹರಣೆಗೆ, ಪಟ್ಟಿಯಲ್ಲಿ ಕಂಪನಿಯೊಂದರ ಷೇರು ಸ್ಮಾಲ್ ಕ್ಯಾಪ್ ಎಂದು ವರ್ಗೀಕರಣಗೊಂಡರೆ ಮಾರುಕಟ್ಟೆ ಮೌಲ್ಯ ಹೆಚ್ಚಳವಾದರೂ ಮುಂದಿನ ಪರಿಶೀಲನೆ ತನಕ ಅದು ಸ್ಮಾಲ್ ಕ್ಯಾಪ್ ಆಗಿಯೇ ಉಳಿದುಕೊಳ್ಳುತ್ತದೆ.

ವರ್ಗೀಕರಣ ಮತ್ತು ಮಾರುಕಟ್ಟೆ ಪರಿಣಾಮ: ಮಿಡ್ ಕ್ಯಾಪ್ ವಲಯದಲ್ಲಿದ್ದ ಷೇರುಗಳು ಲಾರ್ಜ್ ಕ್ಯಾಪ್ ಆದಾಗ ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳು ಆ ಷೇರುಗಳ ಖರೀದಿಗೆ ಮುಂದಾಗಬಹುದು. ಸ್ಮಾಲ್ ಕ್ಯಾಪ್ ಕಂಪನಿಗಳು ಮಿಡ್ ಕ್ಯಾಪ್ ಕಂಪನಿಗಳಾದಾಗ ಮಿಡ್ ಕ್ಯಾಪ್ ಮತ್ತು ಫ್ಲೆಕ್ಸಿ ಕ್ಯಾಪ್ ಮ್ಯೂಚುವಲ್ ಫಂಡ್‌ಗಳು ಅವುಗಳ ಖರೀದಿಗೆ ಮುಂದಾಗಬಹುದು. ನಿರ್ದಿಷ್ಟ ಕಂಪನಿಯ ಷೇರುಗಳು ಮೌಲ್ಯ ಹೆಚ್ಚಿಸಿಕೊಂಡಿವೆ ಎಂದರೆ, ಸಾಮಾನ್ಯವಾಗಿ, ಆ ಕಂಪನಿ ಉತ್ತಮ ಸಾಧನೆ ತೋರಿದೆ ಎಂದರ್ಥ. ಆದರೆ ನೆನಪಿರಲಿ ಸ್ಮಾಲ್ ಕ್ಯಾಪ್ ಷೇರು ಮಿಡ್ ಕ್ಯಾಪ್ ಆಗಿದೆ ಎಂದಾಕ್ಷಣ ಅದನ್ನು ನೀವು ಕಣ್ಣು ಮುಚ್ಚಿ ಖರೀದಿಸಬಹುದು ಎಂದಲ್ಲ. ಅಳೆದು–ತೂಗಿ, ಕಂಪನಿಯ ಬಗ್ಗೆ ಅಧ್ಯಯನ ಮಾಡಿ ಸರಿ ಅನಿಸಿದರೆ ಮಾತ್ರ ಹೂಡಿಕೆಯ ಚಿಂತನೆ ಮಾಡಬೇಕು. •

ಸರ್ಕಾರಿ ನೌಕರರ ತುಟ್ಟಿಭತ್ಯೆ ಶೇ 10.25ರಷ್ಟು ಹೆಚ್ಚಿಸಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ಜುಲೈ 1ರಿಂದ ಅನ್ವಯವಾಗುವಂತೆ ರಾಜ್ಯ ಸರ್ಕಾರಿ ನೌಕರರಿಗೆ ಮೂಲವೇತನದ ಶೇ 10.25ರಷ್ಟು ತುಟ್ಟಿಭತ್ಯೆ ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಿದೆ. ಸದ್ಯ ಶೇ 11.25ರಷ್ಟಿದ್ದು, ಈ ಹೆಚ್ಚಳದಿಂದ ಒಟ್ಟು ಶೇ 21.50ರಷ್ಟು ತುಟ್ಟಿಭತ್ಯೆ ಸಿಗಲಿದೆ.

ಕೋವಿಡ್ ಕಾರಣಕ್ಕೆ 2020ರ ಜನವರಿ, ಜುಲೈ ಮತ್ತು 2021ರ ಜನವರಿಯಲ್ಲಿ ನೀಡಬೇಕಾಗಿದ್ದ ಮೂರು ತುಟ್ಟಿಭತ್ಯೆಗಳನ್ನು ಸರ್ಕಾರ ತಡೆ ಹಿಡಿದಿತ್ತು. ಈ ಹೆಚ್ಚುವರಿ ತುಟ್ಟಿಭತ್ಯೆ ಕಂತುಗಳನ್ನು ಸೇರಿಸಿ ಸರ್ಕಾರ ಆದೇಶ ಮಾಡಿದೆ. ಇದರಿಂದಾಗಿ ಆರು ಲಕ್ಷ ನೌಕರರು, 4.50 ಲಕ್ಷ ಪಿಂಚಣಿದಾರರು ಹಾಗೂ ನಿಗಮ- ಮಂಡಳಿಗಳ 3 ಲಕ್ಷ ನೌಕರರಿಗೆ ಅನುಕೂಲವಾಗಲಿದೆ.

ಕೇಂದ್ರ ಸರ್ಕಾರ ತನ್ನ ನೌಕರರಿಗೆ ಶೇ 11ರಷ್ಟು ತುಟ್ಟಿಭತ್ಯೆ ಹೆಚ್ಚಿಸಿ ಜುಲೈ 20ರಂದು ಆದೇಶ ಹೊರಡಿಸಿತ್ತು. ಆ ಬೆನ್ನಲ್ಲೇ, ಮುಖ್ಯಮಂತ್ರಿಯನ್ನು ಭೇಟಿ ಮಾಡಿದ್ದ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ನೇತೃತ್ವದ ನಿಯೋಗ, ರಾಜ್ಯ ಸರ್ಕಾರಿ ನೌಕರರ ತುಟ್ಟಿಭತ್ಯೆಯನ್ನೂ ಹೆಚ್ಚಿಸುವಂತೆ ಮನವಿ ಮಾಡಿತ್ತು. ಈ ಮನವಿಯನ್ನು ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅನುಮೋದಿಸಿ, ಕೂಡಲೇ ಜಾರಿ ಮಾಡುವಂತೆ ಆರ್ಥಿಕ ಇಲಾಖೆಗೆ ಸೂಚನೆ ನೀಡಿದ್ದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	385
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-43000
ಹಳತು	42500-52000
ಚಿತ್ರದುರ್ಗ	
ಆಪಿ	41739-42189
ಬೆಟ್ಟೆ	35619-36059
ಕೆಂಪುಗೋಟು	29609-30010
ರಾಶಿ	41229-41669
ಕುಮಟ	
ಚಿಪ್ಪು	31109-33509
ಕೋಕ	20169-31019
ಹಳೆಚಾಲಿ	41099-44099
ಹೊಸಚಾಲಿ	37509-40109
ಪುತ್ತೂರು	
ಕೋಕ	9500-25000
ಹೊಸತು	30000-43000
ಯಲ್ಲಾಪುರ	
ಬಿಳಿಗೋಟು	28899-36699
ಕೋಕ	22412-30216
ಚಾಲಿ	37099-39819
ಕೆಂಪುಗೋಟು	30211-32299
ರಾಶಿ	39880-45899
ತಟ್ಟಿಬೆಟ್ಟೆ	34299-38299
ಶಿರಸಿ	
ಬೆಟ್ಟೆ	26319-38899
ಬಿಳಿಗೋಟು	24001-34727
ಚಾಲಿ	33069-39698
ರಾಶಿ	37009-41699
ಶಿವಮೊಗ್ಗ (ಎಪಿಎಂಸಿ)	
ಬೆಟ್ಟೆ	43019-46000
ಗೊರಬಲು	13589-34659
ರಾಶಿ	36799-42299
ಸರಕು	47009-74396
ಸಾಗರ	
ಬಿಳಿಗೋಟು	18519-34299
ಕೋಕ	20199-36869
ಚಾಲಿ	32699-37099
ಕೆಂಪುಗೋಟು	28100-34699
ರಾಶಿ	34299-42899
ಸಿಪ್ಪೆಗೋಟು	10100-21299
ರಾಮನಗರ ರೇಷ್ಮೆ	
ಮಿಶ್ರತಳಿ	218-432
ದ್ವಿತಳಿ	249-558

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ		ಹಾಸನ	
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13400	12500	12500	189 ಸೆಂಟ್ಸ್
ಎಸಿ	5665	4900	4900	
ಆರ್‌ಪಿ	6450	5900	6050	
ಆರ್‌ಸಿ	3430	3500	3500	1899 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

26-7-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9150-9200
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1490)
ಒಂದು ವಾರದ ಡೆಲಿವರಿ	1485 (1485)
ಸೋಯಾ ಕಚ್ಚಾ	1370 (1365)
ಪಾಮ್ ವಾರದ ಡೆಲಿವರಿ	1245 (1226)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1380)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,650 (47,650)
ಬೆಳ್ಳಿ ಕೆ.ಜಿ 67,450 (67,200)

ಆವರಣದಲ್ಲಿ ಶನಿವಾರದ ಧಾರಣೆ

‘ಬಿಜೆಪಿ ಒಡೆಯಲು ಹೊರಗಿನವರು ಬೇಕಿಲ್ಲ’

ಬೆಂಗಳೂರು: ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬೆನ್ನಲ್ಲೇ ರಾಜಕೀಯ ಬೆಳವಣಿಗೆಗಳು ಚುರುಕುಗೊಂಡಿವೆ. ಯಡಿಯೂರಪ್ಪ ಅವರ ಅಧಿಕಾರ ಕಳೆದುಕೊಳ್ಳಲು ಕಾರಣಗಳೇನು, ಇದರಿಂದ ರಾಜ್ಯಕ್ಕೆ, ಬಿಜೆಪಿಗೆ ಲಾಭ-ನಷ್ಟಗಳೇನು, ಬಿಜೆಪಿಯ ಒಗ್ಗಟ್ಟು ಉಳಿಯಬಹುದೇ?

‘ಪ್ರಜಾವಾಣಿ’ ಸೋಮವಾರ ಆಯೋಜಿಸಿದ್ದ ಸಂವಾದದಲ್ಲಿ ರಾಜಕೀಯ ವಿಶ್ಲೇಷಕರಾದ ಸಂದೀಪ್ ಶಾಸ್ತ್ರಿ, ಮುಜಾಫರ್ ಅಸ್ಸಾದಿ ಸಿಪಿಐ ರಾಜ್ಯ ಮುಖಂಡ ಸಿದ್ದನಗೌಡ ಪಾಟೀಲ, ಹಿರಿಯ ಪತ್ರಕರ್ತ ರವೀಂದ್ರ ರೇಷ್ಮೆ ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ವಿವರ ಇಲ್ಲಿದೆ.

ಪ್ರಜಾವಾಣಿ ಸಂವಾದ

‘ತಲೆಮಾರಿನ ಬದಲಾವಣೆ ಆಗಬೇಕಿದೆ’



ವ್ಯಕ್ತಿಗಳ ಬದಲಾವಣೆ ಅಷ್ಟೇ ಅಲ್ಲ. ರಾಜಕೀಯದಲ್ಲಿ ತಲೆಮಾರಿನ ಬದಲಾವಣೆ ಆಗಬೇಕಿದೆ. ಇದನ್ನು ಮನಗಂಡೇ ಬಿಜೆಪಿ ಹೈಕಮಾಂಡ್ ಅನಿರೀಕ್ಷಿತ ವ್ಯಕ್ತಿಯನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡುವ ಸಾಧ್ಯತೆ ಹೆಚ್ಚಾಗಿದೆ. ಭ್ರಷ್ಟಾಚಾರ ಮತ್ತು ಕುಟುಂಬ ರಾಜಕಾರಣವೇ ಮುಖ್ಯಮಂತ್ರಿ ಬದಲಾವಣೆಗೆ ಪ್ರಮುಖ ಕಾರಣ. ಅಪವಾದಗಳ ಹೊಣೆ ಹೊತ್ತು ಅವರು ನಿರ್ಗಮಿಸುತ್ತಿದ್ದಾರೆ. ಮಗನ ಕೈಗೆ ಅಧಿಕಾರ ಕೊಟ್ಟು ನೈತಿಕ ಬಲವನ್ನು ಯಡಿಯೂರಪ್ಪ ಕುಗ್ಗಿಸಿಕೊಂಡರು. ಸ್ವಯಂಕೃತ ಅಪರಾಧ ಮಾಡುವ ಮೂಲಕ ಕೇಂದ್ರಕ್ಕೆ ಬಾರ್‌ಕೋಲನ್ನು ಅವರೇ ಕೊಟ್ಟರು. ಇಂತವರನ್ನೇ ಮತ್ತೆ ಆಯ್ಕೆ ಮಾಡಿದರೆ ಯಾವುದೇ ಪ್ರಯೋಜನ ಆಗಲಾರದು. ರಾಕ್ಷಸ ರಾಜಕಾರಣ, ಕೌಟುಂಬಿಕ ಸ್ವಾರ್ಥ, ಒಳ ಸಂಧಾನದ ರಾಜಕಾರಣ ಅಂತ್ಯವಾಗಬೇಕಿದೆ.

–ರವೀಂದ್ರ ರೇಷ್ಮೆ, ಹಿರಿಯ ಪತ್ರಕರ್ತ

‘ಅಧ್ಯಾಯ ಮುಗಿದಿದೆ, ಪುಸ್ತಕ ಅದೇ’



ಯಡಿಯೂರಪ್ಪ ರಾಜೀನಾಮೆಯಿಂದ ಕರ್ನಾಟಕ ಬಿಜೆಪಿ ರಾಜಕೀಯ ಅಧ್ಯಾಯವೊಂದು ಮುಗಿದಿದೆ. ಆದರೆ, ಅದೇ ಪುಸ್ತಕದ ಮುಂದಿನ ಅಧ್ಯಾಯದ ಆರಂಭವಾಗಲಿದೆ. ಪುಸ್ತಕದ ಸತ್ವ ಅದೇ ಇರಲಿದೆ, ಶೀರ್ಷಿಕೆ ಬದಲಾಗಲಿದೆ ಅಷ್ಟೇ. ಯಡಿಯೂರಪ್ಪ ಅವರಿಗೆ ಸ್ವಂತ ನಿರ್ಧಾರ ಕೈಗೊಳ್ಳಲು ಅವಕಾಶ ಇರಲಿಲ್ಲ. ರಾಜ್ಯಸಭೆ, ವಿಧಾನ ಪರಿಷತ್ತಿಗೆ ಸದಸ್ಯರ ನೇಮಕ, ಸಚಿವ ಸಂಪುಟ ವಿಸ್ತರಣೆಯಲ್ಲಿ ಅವರಿಗೆ ಸ್ವತಂತ್ರ ಇರಲಿಲ್ಲ. ಮುಂದೆ ಯಾರೇ ಮುಖ್ಯಮಂತ್ರಿ ಆದರೂ ಇದೇ ರೀತಿಯ ಸ್ಥಿತಿ ಇರಲಿದೆ. ಹೊಸ ಮುಖ್ಯಮಂತ್ರಿ ಆಯ್ಕೆ ವಿಷಯದಲ್ಲಿ ಯಡಿಯೂರಪ್ಪ ಅವರ ಪಾತ್ರ ಏನೂ ಇರುವುದಿಲ್ಲ. ತಮ್ಮ ಕೈಗೊಂಬೆ ಆಗುವವರನ್ನೇ ಹೈಕಮಾಂಡ್ ಮುಖ್ಯಮಂತ್ರಿ ಮಾಡಿಕೊಳ್ಳಲಿದೆ. ಯಡಿಯೂರಪ್ಪ ಅವರು ತಮಗೆ ಬೇಕಾದ ಒಂದಷ್ಟು ಜನರಿಗೆ ಸಚಿವ ಸಂಪುಟದಲ್ಲಿ ಸ್ಥಾನ ಕೊಡಿಸಬಹುದು ಅಷ್ಟೇ.

–ಸಂದೀಪ್ ಶಾಸ್ತ್ರಿ, ರಾಜಕೀಯ ವಿಶ್ಲೇಷಕ


‘ಲಿಂಗಾಯತ ಸಮುದಾಯ ಸರಳವಾಗಿ ಪರಿಗಣಿಸದು’



ಕಾಂಗ್ರೆಸ್, ಜೆಡಿಎಸ್‌ನಿಂದ ಬಿಜೆಪಿಗೆ ಸೇರಿದ 17 ಶಾಸಕರಿಗೆ ಈಗಾಗಲೇ ಭಯ ಬಂದಿದೆ. ಹೊಸ ಸರ್ಕಾರದಲ್ಲಿ ಅವರನ್ನು ಹೊರಗಿಡುವ ಸಾಧ್ಯತೆಯೂ ಇದೆ. ಅವರನ್ನು ಬಳಕೆ ಮಾಡಿಕೊಂಡದ್ದು ಆಗಿದೆ. ಬಿಜೆಪಿಯಲ್ಲಿನ ಒಗ್ಗಟ್ಟು ಉಳಿಯುವುದು ಯಡಿಯೂರಪ್ಪ ಅವರಿಗೆ ಸಿಗುವ ಗೌರವಯುತ ನಿರ್ಗಮನವನ್ನು ಆಧರಿಸಿದೆ. ಮುಂದಿನ ದಿನಗಳಲ್ಲಿ ಬಿಜೆಪಿಯ ಒಗ್ಗಟ್ಟು ಕುಸಿಯುತ್ತಾ ಹೋಗುತ್ತದೆ. ಬಿಜೆಪಿಯನ್ನು ಒಡೆಯಲು ಹೊರಗಿನ ಶಕ್ತಿಗಳ ಹೋರಾಟ ಮುಂದಿನ ದಿನಗಳಲ್ಲಿ ಅಗತ್ಯ ಇರುವುದಿಲ್ಲ. ಹಿಂದಿನ ಚುನಾವಣೆಯಲ್ಲಿ ಸಿಕ್ಕ ಮತಗಳನ್ನು ಸೆಳೆದುಕೊಳ್ಳುವುದು ಕಷ್ಟ ಆಗಬಹುದು. ಏಕೆಂದರೆ ಮುಖ್ಯಮಂತ್ರಿ ಬದಲಾವಣೆಯನ್ನು ಲಿಂಗಾಯತ ಸಮುದಾಯ ಸುಲಭವಾಗಿ ಸ್ವೀಕರಿಸಲಾರದು. ಅದಕ್ಕಾಗಿ ಯಡಿಯೂರಪ್ಪ ಅವರನ್ನು ಧೃತರಾಷ್ಟ್ರನ ರೀತಿಯಲ್ಲಿ ಬಿಜೆಪಿ ಉಳಿಸಿಕೊಳ್ಳುವ ಸಾಧ್ಯತೆ ಇದೆ.

– ಮುಜಾಫರ್ ಅಸ್ಸಾದಿ, ರಾಜಕೀಯ ವಿಶ್ಲೇಷಕ

‘ಹೊಸತನ ನಿರೀಕ್ಷೆ ಅಸಾಧ್ಯ’



ವ್ಯಕ್ತಿಗಳ ಬದಲಾವಣೆಯಿಂದ ಯಾವುದೇ ಹೊಸತನ ನಿರೀಕ್ಷೆ ಮಾಡಲು ಆಗುವುದಿಲ್ಲ. ಬಿಜೆಪಿಯೊಂದು ಪಕ್ಷವಲ್ಲ, ಅದು ಆರ್‌ಎಸ್‌ಎಸ್‌ನ ರಾಜಕೀಯ ವೇದಿಕೆಯಷ್ಟೆ. ಆ ಸಂಘಟನೆಯ ರಹಸ್ಯ ಕಾರ್ಯಸೂಚಿಗಳನ್ನು ಬಿಜೆಪಿ ಮೂಲಕ ಕಾರ್ಯರೂಪಕ್ಕೆ ತರುತ್ತಿದೆ. ತನಗೆ ಬೇಕಾದಾಗ ಕೆಲ ನಾಯಕರನ್ನು ಬಳಸಿಕೊಂಡು ಕೊನೆಗೆ ಅವರನ್ನು ಹೊರ ದೂಡುತ್ತದೆ. ಮಾಯಾವತಿ, ಮಮತಾ ಬ್ಯಾನರ್ಜಿ, ಎಚ್.ಡಿ.ಕುಮಾರಸ್ವಾಮಿ ವಿಷಯದಲ್ಲೂ ಬಿಜೆಪಿ ಮಾಡಿದ್ದು ಅದನ್ನೆ. ಯಡಿಯೂರಪ್ಪ ಅವರನ್ನೂ ಬಳಸಿಕೊಂಡು ಈಗ ಹೊರಕ್ಕೆ ತಳ್ಳಿದ್ದಾರೆ. ಸದ್ಯ ಅವರಿಗೆ ಆರ್‌ಎಸ್‌ಎಸ್ ನಿಷ್ಠತೆ ಇರುವ ರಾಜಕೀಯ ಬೇಕಾಗಿದೆ. ಹೀಗಾಗಿ, ಆಡಳಿತದ ವಿಷಯದಲ್ಲಿ ಮುಂದೆ ಯಾವ ಹೊಸತನ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಧರ್ಮ ಮತ್ತು ಜಾತಿ ರಾಜಕಾರಣಕ್ಕೆ ವಿರುದ್ಧವಾಗಿ ಜನ ಹೋರಾಟಗಳು ರಾಜಕೀಯ ಶಕ್ತಿಯಾಗಿ ಬೆಳೆಯಲಿವೆ.

–ಸಿದ್ದನಗೌಡ ಪಾಟೀಲ, ಸಿಪಿಐ ರಾಜ್ಯ ಮುಖಂಡ

ಪೂರ್ಣ ಸಂವಾದ ವೀಕ್ಷಿಸಲು: https://www.facebook.com/prajavani.net/videos

ಕಾರ್ಗಿಲ್ ವಿಜಯ ದಿನ ವೀರರಿಗೆ ಸೇನೆಯ ಗೌರವ



ದ್ರಾಸ್‌ನಲ್ಲಿ ನಡೆದ ಕಾರ್ಗಿಲ್ ವಿಜಯ ದಿವಸ ಕಾರ್ಯಕ್ರಮದಲ್ಲಿ ಜ್ಯೋತಿಯನ್ನು ಬರಮಾಡಿಕೊಳ್ಳಲಾಯಿತು–ಪಿಟಿಐ ಚಿತ್ರ

ಶ್ರೀನಗರ (ಪಿಟಿಐ): 1999ರಲ್ಲಿ ಪಾಕಿಸ್ತಾನದ ಸೇನೆಯ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ ಕಾರ್ಗಿಲ್ ವೀರರಿಗೆ ಸೇನೆಯು ಸೋಮವಾರ ಗೌರವ ಸಲ್ಲಿಸಿತು. ಲಡಾಖ್‌ನ ದ್ರಾಸ್ ಯುದ್ಧ ಸ್ಮಾರಕದಲ್ಲಿ ಕಾರ್ಗಿಲ್ ವಿಜಯ ದಿನದ 22ನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಇಡೀ ದೇಶವು ಹುತಾತ್ಮ ಸೈನಿಕರನ್ನು ಸ್ಮರಿಸಿತು.

ಕಾರ್ಗಿಲ್‌ನ ಅತಿಎತ್ತರದ ಪ್ರದೇಶವನ್ನು ವಶಪಡಿಸಿಕೊಳ್ಳಲು ಮುಂದಾದ ಪಾಕಿಸ್ತಾನದ ಯತ್ನ ವಿಫಲಗೊಳಿಸಿದ್ದ ಈ ಗೆಲುವಿಗೆ ಆಪರೇಷನ್ ವಿಜಯ್ ಎಂಬ ಹೆಸರು ನೀಡಲಾಗಿತ್ತು.

ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ಆರ್.ಕೆ. ಮಾಥುರ್ ಅವರು ಸ್ಮಾರಕಕ್ಕೆ ಮಾಲಾರ್ಪಣೆ ಮಾಡಿದರು.

ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಹುತಾತ್ಮ ಸೈನಿಕರಿಗೆ ಗೌರವ ಸಲ್ಲಿಸಲು ದ್ರಾಸ್ ಸ್ಮಾರಕಕ್ಕೆ ಭೇಟಿ ನೀಡಬೇಕಿತ್ತು. ಆದರೆ ಹವಾಮಾನ ವೈಪರೀತ್ಯದ ಕಾರಣ, ಅವರ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡಲಾಯಿತು. ಅವರು ಉತ್ತರ ಕಾಶ್ಮೀರದ ಬಾರಾಮುಲ್ಲಾದಲ್ಲಿರುವ ಯುದ್ಧ ಸ್ಮಾರಕದಲ್ಲಿ ಗೌರವ ಸಲ್ಲಿಸಿದರು. 2019ರಲ್ಲೂ ಹವಾಮಾನ ವೈಪರೀತ್ಯದಿಂದಾಗಿ ಅವರ ಕಾರ್ಯಕ್ರಮ ರದ್ದಾಗಿತ್ತು.

ಪಾಕಿಸ್ತಾನದ ಜೊತೆ ಯುದ್ಧದಲ್ಲಿ ಭಾರತ ಜಯ ಗಳಿಸಿದ 50ನೇ ವರ್ಷಾಚರಣೆ ನಿಮಿತ್ತ ದೇಶದಾದ್ಯಂತ ಸಂಚರಿಸಿದ ಜ್ಯೋತಿಯು ಈ ವರ್ಷ ಕಾರ್ಗಿಲ್ ವಿಜಯ್ ದಿವಸದ ದಿನವೇ ಕಾರ್ಗಿಲ್ ಯುದ್ಧ ಸ್ಮಾರಕವನ್ನು ತಲುಪಿದೆ ಎಂದು ರಕ್ಷಣಾ ಇಲಾಖೆ ಸಾರ್ವಜನಿಕ ಸಂಪರ್ಕಾಧಿಕಾರಿ ಮುಸವಿ ತಿಳಿಸಿದ್ದಾರೆ. 1971ರಲ್ಲಿ ಪಾಕಿಸ್ತಾನದ ಮೇಲೆ ಭಾರತ ಜಯ ದಾಖಲಿಸಿತ್ತು.

ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಲ್ಲಿ ನಮ್ಮ ಗಡಿ, ಭೂಪ್ರದೇಶಗಳನ್ನು ರಕ್ಷಿಸಿದ ಮುಂಚೂಣಿ ಪಡೆಗಳಿಗೆ ಗೌರವ ಸಲ್ಲಿಸುತ್ತೇನೆ
ರಾಮನಾಥ ಕೋವಿಂದ್, ರಾಷ್ಟ್ರಪತಿ

ನಮ್ಮ ಸಶಸ್ತ್ರ ಪಡೆಗಳ ಶೌರ್ಯವನ್ನು ಇಡೀ ದೇಶ ಸ್ಮರಿಸುತ್ತಿದೆ. ಆಪರೇಷನ್ ವಿಜಯ್ ವೀರರಿಗೆ ನಮಸ್ಕರಿಸುತ್ತೇನೆ. ಅವರ ತ್ಯಾಗಕ್ಕಾಗಿ ಗೌರವ ಸಲ್ಲಿಸುತ್ತೇನೆ
ವೆಂಕಯ್ಯ ನಾಯ್ಡು, ರಾಜ್ಯಸಭೆ ಸಭಾಪತಿ

ಯೋಧರ ಶೌರ್ಯವು ಪ್ರತಿ ದಿನವೂ ನಮ್ಮಲ್ಲಿ ಪ್ರೇರಣೆ ಒದಗಿಸುತ್ತಿದೆ
ನರೇಂದ್ರ ಮೋದಿ, ಪ್ರಧಾನಿ

ಕಾರ್ಗಿಲ್ ವೀರರ ತ್ಯಾಗವನ್ನು ದೇಶ ಎಂದಿಗೂ ನೆನಪಿನಲ್ಲಿಟ್ಟುಕೊಳ್ಳಲಿದೆ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ



ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ನಗರದ ನೆಹರು ತಾರಾಲಯದ ಮುಂಭಾಗದಲ್ಲಿರುವ ರಾಷ್ಟ್ರೀಯ ಮಿಲಿಟರಿ ಸ್ಮಾರಕಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸೋಮವಾರ ಗೌರವ ನಮನ ಸಲ್ಲಿಸಿದರು
–ಪ್ರಜಾವಾಣಿ ಚಿತ್ರ

ನಿವೃತ್ತ ಯೋಧರಿಗೆ ಸೌಲಭ್ಯ ನೀಡುವುದು ನಮ್ಮ ಕರ್ತವ್ಯ– ಮುಖ್ಯಮಂತ್ರಿ

ಬೆಂಗಳೂರು: ‘ನಿವೃತ್ತ ಯೋಧರಿಗೆ ಹಾಗೂ ಯುದ್ಧದಿಂದ ಸಂತ್ರಸ್ತರಾದವರಿಗೆ ಸೌಲಭ್ಯಗಳನ್ನು ನೀಡಬೇಕಾದುದು ಸರ್ಕಾರದ ಕರ್ತವ್ಯ’ ಎಂದೂ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

22ನೇ ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ನಗರದ ಜವಾಹರಲಾಲ್ ನೆಹರು ತಾರಾಲಯದ ಮುಂಭಾಗದಲ್ಲಿರುವ ರಾಷ್ಟ್ರೀಯ ಮಿಲಿಟರಿ ಸ್ಮಾರಕಕ್ಕೆ ಸೋಮವಾರ ಗೌರವ ನಮನ ಸಲ್ಲಿಸಿದ ಬಳಿಕ ಅವರು ಮಾತನಾಡಿದರು.

‘ಕಾರ್ಗಿಲ್ ವಿಜಯ ದಿವಸದಲ್ಲಿ ಭಾಗವಹಿಸಿದ್ದು ಸಂತಸವಾಗಿದೆ. ವೀರ ಯೋಧರು ದೇಶ ರಕ್ಷಿಸಿದ ಮಹತ್ವದ ದಿನವಿದು. ಕಾರ್ಗಿಲ್ ಯುದ್ಧದ 527 ಹುತಾತ್ಮ ಯೋಧರನ್ನು ಸ್ಮರಿಸುವುದು ನಮ್ಮ ಕರ್ತವ್ಯ’ ಎಂದರು.

‘ಯೋಧರ ಕುಟುಂಬಗಳಿಗೆ ಅನುಗ್ರಹ ಪೂರ್ವಕ ಅನುದಾನ, ಉಚಿತ ನಿವೇಶನ, ಜಮೀನು, ಮನೆ ನಿರ್ಮಾಣಕ್ಕೆ ಅನುದಾನ, ಬಸ್ ಪಾಸ್, ಹೆಣ್ಣು ಮಕ್ಕಳ ಮದುವೆಗೆ ಧನ ಸಹಾಯ, ಸರ್ಕಾರಿ ಕೆಲಸದಲ್ಲಿ ಮೀಸಲಾತಿ ನೀಡಲಾಗುತ್ತಿದೆ. ಯೋಧರ ತ್ಯಾಗವನ್ನು ಈ ನಾಡು ಎಂದೆಂದಿಗೂ ಸ್ಮರಿಸುತ್ತದೆ’ ಎಂದೂ ಹೇಳಿದರು.

ಇದೇ ಸಂದರ್ಭದಲ್ಲಿ ಶಕುಂತಲ ಬಂಡಾರ್ಕರ್ ಬರೆದಿರುವ ಲೆ. ಕರ್ನಲ್ ಅಜಿತ್ ಬಂಡಾರ್ಕರ್ ಜೀವನ ಚರಿತ್ರೆಯ ಪುಸ್ತಕ ‘ದಿ ಸಾಗಾ ಆಫ್ ಅ ಬ್ರೇವ್ ಹಾರ್ಟ್’ ಬಿಡುಗಡೆಗೊಳಿಸಲಾಯಿತು.

ತ್ರಿಪುರಾ: ಐಪ್ಯಾಕ್ ಸದಸ್ಯರ ವಿಚಾರಣೆ

ಅಗರ್ತಲಾ (ಪಿಟಿಐ): ತ್ರಿಪುರಾದಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಕ್ಕೆ ದೊರೆಯಬಹುದಾದ ರಾಜಕೀಯ ನೆಲೆ ಮತ್ತು ಸಂಭಾವ್ಯ ಬೆಂಬಲದ ಬಗ್ಗೆ ಲೆಕ್ಕಾಚಾರ ಹಾಕಲು ಇಲ್ಲಿ ಹೋಟೆಲ್‌ವೊಂದರಲ್ಲಿ ಒಂದು ವಾರದಿಂದ ಬೀಡುಬಿಟ್ಟಿದ್ದ ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಅವರ ಐಪ್ಯಾಕ್ ಸಂಘಟನೆ ಸದಸ್ಯರನ್ನು ಸ್ಥಳೀಯ ಪೊಲೀಸರು ವಿಚಾರಣೆ ನಡೆಸಿದ್ದಾರೆ.

ದಿನನಿತ್ಯದ ತಪಾಸಣೆಯ ಭಾಗವಾಗಿ ಅಗರ್ತಲಾದ ಹೋಟೆಲ್‌ನಲ್ಲಿ 22 ಸದಸ್ಯರ ಐ-ಪ್ಯಾಕ್ ತಂಡವನ್ನು ಪ್ರಶ್ನಿಸಲಾಗುತ್ತಿದೆ ಎಂದು ಪಶ್ಚಿಮ ತ್ರಿಪುರಾದ ಪೊಲೀಸ್ ಅಧೀಕ್ಷಕ ಮಾಣಿಕ್ ದಾಸ್ ಹೇಳಿದ್ದಾರೆ.

‘ಐಪ್ಯಾಕ್ ತಂಡವು ಭಾನುವಾರ ರಾತ್ರಿಯಿಂದ ಹೋಟೆಲ್‌ನಲ್ಲಿ ಬಂಧನದಲ್ಲಿದೆ ಎಂದು ತ್ರಿಪುರಾ ಟಿಎಂಸಿ ರಾಜ್ಯ ಘಟಕದ ಅಧ್ಯಕ್ಷ ಆಶಿಶ್ ಲಾಲ್ ಸಿಂಗ್ ಆರೋಪಿಸಿದ್ದಾರೆ.

ಪೆಗಾಸಸ್ ಗೂಢಚರ್ಯೆ ಪಟ್ಟಿಯಲ್ಲಿ ಇಬ್ಬರು ಕರ್ನಲ್‌ಗಳು, ‘ರಾ’ ಅಧಿಕಾರಿ, ಕೇಜ್ರಿವಾಲ್ ಆಪ್ತ ಸಹಾಯಕ

ಸೇನಾಧಿಕಾರಿಗಳ ವಿರುದ್ಧವೂ ಗೂಢಚರ್ಯೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಗಡಿ ಭದ್ರತಾ ಪಡೆಯ ಮುಖ್ಯಸ್ಥರು, ಜಾರಿ ನಿರ್ದೇಶನಾಲಯದ ಅಧಿಕಾರಿಗಳು, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಸಹಾಯಕ, ಗುಪ್ತಚರ ಸಂಸ್ಥೆ ‘ರಾ’ ಅಧಿಕಾರಿ ಮತ್ತು ಸೇನೆಯ ಇಬ್ಬರು ಕರ್ನಲ್‌ಗಳ ಫೋನ್ ಸಂಖ್ಯೆಯು ಪೆಗಾಸಸ್ ಗೂಢಚರ್ಯೆ ಗುರಿಯ ಪಟ್ಟಿಯಲ್ಲಿವೆ. 2017-19ರ ಅವಧಿಯಲ್ಲಿ ಈ ಫೋನ್ ಸಂಖ್ಯೆಗಳನ್ನು ಪಟ್ಟಿಗೆ ಸೇರಿಸಲಾಗಿದೆ ಎಂದು ‘ದಿ ವೈರ್’ ಪೋರ್ಟಲ್ ವರದಿ ಮಾಡಿದೆ.

ಈ ಎಲ್ಲಾ ಅಧಿಕಾರಿಗಳಲ್ಲಿ ಹಲವರು ಒಂದಿಲ್ಲೊಂದು ಪ್ರಕರಣದಲ್ಲಿ ಕೇಂದ್ರ ಸರ್ಕಾರ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ವಿರುದ್ಧ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಿಸಿದ್ದರು ಮತ್ತು ಪ್ರಕರಣಗಳಲ್ಲಿ ಸಾಕ್ಷಿಗಳಾಗಿದ್ದರು. ಪ್ರಕರಣ ದಾಖಲಾದ ನಂತರವೇ ಅವರ ಫೋನ್ ಸಂಖ್ಯೆಗಳನ್ನು ಪೆಗಾಸಸ್ ಗೂಢಚರ್ಯೆ ಪಟ್ಟಿಗೆ ಸೇರಿಸಲಾಗಿದೆ ಎಂದು ದಿ ವೈರ್ ವಿಶ್ಲೇಷಿಸಿದೆ.

ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಮಹಾ ನಿರ್ದೇಶಕ ಕೆ.ಕೆ. ಶರ್ಮಾ, ಬಿಎಸ್‌ಎಫ್ ಪೊಲೀಸ್ ಮಹಾ ನಿರ್ದೇಶಕ ಜಗದೀಶ್ ಮಿಥಾನಿ, ಜಾರಿ ನಿರ್ದೇಶನಾಲಯದ ನಿವೃತ್ತ ಅಧಿಕಾರಿ ರಾಜೇಶ್ವರ ಸಿಂಗ್, ಕೇಜ್ರಿವಾಲ್ ಅವರ ಆಪ್ತ ಸಹಾಯಕ ಮತ್ತು ಐಎಎಸ್ ಅಧಿಕಾರಿ ವಿ.ಕೆ.ಜೈನ್, ನಿವೃತ್ತ ರಾ ಅಧಿಕಾರಿ ಜಿತೇಂದ್ರ ಓಜಾ, ಸೇನಾ ಕರ್ನಲ್‌ಗಳಾದ ಮುಕುಲ್ ದೇವ್ ಮತ್ತು ಅಮಿತ್ ಕುಮಾರ್ ಅವರ ಫೋನ್ ಸಂಖ್ಯೆಗಳು ಈ ಪಟ್ಟಿಯಲ್ಲಿವೆ. ಪ್ರಧಾನಿ ಕಾರ್ಯಾಲಯದ ಒಬ್ಬ ಅಧಿಕಾರಿ ಮತ್ತು ನೀತಿ ಆಯೋಗದ ಒಬ್ಬ ಅಧಿಕಾರಿಯ ಫೋನ್ ಸಂಖ್ಯೆ ಈ ಪಟ್ಟಿಯಲ್ಲಿವೆ.

2018ರ ಫೆಬ್ರುವರಿಯಲ್ಲಿ ಬಿಎಸ್‌ಎಫ್‌ನ ಮಹಾ ನಿರ್ದೇಶಕರಾಗಿದ್ದಾಗ ಕೆ.ಕೆ.ಶರ್ಮಾ ಅವರು ಆರ್‌ಎಸ್‌ಎಸ್‌ನ ಘಟಕವೊಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಿಎಸ್‌ಎಫ್ ಸಮವಸ್ತ್ರದಲ್ಲೇ ಭಾಗಿಯಾಗಿದ್ದರು. 2018ರಲ್ಲಿ ನಿವೃತ್ತಿಯಾದ ನಂತರ ಅವರನ್ನು ಚುನಾವಣಾ ಆಯೋಗವು 2019ರ ಲೋಕಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಜಾರ್ಖಂಡ್‌ನ ಪೊಲೀಸ್ ವೀಕ್ಷಕರಾಗಿ ನೇಮಕ ಮಾಡಿತ್ತು. ಬಿಜೆಪಿ ಜತೆಗೆ ಸಖ್ಯ ಹೊಂದಿದ್ದಾರೆ ಎಂಬ ಆರೋಪ ಬಂದ ನಂತರ ಅವರನ್ನು ವೀಕ್ಷಕರ ಹುದ್ದೆಯಿಂದ ತೆಗೆಯಲಾಗಿತ್ತು. 2018-19ರ ಅವಧಿಯಲ್ಲಿ ಅವರ ಫೋನ್ ಸಂಖ್ಯೆಯನ್ನು ಈ ಪಟ್ಟಿಗೆ ಸೇರಿಸಲಾಗಿದೆ.

ಜಾರಿ ನಿರ್ದೇಶನಾಲಯದ ಅಧಿಕಾರಿ ರಾಜೇಶ್ವರ್ ಸಿಂಗ್ ಅವರು ಪಿ.ಚಿದಂಬರಂ ಅವರು ಆರೋಪಿಯಾಗಿದ್ದ ಏರ್‌ಸೆಲ್-ಮ್ಯಾಕ್ಸಿಸ್ ಪ್ರಕರಣದಲ್ಲಿ ತನಿಖಾಧಿಕಾರಿಯಾಗಿದ್ದರು. ಈ ಪ್ರಕರಣದ ತನಿಖೆ ನಡೆಸುತ್ತಿದ್ದ ಅವಧಿಯಲ್ಲಿ (2017-19) ಅವರ ಪತ್ನಿ, ಇಬ್ಬರು ಸೋದರಿಯರು ಮತ್ತು ಅವರ ಹತ್ತಿರದ ವಕೀಲರೊಬ್ಬರ ಫೋನ್ ಸಂಖ್ಯೆಗಳನ್ನು ಈ ಪಟ್ಟಿಗೆ ಸೇರಿಸಲಾಗಿದೆ. ಅದೇ ಅವಧಿಯಲ್ಲಿ ಹಣಕಾಸು ಸಚಿವಾಲಯದ ಅಧಿಕಾರಿ ಹಸ್ಮುಖ್ ಅಧಿಯಾ ಅವರು ತಮ್ಮ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದು ನ್ಯಾಯಾಲಯದ ಮೊರೆ ಹೋಗಿದ್ದರು.

ಕೇಜ್ರಿವಾಲ್ ಅವರ ಗೃಹಕಚೇರಿಯಲ್ಲಿ ದೆಹಲಿ ಮುಖ್ಯ ಕಾರ್ಯದರ್ಶಿ ಅಂಶು ಪ್ರಕಾಶ್ ಅವರ ಮೇಲೆ ಹಲ್ಲೆ ನಡೆದ ಪ್ರಕರಣದಲ್ಲಿ ವಿ.ಕೆ.ಜೈನ್ ಸಾಕ್ಷಿಯಾಗಿದ್ದರು. ಪ್ರಕರಣ ದಾಖಲಾದ ನಂತರ ಅವರ ಫೋನ್ ಸಂಖ್ಯೆಯನ್ನು ಈ ಪಟ್ಟಿಗೆ ಸೇರಿಸಲಾಗಿತ್ತು.

ಸೇನೆಯ ಕರ್ನಲ್ ಮುಕುಲ್ ದೇವ್ ಅವರು ಒಳನಾಡಿನಲ್ಲಿ ಸೇವೆಯಲ್ಲಿರುವ ಸೇನಾಧಿಕಾರಿಗಳಿಗೆ ಉಚಿತ ಪಡಿತರ ರದ್ದುಪಡಿಸಿದ ಕ್ರಮದ ವಿರುದ್ಧ ರಕ್ಷಣಾ ಕಾರ್ಯದರ್ಶಿಗೆ 2017ರಲ್ಲಿ ನೋಟಿಸ್ ನೀಡಿದ್ದರು. ಆನಂತರ ಅವರ ಫೋನ್ ಸಂಖ್ಯೆಯನ್ನು ಈ ಪಟ್ಟಿಗೆ ಸೇರಿಸಲಾಯಿತು.

ಸಶಸ್ತ್ರ ಪಡೆಗಳ (ವಿಶೇಷ ಪಡೆಗಳ) ಕಾಯ್ದೆಯನ್ನು ಸಡಿಲಗೊಳಿಸಿದ ಸರ್ಕಾರದ ನಿರ್ಧಾರದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಕರ್ನಲ್ ಅಮಿತ್ ಕುಮಾರ್ ಅವರು ಪ್ರಕರಣ ದಾಖಲಿಸಿದ್ದರು. ಆನಂತರ ಅವರ ಫೋನ್ ಸಂಖ್ಯೆಯನ್ನು ಈ ಪಟ್ಟಿಗೆ ಸೇರಿಸಲಾಗಿತ್ತು.

ಬಿಎಸ್‌ಎಫ್ ಐಜಿ ಜಗದೀಶ್ ಮಿಥಾನಿ ಅವರು ಗೃಹ ಸಚಿವಾಲಯದ ‘ಸ್ಮಾರ್ಟ್ ಫೆನ್ಸಿಂಗ್’ ಯೋಜನೆಯ ಪ್ರಮುಖ ಉಸ್ತುವಾರಿಗಳಲ್ಲಿ ಒಬ್ಬರಾಗಿದ್ದರು.



ತನಿಖೆ ತಕ್ಷಣವೇ ಆರಂಭವಾಗಲಿದೆ. ಕೆಲವೊಮ್ಮೆ ಮಲಗಿರುವವರನ್ನು ಬಡಿದೆಬ್ಬಿಸಬೇಕಾಗುತ್ತದೆ. ನಾವು ಈಗ ತೆಗೆದುಕೊಂಡಿರುವ ನಿರ್ಧಾರದಿಂದ ಬೇರೆಯವರು ಎಚ್ಚರಗೊಳ್ಳುತ್ತಾರೆ
ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ



ಸರ್ಕಾರವು ತನ್ನ ರಾಜಕೀಯ ಹಿತಾಸಕ್ತಿಗಾಗಿ ಸಾರ್ವಜನಿಕರ ಹಣವನ್ನು ಗೂಢಚರ್ಯೆಗೆ ದುರ್ಬಳಕೆ ಮಾಡಿಕೊಂಡಿದೆ. ಹೀಗಾಗಿ ನ್ಯಾಯಾಂಗ ತನಿಖೆ ನಡೆಸಬೇಕು
ಶಶಿ ತರೂರ್, ಕಾಂಗ್ರೆಸ್ ಸಂಸದ



ಪತ್ರಕರ್ತರು, ರಾಜಕೀಯ ಎದುರಾಳಿಗಳು, ಸಂಪುಟ ಸಹೋದ್ಯೋಗಿಗಳು ಕೊನೆಗೆ ಸೇನಾಧಿಕಾರಿಗಳನ್ನೂ ಇವರು ಬಿಟ್ಟಿಲ್ಲ. ಇದು ಅಪರಾಧ. ಪ್ರಧಾನಿ, ಗೃಹ ಸಚಿವರು ಉತ್ತರಿಸಲೇಬೇಕು
ಡೆರೆಕ್ ಒಬ್ರಿಯಾನ್, ಟಿಎಂಸಿ ಸಂಸದ

ತನಿಖಾ ಆಯೋಗ ರಚಿಸಿದ ಮಮತಾ



ಪೆಗಾಸಸ್ ಗೂಢಚರ್ಯೆ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಕೋಲ್ಕತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ಪೆಗಾಸಸ್ ಗೂಢಚರ್ಯೆಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ಸರ್ಕಾರವು ನಿವೃತ್ತ ನ್ಯಾಯಮೂರ್ತಿಗಳ ತನಿಖಾ ಆಯೋಗವನ್ನು ರಚಿಸಿದೆ. ವಿರೋಧ ಪಕ್ಷಗಳ ನಾಯಕರ ಭೇಟಿಗಾಗಿ ದೆಹಲಿಗೆ ಪ್ರಯಾಣ ಆರಂಭಿಸುವ ಮುನ್ನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಈ ನಿರ್ಧಾರವನ್ನು ಘೋಷಿಸಿದ್ದಾರೆ.

ಕಲ್ಕತ್ತಾ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಜ್ಯೋತಿರ್ಮಯಿ ಭಟ್ಟಾಚಾರ್ಯ ಮತ್ತು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಂ.ಬಿ.ಲೋಕೂರ್ ಅವರು ಈ ಆಯೋಗದ ಸದಸ್ಯರಾಗಿದ್ದಾರೆ.

‘ಕೇಂದ್ರ ಸರ್ಕಾರವು ಪೆಗಾಸಸ್ ಗೂಢಚರ್ಯೆ ತನಿಖೆಗೆ ಆದೇಶಿಸುತ್ತದೆ ಎಂದು ನಾವು ಕಾದಿದ್ದಷ್ಟೇ ಬಂತು. ಕೇಂದ್ರ ಸರ್ಕಾರ ತನಿಖೆ ನಡೆಸುವಂತೆ ಕಾಣುತ್ತಿಲ್ಲ. ಹೀಗಾಗಿ ಪಶ್ಚಿಮ ಬಂಗಾಳ ಸರ್ಕಾರವೇ ತನಿಖೆಗೆ ಆಯೋಗ ರಚಿಸಿದೆ. ಈ ಗೂಢಚರ್ಯೆಯಲ್ಲಿ ಯಾರೆಲ್ಲಾ ಭಾಗಿಯಾಗಿದ್ದಾರೆ, ಕಾನೂನುಬಾಹಿರವಾಗಿ ಹೇಗೆ ಗೂಢಚರ್ಯೆ ನಡೆಸಿದ್ದಾರೆ ಮತ್ತು ಈ ವಿಷಯ ಬಹಿರಂಗವಾಗದಂತೆ ಹೇಗೆ ನೋಡಿಕೊಂಡಿದ್ದಾರೆ ಎಂಬುದರ ಬಗ್ಗೆ ಈ ಆಯೋಗವು ತನಿಖೆ ನಡೆಸಲಿದೆ’ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.

‘ದೇಶವನ್ನು ಬಿಜೆಪಿ ಕಗ್ಗತ್ತಲೆಗೆ ದೂಡಿದೆ. ಬಿಜೆಪಿಯನ್ನು ಸೋಲಿಸಲು ಅದನ್ನು ವಿರೋಧಿಸುವ ಎಲ್ಲಾ ಪಕ್ಷಗಳು ಒಗ್ಗಟ್ಟಾಗಬೇಕು. ದೇಶವನ್ನು ಬೆಳಕಿಗೆ ಕರೆದೊಯ್ಯಲು ನಾವೆಲ್ಲಾ ಮುಂದೆ ಬರಬೇಕಿದೆ’ ಎಂದು ಅವರು ವಿರೋಧ ಪಕ್ಷಗಳಿಗೆ ಕರೆ ನೀಡಿದ್ದಾರೆ.

ಒತ್ತಡ ಹೇರುವ ತಂತ್ರ

‘1952ರ ತನಿಖಾ ಆಯೋಗ ಕಾಯ್ದೆಯ ಸೆಕ್ಷನ್ 3ರ ಅನ್ವಯ ತನಿಖಾ ಆಯೋಗವನ್ನು ರಚಿಸಲಾಗಿದೆ. ರಾಜ್ಯದಲ್ಲಿ ನಡೆದಿರುವ ಕಾನೂನುಬಾಹಿರ ಕಣ್ಗಾವಲು, ಹ್ಯಾಕಿಂಗ್, ಫೋನ್ ಕದ್ದಾಲಿಸುವಿಕೆ ಕುರಿತು ಈ ಆಯೋಗವು ತನಿಖೆ ನಡೆಸಲಿದೆ’ ಎಂದು ಮಮತಾ ಬ್ಯಾನರ್ಜಿ ಅವರು ಮಾಹಿತಿ ನೀಡಿದ್ದಾರೆ.

ಇಂತಹ ಪ್ರಕರಣಗಳ ತನಿಖೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತನಿಖಾ ಆಯೋಗವನ್ನು ರಚಿಸಲು ಈ ಕಾಯ್ದೆಯ ಸೆಕ್ಷನ್ 3 ಅವಕಾಶ ಮಾಡಿಕೊಡುತ್ತದೆ. ಆದರೆ ಕೇಂದ್ರ ಸರ್ಕಾರವು ಈಗಾಗಲೇ ತನಿಖಾ ಆಯೋಗ ರಚಿಸಿದ್ದರೆ, ಆ ಆಯೋಗವು ರದ್ದಾಗುವವರೆಗೂ ರಾಜ್ಯ ಸರ್ಕಾರವು ತನಿಖಾ ಆಯೋಗ ರಚಿಸಲು ಅವಕಾಶವಿಲ್ಲ ಎಂದು ಸೆಕ್ಷನ್ 3 ಹೇಳುತ್ತದೆ.

ಅದರಂತೆಯೇ ರಾಜ್ಯ ಸರ್ಕಾರವು ಮೊದಲು ಆಯೋಗ ರಚಿಸಿದ್ದರೆ, ಆ ಆಯೋಗವು ರದ್ದಾಗುವವರೆಗೂ ಕೇಂದ್ರ ಸರ್ಕಾರವು ತನಿಖಾ ಆಯೋಗ ರಚಿಸಲು ಅವಕಾಶವಿಲ್ಲ. ಆದರೆ, ಪ್ರಕರಣದ ತನಿಖೆಯು ಎರಡು ಅಥವಾ ಅದಕ್ಕಿಂತಲೂ ಹೆಚ್ಚು ರಾಜ್ಯಗಳಿಗೆ ವಿಸ್ತರಿಸಿದ್ದರೆ, ಕೇಂದ್ರ ಸರ್ಕಾರವು ತನಿಖಾ ಆಯೋಗವನ್ನು ರಚಿಸಬಹುದು ಎಂದು ಸೆಕ್ಷನ್ 3 ಹೇಳುತ್ತದೆ.

ತಾವು ತನಿಖಾ ಆಯೋಗ ರಚಿಸುವ ಮೂಲಕ ಕೇಂದ್ರ ಸರ್ಕಾರವು ತನಿಖಾ ಆಯೋಗ ರಚಿಸುವಂತೆ ಒತ್ತಡ ಸೃಷ್ಟಿಸಲು ಮಮತಾ ಬ್ಯಾನರ್ಜಿ ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಕಲಾಪಕ್ಕೆ ಅಡ್ಡಿ: ನಾಯ್ಡು ಅಸಹಾಯಕತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಕಲಾಪಕ್ಕೆ ನಿರಂತರ ಅಡ್ಡಿಯಾಗುತ್ತಿರುವ ಬಗ್ಗೆ ರಾಜ್ಯಸಭೆ ಸಭಾಪತಿ ಎಂ.ವೆಂಕಯ್ಯ ನಾಯ್ಡು ಕಳವಳ ವ್ಯಕ್ತಪಡಿಸಿದ್ದಾರೆ. ‘ಗದ್ದಲದಿಂದಾಗಿ, ಸಾರ್ವಜನಿಕ ಹಿತಾಸಕ್ತಿಯ ಪ್ರಮುಖ ವಿಷಯಗಳನ್ನು ಪ್ರಸ್ತಾಪಿಸಲಿದ್ದ 90ಕ್ಕೂ ಹೆಚ್ಚು ಸಂಸದರಿಗೆ ಅವಕಾಶ ಸಿಗದೇ ಹೋಯಿತು. ಇದರಿಂದಾಗಿ ನಾವು ದಿನದಿಂದ ದಿನಕ್ಕೆ ಅಸಹಾಯಕರಾಗುತ್ತಿದ್ದೇವೆ’ ಎಂದು ಸೋಮವಾರ ಹೇಳಿದರು.

ಪೆಗಾಸಸ್, ನೂತನ ಕೃಷಿ ಕಾಯ್ದೆಗಳು ಸೇರಿದಂತೆ ಹಲವು ವಿಷಯಗಳನ್ನು ಪ್ರಸ್ತಾಪಿಸಿ ಪ್ರತಿಪಕ್ಷಗಳ ಸಂಸದರು ಘೋಷಣೆ ಕೂಗುತ್ತ ಸಭಾಧ್ಯಕ್ಷರ ಪೀಠದ ಮುಂಭಾಗಕ್ಕೆ ನುಗ್ಗಿದರು. ಈ ಸಂದರ್ಭದಲ್ಲಿ ಉಂಟಾದ ಗದ್ದಲದಿಂದ ಅಸಮಾಧಾನ ವ್ಯಕ್ತಪಡಿಸಿದ ಅವರು, ‘ಮುಂಗಾರು ಅಧಿವೇಶನ ಆರಂಭವಾದ ಜುಲೈ 19ರಿಂದ ಇಲ್ಲಿಯವರೆಗೆ, ಸೋಮವಾರದ 12 ಪ್ರಸ್ತಾಪಗಳು ಸೇರಿದಂತೆ ಶೂನ್ಯ ವೇಳೆಯ 69 ಪ್ರಸ್ತಾಪಗಳು ಹಾಗೂ 23 ವಿಶೇಷ ಪ್ರಸ್ತಾಪಗಳನ್ನು ಚರ್ಚೆಗೆ ಅಂಗೀಕರಿಸಲಾಗಿತ್ತು. ಆದರೆ, ನಿಲ್ಲದ ಗದ್ದಲದಿಂದಾಗಿ ಅದಕ್ಕೆ ಅವಕಾಶವಾಗಲಿಲ್ಲ’ ಎಂದರು.

ಸಂಜೆ ಐದರವರೆಗೆ ನಾಲ್ಕು ಬಾರಿ ಕಲಾಪವನ್ನು ಮುಂದೂಡಲಾಯಿತು. ಮತ್ತೆ ಸದನ ಸೇರಿದಾಗಲೂ ಗದ್ದಲ ಮುಂದುವರಿದಿದ್ದರಿಂದ, ರಾಜ್ಯಸಭಾಧ್ಯಕ್ಷ ಸ್ಥಾನದಲ್ಲಿದ್ದ ಸಸ್ಮಿತ ಪಾತ್ರಾ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಿದರು.

ಪ್ರತಿಪಕ್ಷಗಳ ಸದಸ್ಯರು ಸಂಸತ್ತಿನ ಉಭಯ ಸದನಗಳಲ್ಲಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಪ್ರತಿಭಟನೆ ನಡೆಸಿದ್ದರಿಂದ ಪದೇ ಪದೇ ಕಲಾಪವನ್ನು ಮುಂದೂಡಬೇಕಾಯಿತು.

‘ಉನ್ನತ ಶಿಕ್ಷಣ ಆಯೋಗ ಸ್ಥಾಪನೆಗೆ ಮಸೂದೆ ರಚನೆ’: ನವದೆಹಲಿ (ಪಿಟಿಐ): ‘ಭಾರತ ಉನ್ನತ ಶಿಕ್ಷಣ ಆಯೋಗವನ್ನು (ಎಚ್‌ಇಸಿಐ) ಸ್ಥಾಪಿಸುವ ಸಲುವಾಗಿ ಶಿಕ್ಷಣ ಸಚಿವಾಲಯವು ಮಸೂದೆಯನ್ನು ರೂಪಿಸುವ ಕಾರ್ಯದಲ್ಲಿ ತೊಡಗಿದೆ’ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಸೋಮವಾರ ಲೋಕಸಭೆಗೆ ಮಾಹಿತಿ ನೀಡಿದ್ದಾರೆ.

ಶಿಕ್ಷಣ ಸಚಿವಾಲಯವು ಸಂಪುಟದ ಅನುಮೋದನೆ ಪಡೆದು ರಾಷ್ಟ್ರೀಯ ಶಿಕ್ಷಣ ನೀತಿ 2020 (ಎನ್‌ಇಪಿ) ಅನ್ನು 2020ರ ಜುಲೈ 29ರಂದು ಘೋಷಿಸಿದೆ. ನೂತನ ನೀತಿಯು, ಭಾರತ ಉನ್ನತ ಶಿಕ್ಷಣ ಆಯೋಗವನ್ನು ಸ್ಥಾಪಿಸುವಂತೆ ಸೂಚಿಸಿದೆ. ನಿಯಂತ್ರಣ, ಮಾನ್ಯತೆ, ಧನಸಹಾಯ ಮತ್ತು ಶೈಕ್ಷಣಿಕ ಗುಣಮಟ್ಟದ ವಿನ್ಯಾಸ ಎನ್ನುವ ನಾಲ್ಕು ಸ್ವತಂತ್ರ ಅಂಗಗಳು ಭಾರತ ಶಿಕ್ಷಣ ಆಯೋಗದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತವೆ’ ಎಂದು ಅವರು ಲಿಖಿತ ಉತ್ತರ ನೀಡಿದ್ದಾರೆ.

‘ರೈತರ ಸಂದೇಶ ತಂದಿರುವೆ’



ಕೃಷಿ ಕಾಯ್ದೆ ವಿರೋಧಿಸಿ ರೈತರು ನಡೆಸುತ್ತಿರುವ ಹೋರಾಟವನ್ನು ಬೆಂಬಲಿಸಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೋಮವಾರ ಟ್ರ್ಯಾಕ್ಟರ್ ಚಲಾಯಿಸಿಕೊಂಡು ಸಂಸತ್ತಿಗೆ ಬಂದರು– ಪಿಟಿಐ ಚಿತ್ರ

ಕೃಷಿ ಕಾಯ್ದೆ ವಿರೋಧಿಸಿ ರೈತರು ನಡೆಸುತ್ತಿರುವ ಹೋರಾಟವನ್ನು ಬೆಂಬಲಿಸಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೋಮವಾರ ಟ್ರ್ಯಾಕ್ಟರ್ ಚಲಾಯಿಸಿಕೊಂಡು ಸಂಸತ್ತಿಗೆ ಬಂದರು.

ಪಕ್ಷದ ಸಂಸದರೊಂದಿಗೆ ಸಂಸತ್ತಿಗೆ ಬಂದ ಅವರು, ಹೋರಾಟ ನಿರತ ರೈತರ ಸಂದೇಶ ತಂದಿರುವುದಾಗಿ ಹೇಳಿದರು. ‘ರೈತರ ಸಮಸ್ಯೆಗಳನ್ನು ಸಂಸತ್ತಿನಲ್ಲಿ ಚರ್ಚಿಸಲು ಸರ್ಕಾರ ಅವಕಾಶ ಮಾಡಿಕೊಡುತ್ತಿಲ್ಲ. ಅವರ ಹೋರಾಟವನ್ನು ಹತ್ತಿಕ್ಕಲಾಗುತ್ತಿದೆ’ ಎಂದು ಆರೋಪಿಸಿದ ಅವರು, ರೈತಸಮೂಹಕ್ಕೆ ಮಾರಕವಾದ ಕರಾಳ ಕಾಯ್ದೆಗಳನ್ನು ಹಿಂದೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಈ ಬಗ್ಗೆ ಟ್ವೀಟ್ ಕೂಡ ಮಾಡಿರುವ ಅವರು, ‘ಒಂದು ವೇಳೆ ನೀವು, ಜಮೀನನ್ನು ಮಾರುವಂತೆ ರೈತರಿಗೆ ಒತ್ತಾಯ ಮಾಡಿದ್ದೇ ಆದಲ್ಲಿ ಆಗ ಈ ಟ್ರ್ಯಾಕ್ಟರ್ ಸಂಸತ್ತಿನೊಳಗೇ ಹೋಗಲಿದೆ. ನಾವು ಸತ್ಯದ ಬೆಳೆ ಬೆಳೆಯುತ್ತೇವೆ. ಕೃಷಿಗೆ ಮಾರಕವಾದ ಕಾಯ್ದೆಗಳನ್ನು ಹಿಂಪಡೆಯುತ್ತೇವೆ’ ಎಂದಿದ್ದಾರೆ.

ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ 10 ಮಂದಿಯನ್ನು ಬಂಧಿಸಿ, ಟ್ರ್ಯಾಕ್ಟರ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ.

ಮೈಸೂರು ಮಹಾರಾಜರ ಒಡೆತನದ 1,561 ಎಕರೆ ಜಮೀನು

ಸರ್ಕಾರದ ಮೇಲ್ಮನವಿ ವಜಾಗೊಳಿಸಿದ ‘ಸುಪ್ರೀಂ’

ನವದೆಹಲಿ: ಮೈಸೂರಿನಲ್ಲಿರುವ 1,561.31 ಎಕರೆ ಜಮೀನಿನ ಒಡೆತನಕ್ಕೆ ಸಂಬಂಧಿಸಿದಂತೆ ರಾಜ್ಯ ಹೈಕೋರ್ಟ್ ನೀಡಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

‘ಸಾರ್ವಜನಿಕರು ಈ ಜಮೀನಿನಲ್ಲಿನ ನಿವೇಶನ ಖರೀದಿಸಿದ ದಶಕಗಳ ಬಳಿಕ ಸರ್ಕಾರವು ಒಡೆತನ ಸಾಧಿಸಲು ಮುಂದಾಗಿರುವುದು ಸರಿಯಲ್ಲ ಎಂದು ನ್ಯಾಯಮೂರ್ತಿಗಳಾದ ಯು.ಯು. ಲಲಿತ್ ಹಾಗೂ ಅಜಯ್ ರಸ್ತೋಗಿ ಅವರಿದ್ದ ಪೀಠ ಹೇಳಿದೆ.

ನ್ಯಾಯಪೀಠದ ಈ ನಿರ್ಧಾರದಿಂದ ಈ ಜಮೀನಿನ ಮೇಲೆ ಹಕ್ಕು ಸ್ಥಾಪಿಸುವ ಸರ್ಕಾರದ ಯತ್ನ ವಿಫಲವಾದಂತಾಗಿದ್ದು, ಈಗಾಗಲೇ ಜಮೀನಿನಲ್ಲಿನ ನಿವೇಶನ ಖರೀದಿಸಿರುವ ಸಾರ್ವಜನಿಕರು ನಿಟ್ಟುಸಿರು ಬಿಡುವಂತಾಗಿದೆ.

ಬ್ರಿಟಿಷ್ ಸರ್ಕಾರವು ಈ ಜಮೀನನ್ನು ಖರಾಬ್ ಜಮೀನು (ಸಾರ್ವಜನಿಕ ಆಸ್ತಿ) ಎಂದು ಎರಡು ವರ್ಷಗಳ ಕಾಲ ಸಮೀಕ್ಷೆ ನಡೆಸಿ, 1883ರಲ್ಲಿಯೇ ಘೋಷಿಸಿದೆ. ನಂತರ 1921ರಲ್ಲಿ ಇದನ್ನು ‘ಖರಾಬ್ ಜಮೀನು’ ಎಂದು ವರ್ಗೀಕರಿಸಿ ಆದೇಶ ನೀಡಿದೆ. ಆದರೂ, ಕೇಂದ್ರ ಸರ್ಕಾರದ 1950ರ ವಿಲೀನ ಒಪ್ಪಂದದ ಪ್ರಕಾರ ಮೈಸೂರಿನ ಮಹಾರಾಜರ ಒಡೆತನಕ್ಕೆ ಈ ಜಮೀನನ್ನು ನೀಡಲಾಗಿದೆ. ಖರಾಬ್ ಜಮೀನು ಮತ್ತು ಒಡೆತನ ಕುರಿತ ವ್ಯಾಖ್ಯಾನವನ್ನು ಹೈಕೋರ್ಟ್ ತಪ್ಪಾಗಿ ಅರ್ಥೈಸಿಕೊಂಡಿದೆ ಎಂದು ಸರ್ಕಾರದ ಪರ ವಕೀಲ ರಂಜಿತ್ ಕುಮಾರ್ ವಾದ ಮಂಡಿಸಿದರು.

ಖರಾಬ್ ಜಮೀನನ್ನು ಒಡೆತನದೊಂದಿಗೆ ವರ್ಗೀಕರಿಸುವ ನಿಟ್ಟಿನಲ್ಲಿ ತಪ್ಪಾದ ಆದೇಶವನ್ನು ರವಾನಿಸಿರುವ ಹೈಕೋರ್ಟ್, ಗಂಭೀರ ಪ್ರಮಾದ ಎಸಗಿದೆ. ಅಲ್ಲದೆ, ವಿವಾದಿತ ಜಮೀನಿನ ಪೈಕಿ 600 ಎಕರೆ ಜಮೀನನ್ನು ಜನವಸತಿ ಪ್ರದೇಶ ಹಾಗೂ ಸಾರ್ವಜನಿಕ ಬಳಕೆಗೆ ಮೀಸಲಾಗಿದೆ ಎಂದರು.

ಆದರೆ, 1950ರ ನಂತರ ಈ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾಗಿ ಸ್ವತಃ ರಾಜ್ಯ ಸರ್ಕಾರವೇ ಹೇಳಿದೆ. ಹಾಗಾಗಿ, ಈ ಜಮೀನು ಮಹಾರಾಜರಿಗೆ ಸೇರಿದ್ದು ಎಂಬುದನ್ನು ಒಪ್ಪಿಕೊಂಡಂತಾಗಿದೆ ಎಂದು ಹೇಳಿದ ನ್ಯಾಯಪೀಠ ಮೇಲ್ಮನವಿ ವಜಾಗೊಳಿಸಿತು.

ವಾಸಂತಿ ಹೆಗ್ಡೆ ಹಾಗೂ ಕುರುಬರಹಳ್ಳಿ ನಿವಾಸಿಗಳ ಪರ ವಕೀಲ ನಿಶಾಂತ್ ಪಾಟೀಲ ವಾದ ಮಂಡಿಸಿದರು. 1950ರ ವಿಲೀನ ಒಪ್ಪಂದದ ಪ್ರಕಾರ ಮೈಸೂರಿನ ಕುರುಬರಹಳ್ಳಿಯಲ್ಲಿ ಇರುವ ಈ ಜಮೀನಿನ ಒಡೆತನವು ‘ಮಹಾರಾಜ’ರಿಗೆ ಸೇರಿದ್ದು ಎಂದು 2020ರ ಡಿಸೆಂಬರ್ 19ರಂದು ಹೈಕೋರ್ಟ್‌ನ ವಿಭಾಗೀಯ ಪೀಠ ಆದೇಶ ನೀಡಿತ್ತು.

600 ಎಕರೆಯಲ್ಲಿ ಏನಿದೆ?

ಮೈಸೂರಿನಲ್ಲಿರುವ ಈ ಜಮೀನಿನ ಪೈಕಿ 600 ಎಕರೆ ಪ್ರದೇಶದಲ್ಲಿ ಖಾಸಗಿ ಮತ್ತು ಸಾರ್ವಜನಿಕ ಸೊತ್ತುಗಳಿವೆ. ಅರಣ್ಯ ಭೂಮಿ, ರಾಜ್ಯ ಆಡಳಿತ ತರಬೇತಿ ಸಂಸ್ಥೆ (ಎಟಿಐ), ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ (ಎಸ್‌ಐಆರ್‌ಡಿ), ಅಶ್ವದಳ, ಪ್ರಾಣಿ ಸಂಗ್ರಹಾಲಯ, ಕುದುರೆ ಪಾರ್ಕ್, ರೇಸ್ ಕೋರ್ಸ್, ಲಲಿತ ಮಹಲ್, ಹೆಲಿಪ್ಯಾಡ್, ಶೂಟಿಂಗ್ ರೇಂಜ್, ಮಸೀದಿ, ಪೊಲೀಸ್ ಇಲಾಖೆಯ ಮೋಟಾರು ವಿಭಾಗ, ಕಾರಂಜಿ ಮತ್ತು ತಾವರೆಕಟ್ಟೆ ಕೆರೆಗಳು ಇದರಲ್ಲಿ ಒಳಗೊಂಡಿವೆ.

ಅಸ್ಸಾಂ-ಮಿಜೋರಾಂ ಗಡಿ ಸಂಘರ್ಷ ಆರು ಬಲಿ

ಗುವಾಹಟಿ: ಅಸ್ಸಾಂ ಮತ್ತು ಮಿಜೋರಾಂ ನಡುವಣ ಗಡಿ ಸಂಘರ್ಷದ ವೇಳೆ ನಡೆದ ಗುಂಡಿನ ದಾಳಿಯಲ್ಲಿ ಅಸ್ಸಾಂನ ಆರು ಮಂದಿ ಪೊಲೀಸರು ಮೃತಪಟ್ಟಿದ್ದಾರೆ.ಗುಂಡಿನದಾಳಿ ಮತ್ತು ಕಲ್ಲುತೂರಾಟದಲ್ಲಿ 50ಕ್ಕೂಹೆಚ್ಚು ಜನರುಗಾಯಗೊಂಡಿದ್ದಾರೆ. ಈ ಘಟನೆ ಸಂಬಂಧ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಪರಸ್ಪರ ವಾಗ್ವಾದ ನಡೆಸಿದ್ದಾರೆ.

ಈ ರಾಜ್ಯಗಳ ನಡುವಣ ಗಡಿ ಸಂಘರ್ಷ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಭೆ ನಡೆಸಿದ ಎರಡೇ ದಿನದಲ್ಲಿ ಈ ಹಿಂಸಾಚಾರ ನಡೆದಿದೆ. ದಕ್ಷಿಣ ಅಸ್ಸಾಂನ ಕಚಾರ್ ಜಿಲ್ಲೆ ಮತ್ತು ಮಿಜೋರಾಂನ ಕೊಲಾಸಿಬ್ ಜಿಲ್ಲೆಗಳು ಗಡಿ ಹಂಚಿಕೊಂಡಿವೆ. ಅಂತರರಾಜ್ಯ ಗಡಿಯಲ್ಲಿರುವ ಅಸ್ಸಾಂನ ಗಡಿಠಾಣೆಯ ಬಳಿ ಘರ್ಷಣೆ ನಡೆದಿದೆ.

‘ಬೆಳಿಗ್ಗೆ 11.30ರ ಹೊತ್ತಿಗೆ ಅಸ್ಸಾಂನ 200ಕ್ಕೂ ಹೆಚ್ಚು ಪೊಲೀಸರು ನಮ್ಮ ಗಡಿಯೊಳಗೆ ಇರುವ ಆಟೊರಿಕ್ಷಾ ನಿಲ್ದಾಣಕ್ಕೆ ಬಂದು, ಅಲ್ಲಿದ್ದ ಮಿಜೋರಾಂ ಪೊಲೀಸರನ್ನು ಒತ್ತಾಯಪೂರ್ವಕವಾಗಿ ಹಿಮ್ಮೆಟ್ಟಿಸಿದ್ದಾರೆ. ವಾಹನಗಳನ್ನು ಧ್ವಂಸ ಮಾಡಿದ್ದಾರೆ. ನಮ್ಮ ಪೊಲೀಸರ ಮೇಲೆ ದಾಳಿ ನಡೆಸಿದ್ದಾರೆ. ನಮ್ಮ ಪೊಲೀಸರು ಪ್ರತಿದಾಳಿ ನಡೆಸಿದ್ದಾರೆ’ ಎಂದು ಮಿಜೋರಾಂ ಮುಖ್ಯಮಂತ್ರಿ ಜೋರಮಥಂಗಾ ಅವರು ಹೇಳಿದ್ದಾರೆ.

‘ನಮ್ಮ ಪೊಲೀಸ್ ಗಡಿಠಾಣೆಯನ್ನು ಮಿಜೋರಾಂ ಪೊಲೀಸರು ಆಕ್ರಮಿಸಿಕೊಂಡಿದ್ದರು. ಅದನ್ನು ಮರಳಿ ನಿಯಂತ್ರಣಕ್ಕೆ ತೆಗದುಕೊಂಡಿದ್ದೇವೆ. ಈ ಪ್ರಕ್ರಿಯೆಯಲ್ಲಿ ಸಂಘರ್ಷ ನಡೆದಿದೆ’ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತಾ ಬಿಸ್ವಾ ಶರ್ಮಾ ಹೇಳಿದ್ದಾರೆ.

ಭಾರತದ ಸ್ಪರ್ಧಾ ಸಮಯ

ಬ್ಯಾಡ್ಮಿಂಟನ್

ಬೆಳಿಗ್ಗೆ 8.30	ಪುರುಷರ ಡಬಲ್ಸ್ (ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಚಿರಾಗ್ ಶೆಟ್ಟಿ)

ಬಾಕ್ಸಿಂಗ್

ಬೆಳಿಗ್ಗೆ 10.57	ಮಹಿಳೆಯರ ವೆಲ್ಟರ್‌ವೇಟ್ ಪ್ರೀಕ್ವಾರ್ಟರ್‌ಫೈನಲ್ (ಲವ್ಲಿನಾ ಬೊರ್ಗೊಹೈನ್)

ಸೇಲಿಂಗ್

ಬೆಳಿಗ್ಗೆ 8.35	ಮಹಿಳಾ ಲೇಸರ್ ರೇಡಿಯಲ್ ರೇಸ್ 5 (ನೇತ್ರಾ ಕುಮನನ್)
ಬೆಳಿಗ್ಗೆ 8.45	ಪುರುಷರ ಲೇಸರ್ ರೇಸ್ ರೇಸ್ 4 (ವಿಷ್ಣು ಸರವಣನ್)
ಬೆಳಿಗ್ಗೆ 11.20	ಪುರುಷರ 49ಇಆರ್– ರೇಸ್ 1 (ಗಣಪತಿ ಚೆಂಗಪ್ಪ, ವರುಣ್ ಥಕ್ಕರ್)

ಶೂಟಿಂಗ್

ಬೆಳಿಗ್ಗೆ 5.30	ಮಿಶ್ರತಂಡ ವಿಭಾಗದ 10 ಮೀ. ಏರ್ ಪಿಸ್ತೂಲ್ ಅರ್ಹತಾ ಸುತ್ತು (ಸೌರಭ್ ಚೌಧರಿ– ಮನು ಭಾಕರ್, ಅಭಿಷೇಕ್ ವರ್ಮಾ– ಯಶಸ್ವಿನಿ ಸಿಂಗ್ ದೇಸ್ವಾಲ್)
ಬೆಳಿಗ್ಗೆ 7.30	ಮಿಶ್ರತಂಡ ವಿಭಾಗದ 10 ಮೀ. ಏರ್ ಪಿಸ್ತೂಲ್ ಕಂಚಿನ ಪದಕದ ಸುತ್ತು
ಬೆಳಿಗ್ಗೆ 8.07	ಮಿಶ್ರತಂಡ ವಿಭಾಗದ 10 ಮೀ. ಏರ್ ಪಿಸ್ತೂಲ್ ಫೈನಲ್
ಬೆಳಿಗ್ಗೆ 9.45	ಮಿಶ್ರತಂಡ ವಿಭಾಗದ 10 ಮೀ. ಏರ್ ರೈಫಲ್ ಅರ್ಹತಾ ಸುತ್ತು (ದಿವ್ಯಾಂಶ ಸಿಂಗ್– ಇಳವೆನ್ನಿಲಾ, ದೀಪಕ್ ಕುಮಾರ್– ಅಂಜುಮ್ ಮೌದ್ಗಿಲ್)
ಬೆಳಿಗ್ಗೆ 11.45	ಮಿಶ್ರತಂಡ ವಿಭಾಗದ 10 ಮೀ. ಏರ್ ರೈಫಲ್ ಕಂಚಿನ ಪದಕದ ಸುತ್ತು
ಮಧ್ಯಾಹ್ನ 12.20	ಮಿಶ್ರತಂಡ ವಿಭಾಗದ 10 ಮೀ. ಏರ್ ರೈಫಲ್ ಫೈನಲ್

ಟೇಬಲ್ ಟೆನಿಸ್

ಬೆಳಿಗ್ಗೆ 8.30	ಪುರುಷರ ಸಿಂಗಲ್ಸ್ ಮೂರನೇ ಸುತ್ತು (ಅಚಂತ ಶರತ್ ಕಮಲ್)

ಹಾಕಿ (ಪುರುಷರ ತಂಡ)

ಬೆಳಿಗ್ಗೆ 6.30	ಭಾರತ–ಸ್ಪೇನ್

ಭಾರತೀಯ ಕಾಲಮಾನ | ಲೈವ್ ಸೋನಿ ನೆಟ್‌ವರ್ಕ್

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಜಪಾನ್	8	2	3	13
ಅಮೆರಿಕ	7	3	4	14
ಚೀನಾ	6	5	7	18
ರಷ್ಯಾ*	4	5	3	12
ಬ್ರಿಟನ್	3	3	1	7
ಭಾರತ (33ನೇ ಸ್ಥಾನ)	0	1	0	1

*ಒಲಿಂಪಿಕ್ ಸಮಿತಿ ಹೆಸರಿನಲ್ಲಿ ಪಾಲ್ಗೊಳ್ಳುತ್ತಿದೆ



ಟೇಬಲ್ ಟೆನಿಸ್ ಮಿಶ್ರ ವಿಭಾಗದ ಚಿನ್ನ ಗೆದ್ದ ಜಪಾನ್‌ನ ಜುನ್ ಮಿಜುತಾನಿ ಮತ್ತು ಮಿಮಾ ಇಟೊ ಸಂಭ್ರಮಿಸಿದ ಪರಿ –ಎಎಫ್‌ಪಿ ಚಿತ್ರ

ಟೇಬಲ್ ಟೆನಿಸ್: ಮಣಿಕಾ ಬಾತ್ರಾ, ಸುತೀರ್ಥ ಮುಖರ್ಜಿಗೆ ಸೋಲು

ಶರತ್ ಮುನ್ನಡೆ; ಮಹಿಳೆಯರ ಸವಾಲು ಅಂತ್ಯ



ಅಚಂತಾ ಶರತ್ ಕಮಲ್ ಆಟದ ಭಂಗಿ – ರಾಯಿಟರ್ಸ್ ಚಿತ್ರ

ಟೋಕಿಯೊ: ಆರಂಭದಲ್ಲಿ ನಿರಾಸೆ ಕಂಡ ಪಂದ್ಯದಲ್ಲಿ ನಿಧಾನವಾಗಿ ಚೇತರಿಸಿಕೊಂಡ ಅನುಭವಿ ಆಟಗಾರ ಅಚಂತ ಶರತ್ ಕಮಲ್ ಒಲಿಂಪಿಕ್ಸ್ ಟೇಬಲ್ ಟೆನಿಸ್‌ನ ಪುರುಷರ ಸಿಂಗಲ್ಸ್‌ನ ಎರಡನೇ ಸುತ್ತಿನಲ್ಲಿ ಗೆಲುವಿನ ನಗೆ ಬೀರಿದರು.

ಸೋಮವಾರ ನಡೆದ ಪಂದ್ಯದಲ್ಲಿ ಅವರು ಪೋರ್ಚುಗಲ್‌ನ ತಿಯಾಗೊ ಪೊಲೊನಿಯಾ ಎದುರು 2-11, 11-8, 11-5, 9-11, 11-6, 11-9ರಲ್ಲಿ ಗೆದ್ದರು. ಆದರೆ ಮಣಿಕಾ ಬಾತ್ರಾ ಮತ್ತು ಸುತೀರ್ಥ ಮುಖರ್ಜಿ ಸೋಲಿನೊಂದಿಗೆ ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ಸವಾಲು ಕೊನೆಗೊಂಡಿದೆ.

ಮಣಿಕಾ ಬಾತ್ರಾ ಆಸ್ಟ್ರಿಯಾದ ಸೋಫಿಯಾ ಪೊಲ್ಕನೋವಗೆ 8–11, 2–11, 5–11, 7–11ರಲ್ಲಿ ಮಣಿದರೆ, ಪೋರ್ಚುಗಲ್‌ನ 'ಹಿರಿಯ' ಆಟಗಾರ್ತಿ ಯೂ ಫು ಅವರ ಎದುರು 3-11, 3-11, 5-11, 5-11ರಲ್ಲಿ ಸುತೀರ್ಥ ಮುಖರ್ಜಿ ಸೋತರು.

39 ವರ್ಷದ ಶರತ್ ಕಮಲ್ ಮೊದಲ ಗೇಮ್‌ನಲ್ಲಿ ಕೇವಲ ಎರಡು ಪಾಯಿಂಟ್‌ಗಳನ್ನು ಗಳಿಸಿ ನಿರಾಸೆಗೆ ಒಳಗಾದರು. ಆದರೆ ನಂತರದ ಗೇಮ್‌ಗಳಲ್ಲಿ ಚೇತರಿಕೆಯ ಆಟವಾಡಿದರು. ಎದುರಾಳಿ ದಿಟ್ಟ ಹೋರಾಟ ಪ್ರದರ್ಶಿಸಿದರೂ ಎದೆಗುಂದದ ಶರತ್ ಕಮಲ್ ಎರಡು, ಮೂರು ಮತ್ತು ಐದನೇ ಗೇಮ್‌ಗಳಲ್ಲಿ ಸುಲಭ ಜಯ ಗಳಿಸಿದರೆ ನಾಲ್ಕನೇ ಗೇಮ್ ಕೈಚೆಲ್ಲಿದರು. ನಿರ್ಣಾಯಕ ಆರನೇ ಗೇಮ್‌ನಲ್ಲಿ ಒತ್ತಡ ಮೆಟ್ಟಿನಿಂತು ತಿಯಾಗೊ ಅವರ ಸವಾಲನ್ನು ಮೀರಿದರು. ಮುಂದಿನ ಸುತ್ತಿನಲ್ಲಿ ಅವರು ಹಾಲಿ ಚಾಂಪಿಯನ್ ಚೀನಾದ ಮಾ ಲಾಂಗ್ ಎದುರು ಕಣಕ್ಕೆ ಇಳಿಯುವರು.

42ರ ಹರಯದ ಶಕ್ತಿ

42 ವರ್ಷದ ಆಟಗಾರ್ತಿ ಯೂ ಫೂ ಅವರ ಶಕ್ತಿಶಾಲಿ ಹೊಡೆತ ಮತ್ತು ತಂತ್ರಶಾಲಿ ಆಟಕ್ಕೆ ಸುತೀರ್ಥ ಮುಖರ್ಜಿ ಕಂಗಾಲಾದರು. ಮೊದಲ ಸುತ್ತಿನಲ್ಲಿ ಲಿಂಡಾ ಬರ್ಗ್‌ಸ್ಟ್ರೋಮ್ ಎದುರು ಸೋಲಿನ ಸುಳಿಯಿಂದ ಮೇಲೆದ್ದು ಬಂದು ಗೆದ್ದಿದ್ದ ಸುತೀರ್ಥಗೆ ಎರಡನೇ ಸುತ್ತಿನ ಪಂದ್ಯದಲ್ಲಿ ಒಟ್ಟಾರೆ 16 ಪಾಯಿಂಟ್ ಗಳಿಸಲಷ್ಟೇ ಸಾಧ್ಯವಾಯಿತು. ಮಣಿಕಾ ಭಾತ್ರಾ ಅವರಿಗೆ ಒಂದು ಗೇಮ್ ಗೆಲ್ಲುವುದಕ್ಕೂ ಸಾಧ್ಯವಾಗಲಿಲ್ಲ.

ಪಂದ್ಯದ ಅವಧಿ 49 ನಿಮಿಷ

ಗೇಮ್	ಒಂದು	ಎರಡು	ಮೂರು	ನಾಲ್ಕು	ಐದು	ಆರು
ಶರತ್	2	11	11	9	11	11
ತಿಯಾಗೊ	11	8	5	11	6	9



ಸುತೀರ್ಥ ಮುಖರ್ಜಿ –ಎಎಫ್‌ಪಿ ಚಿತ್ರ



ಮಣಿಕಾ ಬಾತ್ರಾ –ಪಿಟಿಐ ಚಿತ್ರ

ಸ್ಕೋರು ವಿವರ

ಶರತ್‌ಕಮಲ್	4	ತಿಯಾಗೊ	2
ಮಣಿಕಾ ಭಾತ್ರ	0	ಸೋಫಿಯಾ	4
ಸುತೀರ್ಥ ಮುಖರ್ಜಿ	0	ಯೂ ಫು	4



ಹಿದಿಲಿನ್ ಡಯಾಸ್ –ಎಎಫ್‌ಪಿ ಚಿತ್ರ

ಹಿದಿಲಿನ್ ಡಯಾಸ್, ಫಿಲಿಪ್ಪೀನ್ಸ್‌ನ 'ಚಿನ್ನ'

ಟೋಕಿಯೊ (ರಾಯಿಟರ್ಸ್): ಮಹಿಳೆಯರ 55 ಕೆಜಿ ವೇಟ್‌ಲಿಫ್ಟಿಂಗ್‌ನಲ್ಲಿ ಚಾಂಪಿಯನ್ ಆದ ಹಿದಿಲಿನ್ ಡಯಾಸ್ ಅವರು ಫಿಲಿಪ್ಪೀನ್ಸ್‌ಗೆ ಚಿನ್ನದ ಸಂಭ್ರಮ ತಂದುಕೊಟ್ಟರು. ಇದು, ಆ ದೇಶ ಒಲಿಂಪಿಕ್ಸ್‌ನಲ್ಲಿ ಗಳಿಸಿದ ಮೊದಲ ಚಿನ್ನದ ಪದಕವಾಗಿದೆ.

ನಾಲ್ಕನೇ ಬಾರಿ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿರುವ 30 ವರ್ಷದ ಹಿದಿಲಿನ್ ಒಟ್ಟು 224 ಕೆಜಿ ಭಾರ ಎತ್ತಿ ಒಲಿಂಪಿಕ್ಸ್ ದಾಖಲೆಯನ್ನೂ ಬರೆದರು. ಫಲಿತಾಂಶ ಹೊರಬೀಳುತ್ತಿದ್ದಂತೆ ಮುಖವನ್ನು ಕೈಗಳಿಂದ ಒತ್ತಿ ಹಿಡಿದ ಅವರು ಆನಂದಬಾಷ್ಪ ಸುರಿಸಿದರು. ಪದಕ ಪ್ರದಾನ ಸಮಾರಂಭದಲ್ಲೂ ಭಾವುಕರಾಗಿದ್ದ ಅವರು 'ಅಟೆನ್ಶನ್'ನಲ್ಲಿ ನಿಂತು ಸಲ್ಯೂಟ್ ಹೊಡೆದು ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸಿದರು.

ಚೀನಾದ ಲಿಯಾವೊ ಕ್ಯುಯುನ್ ಬೆಳ್ಳಿ ಪದಕ ಮತ್ತು ಕಜಕಸ್ತಾನದ ಜುಲ್ಫಿಯಾ ಕಂಚಿನ ಪದಕ ಗೆದ್ದುಕೊಂಡರು.

ಬ್ಯಾಡ್ಮಿಂಟನ್: ಇಂಡೊನೇಷ್ಯಾ ವಿರುದ್ಧ ಭಾರತಕ್ಕೆ ಸೋಲು; ಇಂಗ್ಲೆಂಡ್ ಆಟಗಾರರ ಎದುರು ಮುಂದಿನ ಹಣಾಹಣಿ

ನಂಬರ್ ಒನ್ ಜೋಡಿಗೆ ಚಿರಾಗ್–ಸಾತ್ವಿಕ್ 'ಚಿತ್'

ಟೋಕಿಯೊ (ಪಿಟಿಐ): ವಿಶ್ವ ಕ್ರಮಾಂಕದಲ್ಲಿ ಮೊದಲನೇ ಸ್ಥಾದಲ್ಲಿರುವ ಜೋಡಿಯ ವೇಗ ಮತ್ತು ತಂತ್ರಗಳು ಭಾರತ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಅವರನ್ನು ಕಂಗೆಡಿಸಿದವು. ಒಲಿಂಪಿಕ್ಸ್ ಬ್ಯಾಡ್ಮಿಂಟನ್‌ನ ಪುರುಷರ ಡಬಲ್ಸ್ ವಿಭಾಗದ ಎರಡನೇ ಪಂದ್ಯದಲ್ಲಿ ಚಿರಾಗ್-ಸಾತ್ವಿಕ್ ನೇರ ಗೇಮ್‌ಗಳಿಂದ ಸೋತರು.


ಸೋಮವಾರ ನಡೆದ 'ಎ' ಗುಂಪಿನ ಎರಡನೇ ಸುತ್ತಿನ ಪಂದ್ಯದಲ್ಲಿ ಇಂಡೊನೇಷ್ಯಾದ ಮಾರ್ಕಸ್ ಜಿಡಿಯಾನ್ ಫೆರ್ನಾಲ್ಡಿ ಮತ್ತು ಕೆವಿನ್ ಸಂಜಯ ಸುಕಮುಲ್ಜೊ ವಿಶ್ವ ಕ್ರಮಾಂಕದಲ್ಲಿ 10ನೇ ಸ್ಥಾನದಲ್ಲಿರುವ ಭಾರತದ ಆಟಗಾರರನ್ನು 21–13, 21–12ರಲ್ಲಿ ಮಣಿಸಿದರು. ಈ ಮೂಲಕ ಚಿರಾಗ್-ಸಾತ್ವಿಕ್ ಎದುರು ಈ ವರೆಗೆ ಆಡಿದ ಎಲ್ಲ ಒಂಬತ್ತು ಪಂದ್ಯಗಳನ್ನೂ ಗೆದ್ದ ಸಾಧನೆ ಮಾಡಿದರು.

ಸೋಮವಾರದ ಪಂದ್ಯದೊಂದಿಗೆ ಇಂಡೊನೇಷ್ಯಾ ಜೋಡಿ ಗುಂಪಿನಲ್ಲಿ ಅಗ್ರ ಸ್ಥಾನ ಗಳಿಸಿತು. ಭಾರತದ ಜೋಡಿ ಎರಡನೇ ಸ್ಥಾನದಲ್ಲಿದ್ದು ಮುಂದಿನ ಪಂದ್ಯದಲ್ಲಿ ಇಂಗ್ಲೆಂಡ್‌ನ ಬೆನ್ ಲೇನ್ ಮತ್ತು ಸೀನ್ ವೆಂಡಿ ವಿರುದ್ಧ ಸೆಣಸಲಿದ್ದಾರೆ.

ಪಂದ್ಯವು ಆರಂಭದಲ್ಲಿ ರೋಚಕ ಹೋರಾಟಕ್ಕೆ ಸಾಕ್ಷಿಯಾಯಿತು. ಲಘು ರ್‍ಯಾಲಿಗಳ ಮೂಲಕ ಪಾಯಿಂಟ್‌ಗಳನ್ನು ಗಳಿಸುತ್ತ ಸಾಗಿದ ಉಭಯ ಜೋಡಿ ಒಂದು ಹಂತದಲ್ಲಿ 6–6ರ ಸಮಬಲ ಸಾಧಿಸಿತ್ತು. ನಂತರ ಸತತ ಐದು ಪಾಯಿಂಟ್‌ಗಳನ್ನು ಕಲೆ ಹಾಕಿದ ಮಾರ್ಕಸ್ ಮತ್ತು ಕೆವಿನ್ ವೇಗವಾಗಿ ಮುನ್ನುಗ್ಗಿದರು.

9–13ರ ಹಿನ್ನಡೆಯಲ್ಲಿದ್ದಾಗ ಚಿರಾಗ್ ಕಾಲಿಗೆ ಗಾಯಗೊಂಡು ಚಿಕಿತ್ಸೆ ಪಡೆದರು.

ಎರಡನೇ ಗೇಮ್‌ನ ಆರಂಭದಲ್ಲಿ ಭಾರತದ ಜೋಡಿಗೆ 6–3ರ ಮುನ್ನಡೆ ಗಳಿಸಲು ಸಾಧ್ಯವಾಯಿತು. ಆದರೆ ತಿರುಗೇಟು ನೀಡಿದ ಎದುರಾಳಿಗಳು 9–7ರಲ್ಲಿ ಮುನ್ನಡೆದರು. ವಿರಾಮದ ನಂತರ ಚಿರಾಗ್-ಸಾತ್ವಿಕ್ ಸ್ವಯಂ ತಪ್ಪುಗಳನ್ನು ಎಸಗಿ ಪಾಯಿಂಟ್‌ಗಳನ್ನು ಕಳೆದುಕೊಂಡರು. ಇದು ಇಂಡೊನೇಷ್ಯಾ ಆಟಗಾರರ ಜಯಕ್ಕೆ ಇನ್ನಷ್ಟು ಸಹಕಾರಿಯಾಯಿತು.



ಸ್ಕೋರು

ಇಂಡೊನೇಷ್ಯಾ	2	
ಭಾರತ	0	
ಗೇಮ್ ವಿವರ		
ಇಂಡೊನೇಷ್ಯಾ	21	21
ಭಾರತ	13	12

- ಪಂದ್ಯದ ಅವಧಿ 32 ನಿಮಿಷ
- ಮೊದಲ ಗೇಮ್ 17 ನಿಮಿಷ
- ಎರಡನೇ ಗೇಮ್ 15 ನಿಮಿಷ

ಪಂದ್ಯ ಗೆದ್ದ ಇಂಡೊನೇಷ್ಯಾದ ಮಾರ್ಕಸ್ ಜಿಡಿಯಾನ್ ಫೆರ್ನಾಲ್ಡಿ (ಮುಂದೆ ಇರುವವರು) ಮತ್ತು ಕೆವಿನ್ ಸಂಜಯ ಸುಕಮುಲ್ಜೊ –ಎಎಫ್‌ಪಿ ಚಿತ್ರ

ಇಂಡೊನೇಷ್ಯಾದ ಜೋಡಿ ವಿರುದ್ಧದ ಹಣಾಹಣಿಯಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ (ಮುಂದೆ ಇರುವವರು) ಮತ್ತು ಚಿರಾಗ್ ಶೆಟ್ಟಿ –ಎಎಫ್‌ಪಿ ಚಿತ್ರ

ಕಪ್ಪು ಟಿ–ಶರ್ಟ್ ಸೃಷ್ಟಿಸಿದ ವಿವಾದ

ಹಾಂಕಾಂಗ್ (ಎಎಫ್‌ಪಿ): ಪಂದ್ಯದ ವೇಳೆ ಹಾಂಗ್‌ಕಾಂಗ್ ಆಟಗಾರ ಕಪ್ಪು ಟಿ–ಶರ್ಟ್ ಧರಿಸಿದ್ದು ವಿವಾದ ಸೃಷ್ಟಿಸಿದ್ದು ಚೀನಾದ ರಾಷ್ಟ್ರೀಯವಾದಿ ಮುಖಂಡರು ಆಟಗಾರನ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆದರೆ ಹಾಂಗ್‌ಕಾಂಗ್ ತಂಡ ಆಟಗಾರನ ಬೆಂಬಲಕ್ಕೆ ನಿಂತಿದೆ.

ಶನಿವಾರ ನಡೆದ ಬ್ಯಾಡ್ಮಿಂಟನ್ ಪಂದ್ಯದಲ್ಲಿ ಅಂಗಸ್ ನಂಗ್ ಕ ಲಾಂಗ್ ತಂಡದ ಪೋಷಾಕಿ ಬದಲು ಕಪ್ಪು ಬಟ್ಟೆ ತೊಟ್ಟು ಆಡಿದ್ದರು.

ಅದರ ಮೇಲೆ ಅವರ ಹೆಸರು ಮತ್ತು ಹಾಂಗ್‌ಕಾಂಗ್, ಚೀನಾ ಎಂದು ಬರೆದಿತ್ತು.

ಹಾಂಗ್‌ಕಾಂಗ್‌ನ ಪ್ರಜಾಪ್ರಭುತ್ವ ಹೋರಾಟದ ಸಂಕೇತವಾಗಿ ಕೆಲವೊಮ್ಮೆ ಕಪ್ಪು ಟಿ–ಶರ್ಟ್ ಬಳಸಲಾಗುತ್ತಿದೆ.

ಜೂಲಿಯನ್‌ಗೆ ಕೋವಿಡ್

ಟೋಕಿಯೊ (ಪಿಟಿಐ): ನೆದರ್ಲೆಂಡ್ಸ್‌ನ ಟೆನಿಸ್ ಆಟಗಾರ ಜೀನ್ ಜೂಲಿಯನ್ ರೋಜರ್ ಅವರಿಗೆ ಕೋವಿಡ್ ಸೋಂಕು ತಗುಲಿರುವುದು ಖಚಿತವಾಗಿದೆ.

ರೋಜರ್ ಅವರು ವೆಸ್ಲಿ ಕೂಲ್‌ಹಾಫ್ ಅವರೊಂದಿಗೆ ಡಬಲ್ಸ್‌ನಲ್ಲಿ ಆಡುತ್ತಾರೆ. ಸೋಮವಾರ ಈ ಜೋಡಿಯು ನ್ಯೂಜಿಲೆಂಡ್‌ನ ಮಾರ್ಕಸ್ ಡೇನಿಯಲ್ ಮತ್ತು ಮೈಕೆಲ್ ವೀನಸ್ ಎದುರು ಆಡಬೇಕಿತ್ತು. ಆದರೆ, ರೋಜರ್ ಕೋವಿಡ್ ಫಲಿತಾಂಶವು ಪಾಸಿಟಿವ್ ಆದಾಗ ನೆದರ್ಲೆಂಡ್ಸ್ ಜೋಡಿ ಪಂದ್ಯದಿಂದ ಹಿಂದೆ ಸರಿಯಬೇಕಾಯಿತು. ಭಾನುವಾರ ಒಟ್ಟು 16 ಸೋಂಕು ಪ್ರಕರಣ ವರದಿಯಾಗಿವೆ.

ಸೇಲಿಂಗ್ ಪಟುಗಳಿಗೆ ನಿರಾಸೆ

ಟೋಕಿಯೊ: ಭಾರತದ ಸೇಲಿಂಗ್ ಪಟುಗಳಾದ ವಿಷ್ಣು ಸರವಣನ್ ಮತ್ತು ನೇತ್ರಾ ಕುಮನನ್ ಅವರು ಸ್ಪರ್ಧೆಯ ಎರಡನೇ ದಿನವೂ ನಿರಾಸೆ ಮೂಡಿಸಿದರು.

ಮಹಿಳೆಯರ ಲೇಸರ್ ರೇಡಿಯಲ್ ವಿಭಾಗದಲ್ಲಿ ಮೂರನೇ ರೇಸ್‌ನಲ್ಲಿ ನೇತ್ರಾ 15ನೇ ಸ್ಥಾನ ಗಳಿಸಿದರೆ, ನಾಲ್ಕನೇ ರೇಸ್‌ಅನ್ನು 40ನೇ ಸ್ಥಾನದೊಂದಿಗೆ ಕೊನೆಗೊಳಿಸಿದರು.

ಪುರುಷರ ಲೇಸರ್ ವಿಭಾಗದಲ್ಲಿ ಕಣಕ್ಕಿಳಿದಿರುವ ವಿಷ್ಣು ಎರಡನೇ ರೇಸ್‌ನಲ್ಲಿ 20ನೇ ಸ್ಥಾನ ಗಳಿಸಿದರೆ, ಮೂರನೇ ರೇಸ್‌ನಲ್ಲಿ 24ನೇ ಸ್ಥಾನ ಗಳಿಸಿದರು.

ಮಂಗಳವಾರ ಐದು ಹಾಗೂ ಆರನೇ ರೇಸ್‌ನಲ್ಲಿ ನೇತ್ರಾ ಅವರು ಅದೃಷ್ಟ ಪರೀಕ್ಷಿಸಲಿದ್ದಾರೆ.



ಪುರುಷರ ಲೇಸರ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ವಿಷ್ಣು ಸರವಣನ್– ರಾಯಿಟರ್ಸ್ ಚಿತ್ರ

ಫೆನ್ಸಿಂಗ್: ಗೆದ್ದು ಸೋತ ಭವಾನಿ ದೇವಿ

ಟೋಕಿಯೊ (ಪಿಟಿಐ): ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದ ಭಾರತದ ಮೊದಲ ಫೆನ್ಸಿಂಗ್ ಪಟು ಎಂಬ ದಾಖಲೆ ಬರೆದಿದ್ದ ಸಿ.ಎ.ಭವಾನಿ ದೇವಿ, ಟೋಕಿಯೊ ಕೂಟದ ಎರಡನೇ ಸುತ್ತಿನಲ್ಲಿ ಸೋಮವಾರ ನಿರಾಸೆ ಅನುಭವಿಸಿದರು. ಆದರೆ ಸ್ಪರ್ಧಿಸಿದ್ದ ಮೊದಲ ಒಲಿಂಪಿಕ್ಸ್‌ನಲ್ಲೇ ಅವರು ತೋರಿದ ಹೋರಾಟ ಗಮನ ಸೆಳೆಯಿತು.

ಮಹಿಳೆಯರ ವೈಯಕ್ತಿಕ ಸೇವರ್ ವಿಭಾಗದಲ್ಲಿ 27 ವರ್ಷದ ಭವಾನಿ, ವಿಶ್ವದ ಮೂರನೇ ಕ್ರಮಾಂಕದ, ಫ್ರಾನ್ಸ್ ಸ್ಪರ್ಧಿ ಮನೊನ್ ಬ್ರೂನೆಟ್ ಎದುರು ಎರಡನೇ ಸುತ್ತಿನ ಪಂದ್ಯದಲ್ಲಿ 7–15ರಿಂದ ಸೋತು ಅಭಿಯಾನ ಅಂತ್ಯಗೊಳಿಸಿದರು.

ಮೊದಲ ಸುತ್ತಿನಲ್ಲಿ ಟ್ಯೂನಿಷಿಯಾದ ನಾದಿಯಾ ಬೆನ್ ಅಜೀಜಿ ಅವರನ್ನು 15–3ರಿಂದ ಪರಾಭವಗೊಳಿಸಿದ್ದ ಭವಾನಿ, ಅದೇ ಲಯವನ್ನು ಕಾಯ್ದುಕೊಳ್ಳುವಲ್ಲಿ ವಿಫಲರಾದರು.



ಭಾರತದ ಭವಾನಿ ದೇವಿ (ಬಲ) ಮತ್ತು ಟ್ಯೂನಿಷಿಯಾದ ನಾದಿಯಾ ಬೆನ್ ಅಜೀಜಿ ನಡುವಣ ಹೋರಾಟ–ಎಎಫ್‌ಪಿ ಚಿತ್ರ

ನಾದಿಯಾ ಎದುರು ತೋರಿದ ಆಕ್ರಮಣಕಾರಿ ಶೈಲಿಯು ಭವಾನಿ ಅವರಿಗೆ ಪಾಯಿಂಟ್ಸ್ ತಂದುಕೊಟ್ಟವು. ಮೊದಲ ಮೂರು ನಿಮಿಷಗಳಲ್ಲೇ 8–0ಯಿಂದ ಮುನ್ನಡೆ ಗಳಿಸಿದ್ದರು. ಅದೇ ಲಯದೊಂದಿಗೆ ಮುನ್ನುಗ್ಗಿ ಆರು ನಿಮಿಷ 14 ಸೆಕೆಂಡುಗಳಲ್ಲಿ ಪಂದ್ಯವನ್ನು ತಮ್ಮದಾಗಿಸಿಕೊಂಡರು.

ಆದರೆ ರಿಯೊ ಒಲಿಂಪಿಕ್ಸ್ ಸೆಮಿಫೈನಲಿಸ್ಟ್ ಆಗಿದ್ದ ಬ್ರೂನೆಟ್ ಅನುಭವದ ಎದುರು ಭಾರತದ ಸ್ಪರ್ಧಿ ಮಂಕಾದರು.

ಒಂಬತ್ತು ನಿಮಿಷ 48 ಸೆಕೆಂಡುಗಳಲ್ಲಿ ಪಂದ್ಯವು ಬ್ರೂನೆಟ್ ಪಾಲಾಯಿತು.

ಬ್ರೂನೆಟ್‌ಗೆ ಕಂಚು: ಭವಾನಿ ದೇವಿ ಅವರನ್ನು ಮಣಿಸಿದ್ದ ಬ್ರೂನೆಟ್ ಮಹಿಳೆಯರ ವೈಯಕ್ತಿಕ ಸೇಬರ್ ವಿಭಾಗದಲ್ಲಿ ಕಂಚಿನ ಪದಕಕ್ಕೆ ಮುತ್ತಿಟ್ಟರು. ಪದಕದ ಸುತ್ತಿನಲ್ಲಿ ಅವರು 15–7ರಿಂದ ಹಂಗರಿಯ ಆ್ಯನಾ ಮಾರ್ಟನ್ ಅವರನ್ನು ಪರಾಭವಗೊಳಿಸಿದರು.

ಈ ವಿಭಾಗದ ಚಿನ್ನದ ಪದಕವು ರಷ್ಯಾದ ಸೋಫಿಯಾ ಪೊಜ್‌ನಿಯಾಕವ ಅವರ ಪಾಲಾಯಿತು. ಅದೇ ತಂಡದ ಸೋಫಿಯಾ ವೆಲಿಕಾಯಾ ಬೆಳ್ಳಿ ಪದಕ ಕೊರಳಿಗೇರಿಸಿಕೊಂಡರು.

ಅಡ್ಜಸ್ಟೆಡ್ ಆಫಿಶೀಯಲ್ ರ್‍ಯಾಂಕಿಂಗ್ (ಎಒಆರ್) ಆಧಾರದಲ್ಲಿ ಟೋಕಿಯೊ ಟಿಕೆಟ್ ಗಿಟ್ಟಿಸಿದ್ದ ತಮಿಳುನಾಡಿನ ಭವಾನಿ ಅವರು ಎಂಟು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದರು.

15 ಪಾಯಿಂಟ್ಸ್ ಕಲೆಹಾಕಿದರೆ ಗೆಲುವು

ಫೆನ್ಸಿಂಗ್‌ನ ಸೇವರ್ ವಿಭಾಗ ಅತ್ಯಂತ ವೇಗ ಮತ್ತು ಚುರುಕಿನ ಸ್ಪರ್ಧೆಯಾಗಿದ್ದು, ಎದುರಾಳಿಯು ಸೊಂಟದ ಮೇಲಿನ ಯಾವ ಭಾಗಕ್ಕಾದರೂ ಕತ್ತಿಯಿಂದ ದಾಳಿ ಮಾಡಬಹುದು. ಮೊದಲ 15 ಪಾಯಿಂಟ್ಸ್ ಗಳಿಸುವ ಸ್ಪರ್ಧಿಯನ್ನು ವಿಜೇತರೆಂದು ಘೋಷಿಸಲಾಗುತ್ತದೆ.

ಇನ್ನೆರಡು ವಿಭಾಗಗಳಾದ ಫಾಯಿಲ್ ಮತ್ತು ಎಪಿ ವಿಭಾಗಗಳಲ್ಲಿ ಕತ್ತಿಯ ತುದಿಯಿಂದ ಮಾತ್ರ ದಾಳಿ ಮಾಡಬಹುದಾಗಿದೆ.



ಫೆನ್ಸಿಂಗ್‌ನಲ್ಲಿ ಸ್ಪರ್ಧಿಸಿದ್ದ ಅರ್ಜೆಂಟಿನಾದ ಮರಿಯಾ ಬೆಲೆನ್ ಪರೆಜ್ ಅವರು ಕೋಚ್ ಲುಕಾಸ್ ಗಲೆರ್ಮೊ ನೀಡಿದ ಮದುವೆ ಪ್ರಸ್ತಾವಕ್ಕೆ ಸಮ್ಮತಿಸಿದರು. ಲೂಕಾಸ್, 17 ವರ್ಷಗಳಿಂದ ಮರಿಯಾಗೆ ತರಬೇತಿ ನೀಡುತ್ತಿದ್ದಾರೆ –ರಾಯಿಟರ್ಸ್ ಚಿತ್ರ

ಡ್ಯಾನಿಯಲ್ ಮೆಡ್ವೆಡೆವ್‌ಗೆ ಗೆಲುವು: ಭಾರತದ ಅಭಿಯಾನ ಮುಕ್ತಾಯ

ಸೋತ ನಗಾಲ್, ಮುಗಿದ ಸವಾಲ್

ಟೋಕಿಯೊ (ಪಿಟಿಐ): ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ರಷ್ಯಾದ ಡ್ಯಾನಿಯಲ್ ಮೆಡ್ವೆಡೆವ್ ಎದುರಿನ ಪಂದ್ಯದಲ್ಲಿ ಸೋತ ಭಾರತದ ಯುವ ಆಟಗಾರ ಸುಮಿತ್ ನಗಾಲ್ ಹೊರಬಿದ್ದರು. ಇದರೊಂದಿಗೆ ಒಲಿಂಪಿಕ್ಸ್ ಟೆನಿಸ್‌ನಲ್ಲಿ ಭಾರತದ ಅಭಿಯಾನ ಮುಕ್ತಾಯಗೊಂಡಿತು.



ಭಾರತದ ಟೇಬಲ್ ಟೆನಿಸ್ ಪಟು ಜಿ.ಸತ್ಯನ್ (ಎಡ) ಟೆನಿಸ್ ಆಟಗಾರ ನೊವಾಕ್ ಜೊಕೊವಿಚ್ ಜೊತೆ ತೆಗೆಸಿಕೊಂಡ ಚಿತ್ರವನ್ನು ತಮ್ಮ ಟ್ವಿಟರ್ ಖಾತೆಯಲ್ಲಿ ಹಾಕಿ ಸಂಭ್ರಮಿಸಿದ್ದಾರೆ

ಅರಿಯಾಕೆ ಅಂಗಣದಲ್ಲಿ ಸೋಮವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಬಲಶಾಲಿ ಹೊಡೆತಗಳು ಮತ್ತು ಮಿಂಚಿನ ವೇಗದ ಸರ್ವ್‌ಗಳೊಂದಿಗೆ 160ನೇ ರ್‍ಯಾಂಕ್‌ನ ಸುಮಿತ್ ಅವರನ್ನು ಕಂಗೆಡಿಸಿದ ಮೆಡ್ವೆಡೆವ್ 6-2 6-1ರಲ್ಲಿ ಗೆಲುವು ದಾಖಲಿಸಿದರು.

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ರನ್ನರ್ ಅಪ್ ಮೆಡ್ವೆಡೆವ್ ಆರಂಭದಿಂದಲೇ ಪಂದ್ಯದಲ್ಲಿ ಆಧಿಪತ್ಯ ಸ್ಥಾಪಿಸಿದರು. ಹೀಗಾಗಿ ಒಂದೊಂದು ಪಾಯಿಂಟ್ ಗೆಲ್ಲುವುದಕ್ಕೂ ನಗಾಲ್ ಭಾರಿ ಪ್ರಯತ್ನ ನಡೆಸಬೇಕಾಯಿತು. ಪೂರ್ತಿ ಪಂದ್ಯದಲ್ಲಿ ಅವರಿಗೆ ಒಟ್ಟು ಮೂರು ಗೇಮ್‌ಗಳನ್ನು ಗೆಲ್ಲುವುದಕ್ಕೆ ಮಾತ್ರ ಸಾಧ್ಯವಾಯಿತು.

ಬ್ಯಾಕ್‌ಹ್ಯಾಂಡ್‌ನಲ್ಲಿ ಹೊಡೆದ ಚೆಂಡನ್ನು ನೆಟ್‌ಗೆ ಹಾಕುವುದರೊಂದಿಗೆ ಮೊದಲ ಗೇಮ್‌ನಲ್ಲೇ ಸರ್ವ್ ಕಳೆದುಕೊಂಡ ನಗಾಲ್ ಫೋರ್‌ಹ್ಯಾಂಡ್‌ನಲ್ಲಿ ಹೊಡೆದ ಚೆಂಡು ಬೇಸ್‌ಲೈನ್ ದಾಟುವುದರೊಂದಿಗೆ ಪಂದ್ಯ ಮುಕ್ತಾಯಗೊಂಡಿತು.

ಸ್ಕೋರು ವಿವರ

ಮೆಡ್ವೆಡೆವ್	6	6
ನಗಾಲ್	2	1

- ಪಂದ್ಯದ ಅವಧಿ 1 ತಾಸು 06 ನಿಮಿಷ
- ಮೊದಲ ಸೆಟ್ 30 ನಿಮಿಷ
- ಎರಡನೇ ಸೆಟ್ 36 ನಿಮಿಷ

ಬೇಸ್‌ಲೈನ್‌ನಲ್ಲಿ ನಿಂತು ಶಕ್ತಿಶಾಲಿ ಹೊಡೆತಗಳೊಂದಿಗೆ ಮಿಂಚಿದ ಮೆಡ್ವೆಡೆವ್ ಸತತವಾಗಿ ಕಾಡಿದರು.

ಜೊಕೊವಿಚ್‌ಗೆ ಗೆಲುವು

ಸರ್ಬಿಯಾದ ನೊವಾಕ್ ಜೊಕೊವಿಚ್ ಜರ್ಮನಿಯ ಜಾನ್ ಲೆನಾರ್ಡ್ ಸ್ಟ್ರಫ್ ಎದುರು ಜಯ ಗಳಿಸಿ ಮೂರನೇ ಸುತ್ತು ಪ್ರವೇಶಿಸಿದರು. ಸೋಮವಾರದ ಪಂದ್ಯದಲ್ಲಿ ಜೊಕೊವಿಚ್ 6-4, 6-3ರಲ್ಲಿ ಗೆದ್ದರು. ಒಟ್ಟು 14 ಏಸ್‌ಗಳನ್ನು ಸಿಡಿಸಿದ ಜೊಕೊವಿಚ್ ನಾಲ್ಕು ಬಾರಿ ಮಾತ್ರ ಪ್ರಮಾದ ಎಸಗಿದರು. ಕ್ವಾರ್ಟರ್ ಫೈನಲ್‌ನಲ್ಲಿ ಅವರು ಸ್ಪೇನ್‌ನ ಅಲೆಜಾಂಡ್ರೊ ಡೆವಿಡೊವಿಚ್ ಫೊಕಿನಾ ಎದುರು ಸೆಣಸುವರು.



ಡ್ಯಾನಿಯಲ್ ಮೆಡ್ವೆಡೆವ್ ಚೆಂಡನ್ನು ರಿಟರ್ನ್ ಮಾಡಿದ ರೀತಿ – ರಾಯಿಟರ್ಸ್ ಚಿತ್ರ

ಈಜು ಸ್ಪರ್ಧೆ: ರಿಲೆಯಲ್ಲಿ ಅಮೆರಿಕ ತಂಡದ ಜಯಭೇರಿ: ಕೆಲೆಬ್ ಡ್ರೆಸೆಲ್ ಚಿನ್ನದ ಮುನ್ನುಡಿ

ಲೆಡಕಿಗೆ ಸೋಲಿನ ಕಹಿಯುಣಿಸಿದ ಟಿಟ್ಮಸ್

ಟೋಕಿಯೊ (ಎಪಿ): ಆಸ್ಟ್ರೇಲಿಯಾದ ಆರಿಯಾರ್ನ್ ಟಿಟ್ಮಸ್ ಸೋಮವಾರ ಈಜುಕೊಳದಲ್ಲಿ ಸಂಚಲನ ಮೂಡಿಸಿದರು. ಅಮೆರಿಕದ ಪ್ರಾಬಲ್ಯಕ್ಕೆ ಸವಾಲೊಡ್ಡಿದರು.

ಮಹಿಳೆಯರ 400 ಮೀಟರ್ಸ್ ಫ್ರೀಸ್ಟೈಲ್ ವಿಭಾಗದಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟ ಟಿಟ್ಮಸ್, ರಿಯೊ ಒಲಿಂಪಿಕ್ಸ್ ಚಾಂಪಿಯನ್ ಅಮೆರಿಕದ ಕೇಟಿ ಲೆಡಕಿ ಅವರಿಗೆ ಮೊದಲ ಬಾರಿ ಸೋಲಿನ ರುಚಿ ತೋರಿಸಿದರು.



ಕೇಟಿ ಲೆಡಕಿ

ಎಂಟು ಲ್ಯಾಪ್‌ಗಳ ಈಜಿನಲ್ಲಿ ಅಮೋಘ ಸಾಮರ್ಥ್ಯ ಮೆರೆದ ಟಿಟ್ಮಸ್ (ಇವರಿಗೆ ಟರ್ಮಿನೇಟರ್ ಎಂಬ ನಿಕ್‌ನೇಮ್ ಇದೆ) ಮೂರು ನಿಮಿಷ, 56.69 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಒಲಿಂಪಿಕ್ ಇತಿಹಾಸದಲ್ಲಿ ಎರಡನೇ ಅತಿವೇಗದ ಸಾಧನೆಯಾಗಿದೆ.

ವಿಶ್ವದಾಖಲೆ ಈಜುಗಾರ್ತಿ ಲೆಡಕಿ ಮೂರು ನಿಮಿಷ, 57.36 ಸೆಕೆಂಡುಗಳಲ್ಲಿ ಗುರಿ ತಲುಪಿ ಬೆಳ್ಳಿ ಪದಕ ಪಡೆದರು.

‘ಹೌದು ಇದು ವಾಸ್ತವ. ದೊಡ್ಡ ಸಾಧನೆಗಾಗಿ ಯೋಜನೆ ರೂಪಿಸಿ ಗೆದ್ದಾಗ ಆಗುವ ಸಂತಸಕ್ಕೆ ಪಾರವೇ ಇಲ್ಲ. ಲೆಡಕಿಯನ್ನು ಹಿಂದಿಕ್ಕಲು ಅಪಾರವಾದ ಪ್ರಯತ್ನ ಮತ್ತು ಪರಿಶ್ರಮ ಬೇಕು. ಕೊನೆಯ 200 ಮೀಟರ್ಸ್ ಅಂತರದಲ್ಲಿ ಕಠಿಣ ಪೈಪೋಟಿಯಿತ್ತು. ಅಕೆ ನಿಜಕ್ಕೂ ಅದ್ಭುತ ಈಜುಗಾರ್ತಿ. ಆಕೆಯನ್ನು ಸೋಲಿಸುವ ಗುರಿಯಲ್ಲಿ ನಾನು ಕಲಿತದ್ದು ಅಪಾರ, ಆಕೆಗೆ ಕೃತಜ್ಞತೆ ತಿಳಿಸಿದೆ’ ಎಂದು ಟಿಟ್ಮಸ್ ಸಂಭ್ರಮಿಸಿದರು.

ತಮ್ಮ ಒಲಿಂಪಿಕ್ ಸ್ಪರ್ಧೆಯ ಇತಿಹಾಸದಲ್ಲಿಯೇ ಮೊದಲ ಬಾರಿ ಸೋಲಿನ ಕಹಿ ಅನುಭವಿಸಿದ ಲೆಡಕಿ, ‘ನಾನು ಸಂಪೂರ್ಣ ಸಾಮರ್ಥ್ಯದಿಂದ ಹೋರಾಡಿದೆ. ಅವರು ಬಹಳ ಚೆಂದದ, ಯೋಜನಾಬದ್ಧವಾದ ರೇಸ್ ಮಾಡಿದರು. ಸ್ಪರ್ಧೆಯ ಕೊನೆಯ ಹಂತದಲ್ಲಿ ಪ್ರಾಬಲ್ಯ ಮೆರೆದರು’ ಎಂದರು.

2012ರಲ್ಲಿ 800 ಮೀಟರ್ ಫ್ರೀಸ್ಟೈಲ್‌ನಲ್ಲಿ ಚಿನ್ನ ಗೆದ್ದ ನಂತರ ಲೆಡಕಿ ಜಯದ ಹಾದಿಯಲ್ಲಿಯೇ ನಡೆದಿದ್ದರು. 5 ವರ್ಷಗಳ ಹಿಂದೆ ರಿಯೊದಲ್ಲಿ 200ಮೀ, 400 ಮೀ ಮತ್ತು 800 ಮೀ ಫ್ರೀಸ್ಟೈಲ್ ಈಜಿನಲ್ಲಿ ಚಿನ್ನದ ಪದಕ ಕೊರಳಿಗೇರಿಸಿಕೊಂಡಿದ್ದರು.



ಮುಖ್ಯಾಂಶಗಳು

- ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿ ಸೋತ ಕೆಟಿ ಲೆಡಕಿ
- ಈಜುಕೊಳದಲ್ಲಿ ನವತಾರೆಯಾಗಿ ಹೊರಹೊಮ್ಮಿದ ಟಿಟ್ಮಸ್
- ಅಮೆರಿಕದ ರಿಲೆ ತಂಡಕ್ಕೆ ಚಿನ್ನದ ಸಂಭ್ರಮ

ಆಸ್ಟ್ರೇಲಿಯಾದ ಆರಿಯಾರ್ನ್ ಟಿಟ್ಮಸ್ ಎಎಫ್‌ಪಿ ಚಿತ್ರ

ಈ ವಿಭಾಗದಲ್ಲಿ ಚೀನಾದ ಲೀ ಬಿಂಗ್ಜೀ (4ನಿ, 1.08ಸೆ) ಕಂಚಿನ ಪದಕ ಪಡೆದರು.

ಪುಟಿದೆದ್ದ ಲೆಡಕಿ: 1500 ಮೀ. ಫ್ರೀಸ್ಟೈಲ್‌ನಲ್ಲಿ ಅಗ್ರಸ್ಥಾನ (15 ನಿ. 35.35 ಸೆ) ಗಳಿಸಿ ಲೆಡಕಿ ಫೈನಲ್ ತಲುಪಿದರು. 200 ಮೀ. ಫ್ರೀಸ್ಟೈಲ್ (1 ನಿ.55.28 ಸೆ.) ಹೀಟ್ಸ್‌ನಲ್ಲಿ ಮೊದಲ ಸ್ಥಾನ ಗಳಿಸಿ ಸಂಭ್ರಮಿಸಿದರು.

ಡ್ರೆಸೆಲ್ ಮುನ್ನುಡಿ: ಈಜುಕೊಳದ ದಿಗ್ಗಜ ಮೈಕೆಲ್ ಪೆಲ್ಪ್ಸ್ ಅವರ ‘ವಾರಸುದಾರ’ ಎಂದೇ ಬಿಂಬಿತವಾಗಿರುವ ಅಮೆರಿಕದ ಕೆಲೆಬ್ ಡ್ರೆಸೆಲ್ ಚಿನ್ನದ ಪದಕ ಜಯಿಸುವುದರೊಂದಿಗೆ ಅಭಿಯಾನ ಆರಂಭಿಸಿದರು. ಅವರು ಪುರುಷರ 4X100 ಮೀ ಫ್ರೀಸ್ಟೈಲ್ ರಿಲೆಯಲ್ಲಿ ತಂಡವನ್ನು ಜಯದತ್ತ ಮುನ್ನಡೆಸಿದರು.

ಬ್ಲೇಕ್ ಪೀರೊನಿ, ಬೋವ್ ಬೆಕರ್ ಮತ್ತು ಜ್ಯಾಕ್ ಆ್ಯಪಲ್ ಅವರಿದ್ದ ರಿಲೆ ತಂಡವು ಮೂರು ನಿಮಿಷ, 8.97 ಸೆಕೆಂಡುಗಳಲ್ಲಿ ಗುರಿ ತಲುಪಿತು. ಇಟಲಿ (3ನಿ,10.11ಸೆ) ಮತ್ತು ಆಸ್ಟ್ರೇಲಿಯಾ (3ನಿ,10.22ಸೆ) ತಂಡಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದವು.

ಸಜನ್ ಪ್ರಕಾಶ್ ದ್ವಿತೀಯ

ಭಾರತದ ಸಜನ್ ಪ್ರಕಾಶ್ ಪುರುಷರ 200 ಮೀಟರ್ಸ್ ಬಟರ್‌ಫ್ಲೈ ಹೀಟ್ಸ್‌ನಲ್ಲಿ ಎರಡನೇ ಸ್ಥಾನ ಪಡೆದರು. ಇದರೊಂದಿಗೆ ಅವರು ಸೆಮಿಫೈನಲ್ ಪ್ರವೇಶಿಸುವ ಅರ್ಹತೆ ಪಡೆಯಲಿಲ್ಲ.

ಅವರು ಇಲ್ಲಿ ಒಂದು ನಿಮಿಷ, 57.22ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. 38 ಈಜುಪಟುಗಳಲ್ಲಿ 24ನೇ ಸ್ಥಾನ ಪಡೆದರು. ಈಚೆಗೆ ಇಟಲಿಯಲ್ಲಿ ನಡೆದಿದ್ದ ಈಜು ಚಾಂಪಿಯನ್‌ಷಿಪ್‌ನಲ್ಲಿ ಒಂದು ನಿಮಿಷ, 56.38ಸೆಕೆಂಡುಗಳಲ್ಲಿ ಗುರಿ ಮುಟ್ಟಿ ‘ಎ’ ಅರ್ಹತೆ ಗಿಟ್ಟಿಸಿದ್ದರು.



ಭಾರತದ ಸಜನ್ ಪ್ರಕಾಶ್ –ರಾಯಿಟರ್ಸ್ ಚಿತ್ರ



ಬ್ರಿಟನ್‌ನ ಆ್ಯಡಂ ಪೀಟಿ ಗುರಿಯತ್ತ ಮುನ್ನುಗ್ಗಿದ ರೀತಿ –ಎಎಫ್‌ಪಿ ಚಿತ್ರ

ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಪೀಟಿ ‘ರಾಜ’

ಟೋಕಿಯೊ (ಎಪಿ): ಬ್ರಿಟನ್‌ನ ಆ್ಯಡಂ ಪೀಟಿ ಪುರುಷರ 100 ಮೀಟರ್ಸ್ ಬ್ರೆಸ್ಟ್‌ಸ್ಟ್ರೋಕ್ ಚಿನ್ನದ ಪದಕ ಜಯಿಸಿದರು.

ವಿಶ್ವದಾಖಲೆ ವೀರ ಆ್ಯಡಂ ಇಲ್ಲಿ 57.37 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ನೆದರ್ಲೆಂಡ್‌ನ ಆರ್ನೊ ಕಮಿಂಗಾ (58ಸೆ) ಮತ್ತು ಇಟಲಿಯ (58.33ಸೆ) ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಪಡೆದರು.

ಅಮೆರಿಕದ ಮೈಕೆಲ್ ಆ್ಯಂಡ್ರ್ಯೂ (58.84ಸೆ) ನಾಲ್ಕನೇ ಸ್ಥಾನ ಪಡೆದರು.

ಕೆನಡಾಕ್ಕೆ ಮೊದಲ ಪದಕ: ಕೆನಡಾ ದೇಶಕ್ಕೆ ಮೊದಲ ಪದಕದ ಕಾಣಿಕೆಯನ್ನು ಮ್ಯಾಗಿ ಮೆಕ್‌ನೀಲ್ ಕೊಟ್ಟರು. ಮಹಿಳೆಯರ 100 ಮೀಟರ್ಸ್ ಬಟರ್‌ಫ್ಲೈನಲ್ಲಿ ಅವರು 55.59ಸೆಕೆಂಡುಗಳಲ್ಲಿ ಗುರಿಮುಟ್ಟಿ ಪ್ರಥಮರಾದರು.

ಚೀನಾದ ಝೂಂಗ್ ಯೂಫಿ (55.64ಸೆ) ಮತ್ತು ಆಸ್ಟ್ರೇಲಿಯಾದ ಎಮಾ ಮೆಕಾನ್ (55.72) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗಳಿಸಿದರು. ಅಮೆರಿಕದ ‘ಬಾಲಕಿ’ ಟೋರಿ ಹಸ್ಕಿ ಕೂದಲೆಳೆಯ ಅಂತರದಲ್ಲಿ ಪದಕ ತಪ್ಪಿಸಿಕೊಂಡು ನಾಲ್ಕನೇ ಸ್ಥಾನದಲ್ಲಿ ಉಳಿದರು.

ಹಾಲಿ ಚಾಂಪಿಯನ್ ಸ್ವೀಡನ್‌ನ ಸಾರಾ ಸ್ಟ್ಯಾರ್ಮ್ ಏಳನೇ ಸ್ಥಾನ ಪಡೆದರು.

ಡೈವಿಂಗ್: ಬ್ರಿಟನ್ ಜೋಡಿಯ ಕರಾಮತ್ತು

ಟೋಕಿಯೊ (ಪಿಟಿಐ): ಬ್ರಿಟನ್‌ನ ಟಾಮ್ ಡೇಲಿ ಮತ್ತು ಮ್ಯಾಟಿ ಲೀ ಜೋಡಿಯು ಸೋಮವಾರ ಪುರುಷರ 10 ಮೀಟರ್ಸ್ ಸಿಂಕ್ರೊನೈಜ್ಡ್ ಡೈವಿಂಗ್‌ನಲ್ಲಿ ಚಿನ್ನದ ಪದಕ ಗೆದ್ದರು.

ಈ ವಿಭಾಗದಲ್ಲಿ ಪ್ರಥಮ ಸ್ಥಾನ ಗೆಲ್ಲುವ ನಿರೀಕ್ಷೆ ಮೂಡಿಸಿದ್ದ ಚೀನಾದ ಕೋ ಯುವಾನ್ ಮತ್ತು ಚೆನ್ ಎಸೆನ್ ಬೆಳ್ಳಿ ಪದಕ ಪಡೆದರು. ಡೈವಿಂಗ್‌ನಲ್ಲಿ ಚೀನಾದ ಪ್ರಾಬಲ್ಯಕ್ಕೆ ಸೆಡ್ಡು ಹೊಡೆದ ಬ್ರಿಟನ್ ಜೋಡಿಯು 471.81 ಪಾಯಿಂಟ್ ಗಳಿಸಿ ಪ್ರಥಮರಾದರು. ಚೀನಾ (470.58) ಎರಡನೇ ಸ್ಥಾನಕ್ಕಿಳಿಯಿತು. ಆರ್‌ಒಸಿಯ ಅಲೆಕ್ಸಾಂಡರ್ ಬಾಂಡರ್ ಮತ್ತು ವಿಕ್ಟರ್ ಮಿನಿಬೇವ್ ಮೂರನೇ ಸ್ಥಾನ ಪಡೆದರು.



ಪುರುಷರ ಡೈವಿಂಗ್‌ನಲ್ಲಿ ಬ್ರಿಟನ್‌ನ ಡೇಲಿ ಮತ್ತು ಮ್ಯಾಟಿ ಲೀ ಜೋಡಿಯ ಪ್ರದರ್ಶನ



ನವದೆಹಲಿಗೆ ಬಂದಿಳಿದ ವೇಟ್‌ಲಿಫ್ಟರ್ ಮೀರಾಬಾಯಿ ಚಾನು –ಪಿಟಿಐ ಚಿತ್ರ

ಮೀರಾಗೆ ಅದ್ದೂರಿ ಸ್ವಾಗತ

ನವದೆಹಲಿ/ಇಂಫಾಲ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ವೇಟ್‌ಲಿಫ್ಟಿಂಗ್‌ನಲ್ಲಿ ಬೆಳ್ಳಿ ಪದಕ ಜಯಿಸಿದ ಮೀರಾಬಾಯಿ ಚಾನು ಸೋಮವಾರ ಭಾರತಕ್ಕೆ ಮರಳಿದರು.

ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅವರಿಗೆ ಅದ್ದೂರಿ ಸ್ವಾಗತ ದೊರೆಯಿತು. ಈ ವೇಳೆ ಜನ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರಿಂದ ದೈಹಿಕ ಅಂತರ ನಿಯಮ ಮಾಯವಾಗಿತ್ತು.

ವಿಮಾನ ನಿಲ್ದಾಣದ ಸಿಬ್ಬಂದಿ ಮತ್ತಿತರರು ಭಾರತ್ ಮಾತಾ ಕೀ ಜೈ, ಮೀರಾಬಾಯಿಗೆ ಜಯವಾಗಲಿ ಎಂದು ಕೂಗಿದರು. ಭಾರತ ಕ್ರೀಡಾ ಪ್ರಾಧಿಕಾರ ಅಧಿಕಾರಿಗಳು ಮೀರಾಬಾಯಿಯನ್ನು ಗೌರವಿಸಿ ಬರಮಾಡಿಕೊಂಡರು.

ಮೂರು ಕೋಟಿ ಬಹುಮಾನ: ಮೀರಾಬಾಯಿಗೆ ₹ 2 ಕೋಟಿ ಬಹುಮಾನ ಮತ್ತು ಅವರು ಉದ್ಯೋಗದಲ್ಲಿರುವ ರೈಲ್ವೆ ಇಲಾಖೆಯ ಹುದ್ದೆಯಲ್ಲಿ ಬಡ್ತಿ ನೀಡಲಾಗುವುದು ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ ಅವರು ಸೋಮವಾರ ತಿಳಿಸಿದ್ದಾರೆ.

ಒಂದು ಕೋಟಿ ರೂಪಾಯಿ ಬಹುಮಾನವನ್ನು ಮಣಿಪುರದ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಈ ಮೊದಲು ಪ್ರಕಟಿಸಿದ್ದರು. ‘ಚಾನು ಅವರನ್ನು ಹೆಚ್ಚುವರಿ ಪೊಲೀಸ್ ಸೂಪರಿಟೆಂಡೆಂಟ್ ಆಗಿ ನೇಮಕ ಮಾಡಲಾಗಿದೆ. ರಾಜ್ಯದಲ್ಲಿ ವಿಶ್ವದರ್ಜೆಯ ವೇಟ್‌ಲಿಫ್ಟಿಂಗ್ ಆಕಾಡೆಮಿಯನ್ನೂ ಆರಂಭಿಸಲಾಗುವುದು’ ಎಂದು ಸಿಂಗ್ ತಿಳಿಸಿದ್ದಾರೆ.

ಇದೇ ಒಲಿಂಪಿಕ್‌ನಲ್ಲಿ ಸ್ಪರ್ಧಿಸಿದ್ದ ಮಣಿಪುರದ ಜುಡೋ ಪಟು ಸುಶೀಲಾ ದೇವಿ ಅವರಿಗೆ ಕಾನ್ಸ್‌ಟೇಬಲ್ ನಿಂದ ಸಬ್ ಇನ್ಸ್‌ಪೆಕ್ಟರ್ ಆಗಿ ಬಡ್ತಿ ನೀಡಲಾಗಿದೆ.

ಆರ್ಚರಿ: ಭಾರತ ಪುರುಷರ ತಂಡದ ಹೋರಾಟ ಅಂತ್ಯ

ಟೋಕಿಯೊ (ಪಿಟಿಐ): ಆರ್ಚರಿ ಸ್ಪರ್ಧೆಯಲ್ಲಿ ಭಾರತ ಪುರುಷರ ತಂಡದ ಸವಾಲು ಕೊನೆಗೊಂಡಿದೆ.

ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಅತನು ದಾಸ್, ಪ್ರವೀಣ್ ಜಾಧವ್ ಹಾಗೂ ತರುಣ್‌ದೀಪ್ ರಾಯ್ ಅವರಿದ್ದ ತಂಡ 0–6ರಿಂದ ಬಲಿಷ್ಠ ದಕ್ಷಿಣಕೊರಿಯಾಕ್ಕೆಶರಣಾಯಿತು.

ಕಿಮ್ ಜೆ ಡಿಯೊಕ್, ಒಹ್ ಜಿನ್ ಹಯೆಕ್ ಮತ್ತು ಕಿಮ್ ವೂಜಿನ್ ಅವರನ್ನೊಳಗೊಂಡ ಕೊರಿಯಾ ತಂಡ ಎಲ್ಲಾ ಸೆಟ್‌ಗಳಲ್ಲೂ ಪ್ರಾಬಲ್ಯ ಮೆರೆಯಿತು.

ಇದಕ್ಕೂ ಮುನ್ನ ನಡೆದಿದ್ದ ಕಜಕಸ್ತಾನ ಎದುರಿನ ಪೈಪೋಟಿಯಲ್ಲಿ ಭಾರತ 6–2ರಿಂದ ಗೆದ್ದಿತ್ತು.



ಅಬ್ದುಲ್ಲಾ ಅಲ್‌ರಶೀದಿ

58 ವರ್ಷದ ಅಬ್ದುಲ್ಲಾಗೆ ಕಂಚು

ಟೋಕಿಯೊ (ಪಿಟಿಐ): ಸಾಧನೆಗೆ ವಯಸ್ಸು ಅಡ್ಡಿಯಾಗುವುದಿಲ್ಲವೆಂಬ ಮಾತಿಗೆ ಕುವೈತ್‌ನ ಅಬ್ದುಲ್ಲಾ ಅಲ್‌ರಶೀದಿ ಸಾಕ್ಷಿಯಾಗಿದ್ದಾರೆ.

58 ವರ್ಷದ ಅಬ್ದುಲ್ಲಾ ಸೋಮವಾರ ನಡೆದ ಪುರುಷರ ಸ್ಕೀಟ್‌ನಲ್ಲಿ ಕಂಚಿನ ಪದಕ ಗಳಿಸಿದರು.

‘ಈ ಸ್ಪರ್ಧೆಯಲ್ಲಿ ಭಾಗವಹಿಸಿರುವ ಅತ್ಯಂತ ಹಿರಿಯ ವಯಸ್ಸಿನ ಶೂಟರ್ ನಾನು. 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುತ್ತೇನೆ’ ಎಂದು ಅಬ್ದುಲ್ಲಾ ವಿಶ್ವಾಸ ವ್ಯಕ್ತಪಡಿಸಿದರು.



ಜರ್ಮನಿಯ ನೈಕಿ ಲೊರೆಂಜ್ (ಬಲ) ಹಾಗೂ ಭಾರತದ ವಂದನಾ ಕಟಾರಿಯಾ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಿಸಿದರು –ಎಎಫ್‌ಪಿ ಚಿತ್ರ

ಜರ್ಮನಿಗೆ ಶರಣಾದ ಭಾರತ

ಟೋಕಿಯೊ (ಪಿಟಿಐ): ಸಿಕ್ಕ ಅವಕಾಶಗಳನ್ನು ಸುಲಭವಾಗಿ ಕೈಚೆಲ್ಲಿದ ಭಾರತದ ಮಹಿಳಾ ಹಾಕಿ ತಂಡದವರು ಟೋಕಿಯೊ ಕೂಟದಲ್ಲಿ ಮತ್ತೆ ನಿರಾಸೆ ಕಂಡರು.

ಒಯಿ ಹಾಕಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ‘ಎ’ ಗುಂಪಿನ ತನ್ನ ಎರಡನೇ ಪಂದ್ಯದಲ್ಲಿ ರಾಣಿ ರಾಂಪಾಲ್ ಬಳಗ 0–2 ಗೋಲುಗಳಿಂದ ಜರ್ಮನಿ ಎದುರು ಪರಾಭವಗೊಂಡಿತು. ಮೊದಲ ಪಂದ್ಯದಲ್ಲಿ ತಂಡವು 1–5 ಗೋಲುಗಳಿಂದ ನೆದರ್ಲೆಂಡ್ಸ್‌ಗೆ ಶರಣಾಗಿತ್ತು.

ರಾಣಿ ಪಡೆಗೆ ಈ ಪಂದ್ಯದಲ್ಲಿ ಅದೃಷ್ಟ ಕೈಹಿಡಿಯಲಿಲ್ಲ. ಸಿಕ್ಕ ಅವಕಾಶಗಳನ್ನು ಗೋಲಾಗಿ ಪರಿವರ್ತಿಸಲು ಆಟಗಾರ್ತಿಯರು ವಿಫಲರಾದರು. ಮೂರನೇ ಕ್ವಾರ್ಟರ್‌ನಲ್ಲಿ ಲಭಿಸಿದ ಪೆನಾಲ್ಟಿ ಸ್ಟ್ರೋಕ್ ಅವಕಾಶವನ್ನು ಗುರ್ಜಿತ್ ಕೌರ್ ಹಾಳು ಮಾಡಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 3ನೇ ಸ್ಥಾನದಲ್ಲಿರುವ ಜರ್ಮನಿಗೆ ಮೊದಲ ಕ್ವಾರ್ಟರ್‌ನ ಆರಂಭದಲ್ಲಿ ಪ್ರಬಲ ಪ್ರತಿರೋಧ ಎದುರಾಯಿತು. ಹೀಗಿದ್ದರೂ ಎದುರಾಳಿ ತಂಡದ ನಾಯಕಿ ನೈಕಿ ಲೊರೆಂಜ್ 12ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿದರು. 35ನೇ ನಿಮಿಷದಲ್ಲಿ ಆ್ಯನಾ ಶ್ರೋಡರ್ ಗೋಲು ಬಾರಿಸಿ ತಂಡದ ಗೆಲುವನ್ನು ಖಾತ್ರಿ ಪಡಿಸಿದರು. ಭಾರತದ ಗೋಲ್‌ಕೀಪರ್ ಸವಿತಾ, ಬ್ರಿಟನ್ ಆಟಗಾರ್ತಿಯರ ಅನೇಕ ಪ್ರಯತ್ನಗಳನ್ನು ವಿಫಲಗೊಳಿಸಿ ಗಮನಸೆಳೆದರು.

ತನ್ನ ಮೂರನೇ ಪಂದ್ಯದಲ್ಲಿ ಭಾರತವು ಬ್ರಿಟನ್ ಎದುರು ಸೆಣಸಲಿದೆ. ಈ ಹೋರಾಟ ಬುಧವಾರ ನಿಗದಿಯಾಗಿದೆ.

ಪುರುಷರ ತಂಡಕ್ಕೆ ಸ್ಪೇನ್ ಸವಾಲು

ಟೋಕಿಯೊ: ತನ್ನ ಪಾಲಿನ ಎರಡನೇ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ಮುಗ್ಗರಿಸಿರುವ ಭಾರತ ಪುರುಷರ ಹಾಕಿ ತಂಡವು ಗೆಲುವಿನ ಹಳಿಗೆ ಮರಳುವ ತವಕದಲ್ಲಿದೆ.

‘ಎ’ ಗುಂಪಿನ ತನ್ನ ಮೂರನೇ ಪಂದ್ಯದಲ್ಲಿ ಭಾರತ, ರ‍್ಯಾಂಕಿಂಗ್‌ನಲ್ಲಿ ತನಗಿಂತಲೂ ಕೆಳಗಿನ ಸ್ಥಾನದಲ್ಲಿರುವ ಸ್ಪೇನ್ ಎದುರು ಮಂಗಳವಾರ ಹೋರಾಡಲಿದೆ. ಆಸ್ಟ್ರೇಲಿಯಾ ಎದುರಿನ ಪೈಪೋಟಿಯಲ್ಲಿ ಭಾರತದ ರಕ್ಷಣಾ ವಿಭಾಗ ಸೊರಗಿತ್ತು. ಈ ವಿಭಾಗವನ್ನು ಬಲಪಡಿಸಿಕೊಂಡು ಹೋರಾಡಿದರೆ ಭಾರತಕ್ಕೆ ಗೆಲುವು ಒಲಿಯುವುದು ನಿಶ್ಚಿತ.

ಸ್ಕೀಟ್‌ನಲ್ಲಿ ಭಾರತಕ್ಕೆ ನಿರಾಸೆ

ಶೂಟಿಂಗ್: ಮೂರನೇ ಚಿನ್ನ ಗೆದ್ದ ಅಮೆರಿಕದ ವಿನ್ಸೆಂಟ್ ಹ್ಯಾನ್‌ಕಾಕ್

ಟೋಕಿಯೊ (ಪಿಟಿಐ/ರಾಯಿಟರ್ಸ್): ಸ್ಕೀಟ್‌ನಲ್ಲಿ ನಿರಾಸೆ ಅನುಭವಿಸಿದ ಭಾರತದ ಶೂಟಿಂಗ್ ತಂಡ ಟೋಕಿಯೊ ಒಲಿಂಪಿಕ್ಸ್‌ನ ಮೊದಲ ಪದಕದ ನಿರೀಕ್ಷೆಯೊಂದಿಗೆ ಮಿಶ್ರ ವಿಭಾಗದಲ್ಲಿ ಮಂಗಳವಾರ ಸ್ಪರ್ಧೆಗಿಳಿಯಲಿದೆ.

ಸೋಮವಾರ ನಡೆದ ಸ್ಕೀಟ್‌ನಲ್ಲಿ ಭಾರತದ ಅಂಗದ್ ವೀರ್ ಸಿಂಗ್ ಬಜ್ವ ಮತ್ತು ಮೆರಾಜ್ ಅಹಮ್ಮದ್ ಖಾನ್ ಫೈನಲ್ ಪ್ರವೇಶಿಸಲಾಗದೆ ನಿರಾಸೆ ಅನುಭವಿಸಿದರು. ಇವರು ಕ್ರಮವಾಗಿ 18 ಮತ್ತು 25ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು. ಅಮೆರಿಕದ ಶೂಟರ್‌ಗಳು ಪುರುಷ ಮತ್ತು ಮಹಿಳಾ ವಿಭಾಗಗಳೆರಡರಲ್ಲೂ ಚಿನ್ನ ಗೆದ್ದುಕೊಂಡರು. 25 ವರ್ಷದ ಅಂಗದ್ ಐದು ಸೀರಿಸ್‌ಗಳಲ್ಲಿ 120 ಸ್ಕೋರು ಮತ್ತು ಮೆರಾಜ್ 117 ಸ್ಕೋರು ಗಳಿಸಿದರು.

10 ಮೀಟರ್ಸ್ ಏರ್ ಪಿಸ್ತೂಲು ಮಿಶ್ರ ವಿಭಾಗದಲ್ಲಿ ಸೌರಭ್ ಚೌಧರಿ ಮತ್ತು ಮನು ಭಾಕರ್ ಕಣಕ್ಕೆ ಇಳಿಯುವರು. ಇತ್ತೀಚಿನ ವರ್ಷಗಳಲ್ಲಿ ಅಮೋಘ ಸಾಧನೆ ಮಾಡಿರುವುದರಿಂದ ಇವರಿಬ್ಬರ ಮೇಲೆ ಭರವಸೆ ಮೂಡಿದೆ. ಅಭಿಷೇಕ್ ವರ್ಮಾ ಮತ್ತು ಯಶಸ್ವಿನಿ ಸಿಂಗ್ ದೇಸ್ವಾಲ್ ಸ್ಪರ್ಧೆಯಲ್ಲಿರುವ ಮತ್ತೊಂದು ಜೋಡಿ. 10 ಮೀಟರ್ಸ್ ರೈಫಲ್ ಮಿಶ್ರ ವಿಭಾಗದಲ್ಲಿ ದಿವ್ಯಾಂಶ್ ಸಿಂಗ್ ಪನ್ವರ್ ಮತ್ತು ಇಳವೆನ್ನಿಲ ವಾಳರಿವನ್ ಜೋಡಿ ದೀಪಕ್ ಕುಮಾರ್ ಮತ್ತು ಅಂಜುಮ್ ಮೌದ್ಗಿಲ್ ಅವರೊಂದಿಗೆ ಕಣಕ್ಕೆ ಇಳಿಯಲಿದ್ದಾರೆ.

ಏರ್ ಪಿಸ್ತೂಲು ವಿಭಾಗದಲ್ಲಿ 20 ಜೋಡಿಗಳು ಇದ್ದು ರಷ್ಯಾ, ಇರಾನ್, ಚೀನಾ, ಫ್ರಾನ್ಸ್ ಮತ್ತು ಸರ್ಬಿಯಾ ಶೂಟರ್‌ಗಳು ಭಾರತಕ್ಕೆ ಸವಾಲೆಸೆಯುವ ಸಾಧ್ಯತೆ ಇದೆ. ರೈಫಲ್ ವಿಭಾಗದಲ್ಲಿ 29 ಜೋಡಿಗಳಿದ್ದು ಹಂಗರಿ, ರಷ್ಯಾ, ಅಮೆರಿಕ, ಚೀನಾ ಮತ್ತು ಜರ್ಮನಿ ಪದಕಗಳನ್ನು ಗೆಲ್ಲುವ ನೆಚ್ಚಿನ ತಂಡಗಳಾಗಿವೆ.

ಅಮೆರಿಕದ ವಿನ್ಸೆಂಟ್ ಹ್ಯಾನ್‌ಕಾಕ್ ಪುರುಷರ ಸ್ಕೀಟ್‌ನಲ್ಲಿ ಮೂರನೇ ಚಿನ್ನ ಗೆದ್ದುಕೊಂಡರು. ಬೀಜಿಂಗ್ ಮತ್ತು ಲಂಡನ್ ಒಲಿಂಪಿಕ್ಸ್‌ನಲ್ಲೂ ಮೊದಲಿಗರಾಗಿದ್ದ ಅವರು ಡೆನ್ಮಾರ್ಕ್‌ನ ಜೆಸ್ಪೆರ್ ಹ್ಯಾನ್ಸೆನ್ ಮತ್ತು ಕುವೈತ್‌ನ ಅಬ್ದುಲ್ಲ ಅಲ್‌ರಶೀದ್ ಅವರನ್ನು ಹಿಂದಿಕ್ಕಿದರು.

ಮಹಿಳೆಯರ ವಿಭಾಗದಲ್ಲಿ ಅಮೆರಿಕದ ಆ್ಯಂಬರ್ ಇಂಗ್ಲಿಷ್ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಇಟಲಿಯ ಡಯಾನ ಬಕೋಸಿ ಬೆಳ್ಳಿ ಮತ್ತು ಚೀನಾದ ವೀ ಮೆಂಗ್ ಕಂಚಿನ ಪದಕ ಗಳಿಸಿದರು.



ಪುರುಷರ ಸ್ಕೀಟ್‌ನಲ್ಲಿ ಚಿನ್ನ ಗೆದ್ದ ಅಮೆರಿಕದ ವಿನ್ಸೆಂಟ್ ಹ್ಯಾನ್‌ಕಾಕ್ – ರಾಯಿಟರ್ಸ್ ಚಿತ್ರ

ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್: ರಷ್ಯಾದ ಪ್ರಾಬಲ್ಯ

ಟೋಕಿಯೊ (ರಾಯಿಟರ್ಸ್): ನಿಕಿತ ನಗೊರ್ನಿ ನೇತೃತ್ವದ ರಷ್ಯನ್ ಒಲಿಂಪಿಕ್ಸ್ ಸಮಿತಿಯು ಒಲಿಂಪಿಕ್ಸ್‌ನ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್‌ನ ಪುರುಷರ ತಂಡ ವಿಭಾಗದಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟಿದೆ.

ಸೋಮವಾರ ಇಲ್ಲಿನ ಅರಿಯೇಕ್ ಜಿಮ್ನಾಸ್ಟಿಕ್ಸ್ ಸೆಂಟರ್‌ನಲ್ಲಿ ನಡೆದ ಸ್ಪರ್ಧೆಗಳಲ್ಲಿ, ಈ ಹಿಂದಿನ ಚಾಂಪಿಯನ್ ಜಪಾನ್ ಮತ್ತು ಚೀನಾ ತಂಡಗಳನ್ನು ರಷ್ಯಾ ಹಿಂದಿಕ್ಕಿತು. ಜಪಾನ್ ಬೆಳ್ಳಿ ಗೆದ್ದರೆ, ಕಂಚು ಚೀನಾದ ಪಾಲಾಯಿತು.

1996ರಲ್ಲಿ ಕೊನೆಯ ಬಾರಿ ರಷ್ಯಾ, ಪುರುಷರ ವಿಭಾಗದ ಚಿನ್ನ ಗೆದ್ದುಕೊಂಡಿತ್ತು.

ಬೈಲ್ಸ್ ಬಳಗಕ್ಕೆ ರಷ್ಯಾ ಸವಾಲು: 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಗೆದ್ದ ಪ್ರಶಸ್ತಿ ಉಳಿಸಿಕೊಳ್ಳುವ ತವಕದಲ್ಲಿರುವ ಸಿಮೋನ್ ಬೈಲ್ಸ್ ಅವರನ್ನೊಳಗೊಂಡ ಅಮೆರಿಕ ಮಹಿಳಾ ತಂಡವು ಮಂಗಳವಾರ ರಷ್ಯಾ ಸವಾಲಿಗೆ ಸಜ್ಜಾಗಿದೆ.

ಮಹಿಳಾ ತಂಡ ವಿಭಾಗದ ಫೈನಲ್ ಮಂಗಳವಾರ ನಿಗದಿಯಾಗಿದೆ.

2011ರ ಬಳಿಕ ನಡೆದ ಎಲ್ಲ ವಿಶ್ವ ಚಾಂಪಿಯನ್‌ಷಿಪ್ ಮತ್ತು ಒಲಿಂಪಿಕ್ಸ್‌ಗಳಲ್ಲಿ ಅಮೆರಿಕವು ತಂಡ ವಿಭಾಗಗಳಲ್ಲಿ ಪಾರಮ್ಯ ಮೆರೆದಿದೆ. ಆದರೆ ಭಾನುವಾರ ನಡೆದ ಅರ್ಹತಾ ಸುತ್ತುಗಳಲ್ಲಿ ಆ ದೇಶದ ಮಹಿಳೆಯರಿಗೆ ರಷ್ಯಾ ಸ್ಪರ್ಧಿಗಳು ಕಠಿಣ ಪೈಪೋಟಿ ಒಡ್ಡಿದ್ದರು. ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಗಳನ್ನು ಗಳಿಸಿದ್ದರು.



ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ರಷ್ಯಾದ ಆರ್ಥರ್ ಡ್ಯಾಲಾಲೊಯನ್ – ರಾಯಿಟರ್ಸ್ ಚಿತ್ರ

ಮೂರು ತಂಡಗಳು ಗಳಿಸಿದ ಪಾಯಿಂಟ್ಸ್

ರಷ್ಯನ್ ಒಲಿಂಪಿಕ್ ಸಮಿತಿ	262.500
ಜಪಾನ್	262.397
ಚೀನಾ	261.894

ಟೆಸ್ಟ್ ಸರಣಿ: ಗಾಯಗೊಂಡಿರುವ ಶುಭಮನ್ ಗಿಲ್, ಆವೇಶ್ ಖಾನ್, ವಾಷಿಂಗ್ಟನ್ ಸುಂದರ್

ಇಂಗ್ಲೆಂಡ್‌ಗೆ ಶಾ, ಸೂರ್ಯಕುಮಾರ್

ನವದೆಹಲಿ (ಪಿಟಿಐ): ಯುವ ಬ್ಯಾಟ್ಸ್‌ಮನ್‌ಗಳಾದ ಪೃಥ್ವಿ ಶಾ ಮತ್ತು ಸೂರ್ಯಕುಮಾರ್ ಯಾದವ್ ಅವರು ಇಂಗ್ಲೆಂಡ್‌ನಲ್ಲಿರುವ ಭಾರತ ಟೆಸ್ಟ್ ತಂಡವನ್ನು ಸೇರಲು ವೇದಿಕೆ ಸಜ್ಜಾಗಿದೆ. ಗಾಯಗೊಂಡಿರುವ ಆಟಗಾರರ ಬದಲು ಅವರಿಬ್ಬರನ್ನು ಕರೆಸಿಕೊಳ್ಳಲು ನಿರ್ಧರಿಸಲಾಗಿದೆ.

ಸದ್ಯ ಪೃಥ್ವಿ ಮತ್ತು ಸೂರ್ಯಕುಮಾರ್ ಶ್ರೀಲಂಕಾದಲ್ಲಿ ನಿಗದಿತ ಓವರ್‌ಗಳ ಸರಣಿಗಳನ್ನು ಆಡಲು ತೆರಳಿರುವ ತಂಡದ ಜೊತೆ ಇದ್ದಾರೆ. ಟೆಸ್ಟ್ ತಂಡದಲ್ಲಿದ್ದ ಶುಭಮನ್ ಗಿಲ್, ಆವೇಶ್ ಖಾನ್ ಮತ್ತು ವಾಷಿಂಗ್ಟನ್ ಸುಂದರ್ ಗಾಯಗೊಂಡಿರುವ ಕಾರಣ ಇವರಿಬ್ಬರಿಗೆ ಅವಕಾಶ ನೀಡಲಾಗಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಸೋಮವಾರ ತಿಳಿಸಿದೆ.

ಶ್ರೀಲಂಕಾ ಎದುರಿನ ಏಕದಿನ ಸರಣಿಯನ್ನು 2–1ರಲ್ಲಿ ಗೆದ್ದಿರುವ ಶಿಖರ್ ಧವನ್ ನೇತೃತ್ವದ ಭಾರತ ತಂಡ ಭಾನುವಾರ ನಡೆದ ಮೊದಲ ಟಿ20 ಪಂದ್ಯದಲ್ಲಿ ಭಾರತ 38 ರನ್‌ಗಳಿಂದ ಜಯ ಗಳಿಸಿತ್ತು. ಎರಡನೇ ಪಂದ್ಯ ಮಂಗಳವಾರ ನಡೆಯಲಿದೆ. ಪೃಥ್ವಿ ಮತ್ತು ಸೂರ್ಯಕುಮಾರ್ ಮೂರನೇ ಟಿ20 ಪಂದ್ಯಕ್ಕೆ ಲಭ್ಯ ಇರುತ್ತಾರೆಯೇ ಇಲ್ಲವೇ ಎಂಬುದನ್ನು ಮಂಡಳಿ ಸ್ಪಷ್ಟಪಡಿಸಿಲ್ಲ. ಕೋವಿಡ್ ಸೋಂಕಿಗೆ ಒಳಗಾಗಿದ್ದ ವಿಕೆಟ್ ಕೀಪರ್ ರಿಷಭ್ ಪಂತ್ ಚೇತರಿಸಿಕೊಂಡಿದ್ದು ಎರಡು ಪರೀಕ್ಷಾ ವರದಿಗಳ ವರದಿಯೂ ನೆಗೆಟಿವ್ ಆಗಿದೆ. ಆಗಸ್ಟ್ 4ರಿಂದ ನಡೆಯಲಿರುವ ಮೊದಲ ಟೆಸ್ಟ್ ಪಂದ್ಯಕ್ಕೆ ಅಭ್ಯಾಸ ಆರಂಭಿಸಿದ್ದಾರೆ.

ಬೌಲಿಂಗ್ ಕೋಚ್ ಬಿ.ಅರುಣ್, ವಿಕೆಟ್ ಕೀಪರ್ ವೃದ್ಧಿಮಾನ್ ಸಹಾ ಮತ್ತು ಬ್ಯಾಟ್ಸ್‌ಮನ್ ಅಭಿಮನ್ಯು ಈಶ್ವರನ್ ಅವರ ಪ್ರತ್ಯೇಕವಾಸ ಮುಗಿದಿದ್ದು ತಂಡ ಸೇರಿದ್ದಾರೆ.

ಸೌತಾಂಪ್ಟನ್‌ನಲ್ಲಿ ನಡೆದಿದ್ದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ನಂತರ ವಿರಾಟ್ ಕೊಹ್ಲಿ ನೇತೃತ್ವದ ಭಾರತ ತಂಡಕ್ಕೆ ವಿರಾಮ ನೀಡಲಾಗಿತ್ತು. ಆದರೆ ಆಟಗಾರರು ಇಂಗ್ಲೆಂಡ್‌ನಲ್ಲೇ ಉಳಿದುಕೊಂಡಿದ್ದರು. ಪಂತ್ ಅವರಿಗೆ ಕೋವಿಡ್ ಇರುವುದು ಜುಲೈ 8ರಂದು ಖಾತರಿಯಾಗಿತ್ತು. ನೆಟ್ಸ್‌ನಲ್ಲಿ ಬೌಲಿಂಗ್ ಮಾಡುವ ದಯಾನಂದ್ ಗರಾನಿ ಅವರಿಗೂ ಸೋಂಕು ತಗುಲಿತ್ತು. ಅವರ ಸಂಪರ್ಕದಲ್ಲಿದ್ದರು ಎಂಬ ಕಾರಣಕ್ಕೆ ಅರುಣ್, ಸಹಾ ಮತ್ತು ಈಶ್ವರನ್ ಅವರನ್ನು 10 ದಿನ ಪ್ರತ್ಯೇಕವಾಸದಲ್ಲಿ ಇರುವಂತೆ ಸೂಚಿಸಲಾಗಿತ್ತು.


ಪೃಥ್ವಿ ಶಾ –ಎಎಫ್‌ಪಿ ಚಿತ್ರ


ಸೂರ್ಯಕುಮಾರ್ ಯಾದವ್– ಎಪಿ ಚಿತ್ರ

ಪಾಲೆರ್ಮೊ ಓಪನ್ ಟೆನಿಸ್ ಟೂರ್ನಿ: ಕಾಲಿನ್ಸ್‌ಗೆ ಪ್ರಶಸ್ತಿ

ಪಾಲೆರ್ಮೊ (ಎಪಿ): ಅಗ್ರ ಶ್ರೇಯಾಂಕದ ಡ್ಯಾನಿಯಲ್ ಕಾಲಿನ್ಸ್ ಅವರು ಪಾಲೆರ್ಮೊ ಓಪನ್ ಮಹಿಳಾ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಅಮೆರಿಕ ಆಟಗಾರ್ತಿಗೆ ಒಲಿದ ಮೊದಲ ಡಬ್ಲ್ಯುಟಿಎ ಪ್ರಶಸ್ತಿ ಇದು.

ಇಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಅವರು 6-4, 6-2ರಿಂದ ರುಮಾನಿಯಾದ ಎಲೆನಾ– ಗೇಬ್ರಿಯೇಲಾ ರೂಸ್ ಅವರನ್ನು ಮಣಿಸಿದರು. ಎಲೆನಾ ಅವರು ಅರ್ಹತಾ ಸುತ್ತಿನಿಂದ ಗೆದ್ದು ಬಂದಿದ್ದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 44ನೇ ಸ್ಥಾನದಲ್ಲಿರುವ ಕಾಲಿನ್ಸ್ ಇಲ್ಲಿ ವೃತ್ತಿಜೀವನದ ಮೊದಲ ಫೈನಲ್ ಪಂದ್ಯವನ್ನು ಆಡಿದರು.

ಎರಡು ವಾರಗಳ ಹಿಂದೆ ಹ್ಯಾಂಬರ್ಗ್‌ನಲ್ಲಿ ನಡೆದ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ರೂಸ್ ಅವರು ಕಾಲಿನ್ಸ್ ಅವರಿಗೆ ಸೋಲಿನ ರುಚಿ ತೋರಿಸಿದ್ದರು.


ಜುವಾನನ್ ಗೊನ್ಸಾಲೆಸ್

ಐಎಸ್‌ಎಲ್: ಹೈದರಾಬಾದ್ ಎಫ್‌ಸಿಗೆ ಜುವಾನನ್

ಹೈದರಾಬಾದ್ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಆಡುವ ಹೈದರಾಬಾದ್ ಎಫ್‌ಸಿಯು (ಎಚ್‌ಎಫ್‌ಸಿ) ಸ್ಪ್ಯಾನಿಷ್ ಆಟಗಾರ ಜುವಾನನ್ ಆಂಟೊನಿಯೊ ಗೊನ್ಸಾಲೆಸ್ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ.

ಬೆಂಗಳೂರು ಎಫ್‌ಸಿಯೊಂದಿಗೆ ಐದು ವರ್ಷಗಳ ಕಾಲ ಆಡಿದ್ದ 34 ವರ್ಷದ ಜುವಾನನ್ ಅವರ ಜೊತೆಗೆ ಎಚ್‌ಎಫ್‌ಸಿ ಒಂದು ವರ್ಷದ ಒಪ್ಪಂದಕ್ಕೆ ಸಹಿ ಹಾಕಿದೆ.

ಐಎಸ್‌ಎಲ್ ಟೂರ್ನಿಯಲ್ಲಿ ಅವರು 71 ಪಂದ್ಯಗಳನ್ನು ಆಡಿದ್ದಾರೆ. ಐದು ಗೋಲುಗಳು ಅವರ ಖಾತೆಯಲ್ಲಿವೆ.

ಟಿ20 ಕ್ರಿಕೆಟ್: ಸರಣಿ ವಶದತ್ತ ಭಾರತದ ಚಿತ್ತ

ಕೊಲಂಬೊ (ಪಿಟಿಐ): ಇಂಗ್ಲೆಂಡ್‌ನಲ್ಲಿರುವ ಭಾರತ ಟೆಸ್ಟ್ ತಂಡ ಸೇರಿಕೊಳ್ಳುವ ಸಿದ್ಧತೆಯಲ್ಲಿ ಸೂರ್ಯಕುಮಾರ್ ಯಾದವ್ ಮತ್ತು ಪೃಥ್ವಿ ಶಾ ಇದ್ದಾರೆ.

ಆದ್ದರಿಂದ ಮಂಗಳವಾರ ಇಲ್ಲಿ ನಡೆಯಲಿರುವ ಶ್ರೀಲಂಕಾ ಎದುರಿನ ಎರಡನೇ ಟಿ20 ಪಂದ್ಯದಲ್ಲಿ ಅವರಿಬ್ಬರ ಸ್ಥಾನಗಳಲ್ಲಿ ಆಡಲು ಯುವಪ್ರತಿಭೆಗಳಿಗೆ ಅವಕಾಶ ಸಿಗುವ ಸಾಧ್ಯತೆ ಇದೆ.

ಪೃಥ್ವಿ ಶಾ ಸ್ಥಾನದಲ್ಲಿ ಇನಿಂಗ್ಸ್ ಆರಂಭಿಸಲು ಕರ್ನಾಟಕದ ದೇವದತ್ತ ಪಡಿಕ್ಕಲ್ ಅಥವಾ ಮಹಾರಾಷ್ಟ್ರದ ಋತುರಾಜ್ ಗಾಯಕವಾಡ್ ಅವರಲ್ಲಿ ಒಬ್ಬರು ಸ್ಥಾನ ಗಳಿಸಬಹುದು.

ಕೇರಳದ ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಮತ್ತೊಂದು ಅವಕಾಶ ಪಡೆಯುವುದು ಬಹುತೇಕ ಖಚಿತವಾಗಿದ್ದು, ತಮ್ಮ ಸಾಮರ್ಥ್ಯವನ್ನು ತೋರಲು ಸಿದ್ಧರಾಗಿದ್ದಾರೆ. ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯದಲ್ಲಿ ಗೆದ್ದಿರುವ ಭಾರತವು ಸರಣಿ ಕೈವಶ ಮಾಡಿಕೊಳ್ಳುವ ಛಲದಲ್ಲಿದೆ. ಮಧ್ಯಮವೇಗಿ ಭುವನಶ್ವರ್ ಕುಮಾರ್ ಉತ್ತಮ


ಈ ಪಂದ್ಯದಲ್ಲಿ ತಿರುಗೇಟು ನೀಡಲು ಶ್ರೀಲಂಕಾ ಸಿದ್ಧವಾಗಿದೆ. ಏಕದಿನ ಸರಣಿಯ ಸೋಲು ಮತ್ತು ಮೊದಲ ಟಿ20 ಪಂದ್ಯದ ನಿರಾಶೆ ನಂತರ ತಂಡದ ಬಗ್ಗೆ ಬಹಳಷ್ಟು ಟೀಕೆಗಳು ವ್ಯಕ್ತವಾಗಿವೆ. ಆದ್ದರಿಂದ ಈ ಸರಣಿಯ ಗೆಲುವಿನ ಅವಕಾಶ ಜೀವಂತವಾಗಿರಬೇಕಾದರೆ ಈ ಪಂದ್ಯದಲ್ಲಿ ಜಯಿಸುವುದು ಆತಿಥೇಯರಿಗೆ ಅನಿವಾರ್ಯವಾಗಿದೆ.

ತಂಡಗಳು: ಭಾರತ: ಶಿಖರ್ ಧವನ್ (ನಾಯಕ), ಇಶಾನ್ ಕಿಶನ್ (ವಿಕೆಟ್‌ಕೀಪರ್), ಸಂಜು ಸ್ಯಾಮ್ಸನ್, ಹಾರ್ದಿಕ್ ಪಾಂಡ್ಯ, ಕೃಣಾಲ್ ಪಾಂಡ್ಯ, ಭುವನೇಶ್ವರ್ ಕುಮಾರ್, ದೀಪಕ್ ಚಾಹರ್, ಯಜುವೇಂದ್ರ ಚಾಹಲ್, ವರುಣ್ ಚಕ್ರವರ್ತಿ, ಮನೀಷ್ ಪಾಂಡೆ, ಕುಲದೀಪ್ ಯಾದವ್, ಕೆ. ಗೌತಮ್, ನಿತೀಶ್ ರಾಣಾ, ನವದೀಪ್ ಸೈನಿ, ಋತುರಾಜ್ ಗಾಯಕವಾಡ್, ದೇವದತ್ತ ಪಡಿಕ್ಕಲ್, ರಾಹುಲ್ ಚಾಹರ್, ಚೇತನ್ ಸಕಾರಿಯಾ.

ಶ್ರೀಲಂಕಾ: ದಸುನ್ ಶನಾಕ (ನಾಯಕ), ಮಿನೊದ್ ಭಾನುಕಾ (ವಿಕೆಟ್‌ಕೀಪರ್), ಅವಿಷ್ಕಾ ಫರ್ನಾಂಡೊ, ಧನಂಜಯ ಡಿಸಿಲ್ವಾ, ಚರಿತ ಅಸ್ಲೆಂಕಾ, ಚಮಿಕಾ ಕರುಣಾರತ್ನೆ, ಅಷೆನ್ ಭಂಡಾರ, ವಾಣಿಂದು ಹಸರಂಗ, ಇಸುರು ಉಡಾನ, ದುಷ್ಮಂತ ಚಾಮಿರಾ, ಅಖಿಲ ಧನಂಜಯ್, ಭಾನುಕಾ ರಾಜಪಕ್ಷೆ, ರಮೇಶ್ ಮೆಂಡಿಸ್, ಬಿನುರಾ ಫರ್ನಾಂಡೊ, ಲಕ್ಷನ್ ಸಂದಕನ್, ಪ್ರವೀಣ್ ಜಯವಿಕ್ರಂ, ಧನಂಜಯ್ ಲಕ್ಷಣ್, ಪತುಮ್ ನಿಶಾಂಕ, ಲಾಹಿರು ಉದಾರಾ, ಶಿರನ್ ಫರ್ನಾಂಡೊ.

ಪಂದ್ಯ ಆರಂಭ: ರಾತ್ರಿ 8ರಿಂದ
ನೇರಪ್ರಸಾರ: ಸೋನಿ ನೆಟ್‌ವರ್ಕ್


ಭುವನೇಶ್ವರ್ ಕುಮಾರ್


ದಸುನ್ ಶನಾಕ

ಬೀಲ್ ಚೆಸ್ ಫೆಸ್ಟಿವಲ್: ನಿಹಾಲ್‌ಗೆ 2ನೇ ಸ್ಥಾನ

ಬೀಲ್, ಸ್ವಿಟ್ಜರ್ಲೆಂಡ್ (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ನಿಹಾಲ್ ಸರಿನ್ ಅವರು ಬೀಲ್ ಚೆಸ್ ಫೆಸ್ಟಿವಲ್‌ನ ರ‍್ಯಾಪಿಡ್ ವಿಭಾಗದಲ್ಲಿ ಎರಡನೇ ಸ್ಥಾನ ಗಳಿಸಿದ್ದಾರೆ. ಟೂರ್ನಿಯಲ್ಲಿ ಅವರು ಒಟ್ಟು ನಾಲ್ಕು ಗೆಲುವು ಹಾಗೂ ಎರಡು ಡ್ರಾ ಸಾಧಿಸಿದರು.

17 ವರ್ಷದ ನಿಹಾಲ್ (ಇಎಲ್‌ಒ ರೇಟಿಂಗ್ 2620) ಅವರು ಭಾನುವಾರ ರಾತ್ರಿ ನಡೆದ ಕೊನೆಯ ಸುತ್ತಿನಲ್ಲಿ ಗ್ರ್ಯಾಂಡ್‌ಮಾಸ್ಟರ್ ಗ್ಯಾಟಾ ಕಾಮ್‌ಸ್ಕಿ ಅವರೊಂದಿಗೆ ಡ್ರಾ ಸಾಧಿಸಿದರು. ಇದರೊಂದಿಗೆ ಅಮೆರಿಕದ ಆಟಗಾರನ ಸತತ ಐದು ಪಂದ್ಯಗಳ ಜಯದ ಓಟಕ್ಕೆ ತಡೆ ಹಾಕಿದರು.

ನಿಹಾಲ್ ಅವರು ಗಳಿಸಲು ಸಾಧ್ಯವಿದ್ದ 14 ಪಾಯಿಂಟ್ಸ್ ಪೈಕಿ 10 ಪಾಯಿಂಟ್ಸ್ ತಮ್ಮದಾಗಿಸಿಕೊಂಡರು. 11 ಪಾಯಿಂಟ್ಸ್ ಗಳಿಸಿದ ಕಾಮ್‌ಸ್ಕಿ ಮೊದಲ ಸ್ಥಾನ ತಮ್ಮದಾಗಿಸಿಕೊಂಡರು.

ಟೂರ್ನಿಯಲ್ಲಿ ನಿಹಾಲ್ ಅವರು ರಷ್ಯಾದ ಕಿರಿಲ್ ಅಲೆಕ್ಸೀಂಕೊ, ಇಸ್ರೇಲ್ ಗ್ರ್ಯಾಂಡ್‌ಮಾಸ್ಟರ್ ಬೊರಿಸ್ ಗೆಲ್‌ಫಾಂಡ್, ವಿನ್ಸೆಂಟ್ ಕೇಮರ್ ಮತ್ತು ಮ್ಯಾಕ್ಸಿಮ್ ಲಗಾರ್ಡ್ ಅವರಿಗೆ ಸೋಲಿನ ರುಚಿ ತೋರಿಸಿದರು.

ಅಲನ್ ಪಿಚೋಟ್ ಮತ್ತು ಕಾಮ್‌ಸ್ಕಿ ಎದುರು ಸಮಬಲ ಸಾಧಿಸಿದರೆ, ಸ್ವಿಟ್ಜರ್ಲೆಂಡ್‌ನ ನೋಯಲ್ ಸ್ಟುಡರ್ ಎದುರಿನ ಪಂದ್ಯವನ್ನು ಮಾತ್ರ ಕೈಚೆಲ್ಲಿದರು.

ಇಲ್ಲಿ ಭಾಗವಹಿಸಿದ ಎಂಟು ಆಟಗಾರರು ಮಂಗಳವಾರ ಆರಂಭವಾಗುವ ಕ್ಲಾಸಿಕಲ್ ವಿಭಾಗದಲ್ಲೂ ಸ್ಪರ್ಧಿಸಲಿದ್ದಾರೆ. ಇದೇ 31ರಂದು ಬ್ಲಿಟ್ಜ್ ವಿಭಾಗದ ಸ್ಪರ್ಧೆಗಳು ನಡೆಯಲಿವೆ.


ನಿಹಾಲ್ ಸರಿನ್

ಚೆಸ್: ಕ್ವಾರ್ಟರ್‌ಗೆ ವಿದಿತ್

ಸೋಚಿ, ರಷ್ಯಾ (ಪಿಟಿಐ): ಭಾರತದ ವಿದಿತ್ ಗುಜರಾತಿ ಅವರು ಫಿಡೆ ಚೆಸ್ ವಿಶ್ವಕಪ್ ಟೂರ್ನಿಯಲ್ಲಿ ಸೋಮವಾರ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ. ಐದನೇ ಸುತ್ತಿನ ಈ ಹಣಾಹಣಿಯಲ್ಲಿ ಅವರು ಅಜರ್‌ಬೈಜಾನ್‌ನ ವಾಸಿಫ್ ದುರಾರ್‌ಬಾಯ್ಲಿ ಅವರನ್ನು 1.5–0.5ರಿಂದ ಮಣಿಸಿದರು.

26 ವರ್ಷದ ವಿದಿತ್ ಅವರಿಗೆ 38 ನಡೆಗಳಲ್ಲಿ ಗೆಲುವು ಒಲಿಯಿತು. ಇವರಿಬ್ಬರ ನಡುವಿನ ಪಂದ್ಯವು ಎರಡು ಗೇಮ್‌ಗಳನ್ನು ಒಳಗೊಂಡಿತ್ತು.

ಮೊದಲ ಗೇಮ್ ಡ್ರಾನಲ್ಲಿ ಅಂತ್ಯವಾಗಿತ್ತು.

ಪಿಒಕೆ ಚುನಾವಣೆ: ಇಮ್ರಾನ್‌ಖಾನ್ ನೇತೃತ್ವದ ಪಕ್ಷ ಮೇಲುಗೈ

ಇಸ್ಲಾಮಾಬಾದ್ (ಪಿಟಿಐ): 'ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಪ್ರಧಾನಿ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ ತೆಹ್ರೀಕ್-ಇ-ಇನ್ಸಾಫ್ ಪಕ್ಷವು(ಪಿಟಿಐ) ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದು ಸರ್ಕಾರ ರಚನೆಗೆ ಪಕ್ಷವು ಸಿದ್ಧತೆ ನಡೆಸುತ್ತಿದೆ' ಎಂದು ಅಧಿಕೃತ ಫಲಿತಾಂಶ ಹೊರಬೀಳುವ ಮುನ್ನವೇ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

'ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಪಿಟಿಐ ಪಕ್ಷವು 23 ಸ್ಥಾನಗಳನ್ನು ಗೆದ್ದರೆ, ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) 8 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಪಾಕಿಸ್ತಾನ ಮುಸ್ಲಿಂ ಲೀಗ್-ನವಾಜ್ (ಪಿಎಂಎಲ್-ಎನ್) 6 ಸ್ಥಾನಗಳಲ್ಲಿ ತನ್ನದಾಗಿಸಿಕೊಂಡಿದೆ' ಎಂದು ಸರ್ಕಾರಿ ಮಾಲೀಕತ್ವದ ರೇಡಿಯೊ ಪಾಕಿಸ್ತಾನ ವರದಿ ಮಾಡಿದೆ.

ಮುಸ್ಲಿಂ ಕಾನ್ಫರೆನ್ಸ್(ಎಂಸಿ), ಜಮ್ಮು ಮತ್ತು ಕಾಶ್ಮೀರ ಪೀಪಲ್ಸ್ ಪಾರ್ಟಿ(ಜೆಕೆಪಿಪಿ) ತಲಾ ಒಂದು ಸ್ಥಾನವನ್ನು ಗೆದ್ದಿದೆ.

ಆದರೆ ಜಿಯೊ ಟಿವಿ ವರದಿ ಪ್ರಕಾರ, ಪಿಟಿಐ ಪಕ್ಷವು 25 ಸ್ಥಾನಗಳು, ಪಾಕಿಸ್ತಾನ ಪೀಪಲ್ಸ್ ಪಾರ್ಟಿಯು 9 ಸ್ಥಾನಗಳು, ಪಿಎಂಎಲ್–ಎನ್ ಪಕ್ಷವು 6 ಸ್ಥಾನಗಳು, ಎಂಸಿ ಹಾಗೂ ಜೆಕೆಪಿಪಿಯು ತಲಾ ಒಂದು ಸ್ಥಾನವನ್ನು ಪಡೆದಿದೆ.


ಇಮ್ರಾನ್ ಖಾನ್

ಅಫ್ಗಾನಿಸ್ತಾನ: ಮಹಿಳೆ, ಮಕ್ಕಳ ಸಾವು ಪ್ರಕರಣ ಏರಿಕೆ

ಕಾಬೂಲ್ (ಎಪಿ): ಅಫ್ಗಾನಿಸ್ತಾನದಲ್ಲಿ ಪ್ರಸಕ್ತ ವರ್ಷದ ಮೊದಲಾರ್ಧದಲ್ಲಿ ಮಹಿಳೆಯರು ಮತ್ತು ಮಕ್ಕಳ ಸಾವು–ನೋವು ಪ್ರಕರಣಗಳು ಕಳೆದ 12 ವರ್ಷಗಳಿಗಿಂತ ಏರಿಕೆ ಕಂಡಿದೆ ಎಂದು ವಿಶ್ವಸಂಸ್ಥೆ ವರದಿ ಸೋಮವಾರ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ, ಈ ವರ್ಷ ದೇಶದಲ್ಲಿ ನಡೆದ ಹಿಂಸಾತ್ಮಕ ಕೃತ್ಯಗಳಿಂದಾಗಿ ಮೃತ ನಾಗರಿಕರ ಸಂಖ್ಯೆ ಶೇ 47 ರಷ್ಟು ಏರಿಕೆಯಾಗಿದೆ ಎಂದು ವರದಿ ಹೇಳಿದೆ. 2021ರ ಮೊದಲಾರ್ಧದಲ್ಲಿ ಸಶಸ್ತ್ರ ಸಂಘರ್ಷದಿಂದಾಗಿ ದೇಶದಲ್ಲಿ 1,659 ನಾಗರಿಕರು ಮೃತಪಟ್ಟಿದ್ದು, 3,524 ಮಂದಿ ಗಾಯಗೊಂಡಿದ್ದಾರೆ. ಮೃತರಲ್ಲಿ 468 ಮಕ್ಕಳು ಮತ್ತು 219 ಮಹಿಳೆಯರು ಸೇರಿದ್ದಾರೆ ಎಂದು ತಿಳಿಸಲಾಗಿದೆ.

ಚೀನಾ: ಆ್ಯಪ್‌ಗಳಲ್ಲಿ ಸಮಸ್ಯೆ ಸರಿಪಡಿಸಲು 6 ತಿಂಗಳ ಅಭಿಯಾನ

ಬೀಜಿಂಗ್ (ಎಪಿ): ಗ್ರಾಹಕ ಹಕ್ಕುಗಳ ಉಲ್ಲಂಘನೆ, ಸೈಬರ್ ಭದ್ರತೆಗೆ ಧಕ್ಕೆ, ಮಾರುಕಟ್ಟೆಯನ್ನು ಏರುಪೇರು ಮಾಡುವ ಉದ್ದೇಶದ ಆ್ಯಪ್‌ಗಳ ತೆರವಿಗಾಗಿ 6 ತಿಂಗಳ ಸ್ವಚ್ಛತಾ ಅಭಿಯಾನವನ್ನು ಚೀನಾ ಆರಂಭಿಸಿದೆ.

ಚೀನಾದ ಕೈಗಾರಿಕೆ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು ಈ ಕುರಿತು ಆನ್‌ಲೈನ್ ನೋಟಿಸ್ ನೀಡಿದ್ದಾರೆ. ಗ್ರಾಹಕರಿಗೆ ತಪ್ಪುಮಾಹಿತಿ ಒದಗಿಸುವ ಪಾಪ್ ಅಪ್ ಸಮಸ್ಯೆಗಳನ್ನು ಆ್ಯಪ್‌ಗಳಲ್ಲಿ ಸರಿಪಡಿಸಬೇಕು ಎಂದಿದ್ದಾರೆ.

ಉದ್ಯಮ ಸಂಸ್ಥೆಗಳು ಮತ್ತು ಪೊಲೀಸರು ವ್ಯಕ್ತಿಗತ ಮಾಹಿತಿಗಳನ್ನು ಬಳಸುವುದನ್ನು ತಡೆಯುವುದು ಈ ಅಭಿಯಾನದ ಪ್ರಮುಖ ಉದ್ದೇಶ.